ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ಸ್ತೋತ್ರಮಾಲಾ - ೨

(ಪಾಂಡವಗೀತಾ ಸಮೇತ)

ಸಂಗ್ರಾಹಕ ಮತ್ತು ಅನುವಾದಕ :
ಅಧ್ಯಾತ್ಮವಿದ್ಯಾಪ್ರವೀಣ
ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ

ಕ್ರಮಾಂಕ ೧೭೫

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ.
1999

ಮೊದಲನೆಯ ಮುದ್ರಣ ೧೯೭೫
೧೦೦೦ ಪ್ರತಿಗಳು
ಎರಡನೆಯ ಮುದ್ರಣ ೧೯೯೯
೧೦೦೦ ಪ್ರತಿಗಳು

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
(All Rights Reserved)

ಮುದ್ರಣಸ್ಥಾನ :
**ಶ್ರೀ ಗಣೇಶ ಮಾರುತಿ ಪ್ರಿಂಟರ್ಸ್**
ನಂ. 76, 3ನೇ ಬ್ಲಾಕ್, 6ನೇ ಮುಖ್ಯರಸ್ತೆ
ತ್ಯಾಗರಾಜನಗರ, ಬೆಂಗಳೂರು - 28
ದೂರವಾಣಿ : 6528542

# ಪೀಠಿಕೆ

ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟಿಸುತ್ತಿರುವ ಗ್ರಂಥಗಳ ಸಾಲಿನಲ್ಲಿ ಸ್ತೋತ್ರಗ್ರಂಥಗಳನ್ನೂ ಸೇರಿಸಿಕೊಳ್ಳಲಾಗಿದೆ. ಈವರೆಗೆ ಈ ಸಂಸ್ಥೆಯಿಂದ ಕೆಲವು ಸ್ತೋತ್ರಗಳು ಪ್ರತಿಪದಾರ್ಥ, ಭಾವಾರ್ಥ, ತಾತ್ಪರ್ಯ, ವಿವರಣೆಗಳ ಸಮೇತ ಪ್ರಕಟವಾಗಿರುತ್ತವೆ.

'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯಲ್ಲಿಯೂ ಹಿಂದಿನಿಂದಲೂ ಸಂದರ್ಭಾನುಸಾರವಾಗಿ ಸ್ತೋತ್ರಗಳನ್ನು ಆಯ್ದು ಅರ್ಥಸಮೇತ ಪ್ರಕಟಿಸುವ ಪದ್ಧತಿಯಿದೆ. ಈಗಲೂ ಈ ಪದ್ಧತಿಯನ್ನು ಅನುಸರಿಸುತ್ತಿದೇವೆ. ಭಾವುಕರಾದ ಅನೇಕ ವಾಚಕರು ಇವುಗಳ ಪ್ರಯೋಜನವನ್ನು ಪಡೆದಿರುತ್ತಾರೆ.

ಪ್ರಕೃತ ಈ ಗ್ರಂಥವು ಮುಖ್ಯವಾದ ಕೆಲವು ಸ್ತೋತ್ರಗಳನ್ನು ಅರ್ಥಸಮೇತವಾಗಿ ಒಳಗೊಂಡಿರುತ್ತದೆ. ವಿನಾಯಕ, ಶಿವ ಮತ್ತು ವಿಷ್ಣು ಪರವಾದ ಕೆಲವು ಸ್ತೋತ್ರಗಳನ್ನು ವಿಂಗಡವಾಗಿ ಜೋಡಿಸಿ ಇಲ್ಲಿ ಕೊಡಲಾಗಿದೆ. ವಿಷ್ಣುಸ್ತೋತ್ರಗಳಲ್ಲಿ ಪ್ರಸಿದ್ಧವಾದ ''ಪಾಂಡವಗೀತೆ''ಯನ್ನೂ ಇಲ್ಲಿ ಸೇರಿಸಿಕೊಳ್ಳಲಾಗಿದೆ.

ಸ್ತೋತ್ರಗಳನ್ನು ಆರಿಸಿಕೊಳ್ಳುವಾಗ ನಾವು ಬಹಳಮಟ್ಟಿಗೆ ಅಧ್ಯಾತ್ಮಪರವಾಗಿಯೂ, ಭಕ್ತಿಪರವಾಗಿಯೂ ಇರುವಂಥವುಗಳನ್ನೇ ತೆಗೆದುಕೊಂಡಿದ್ದೇವೆ. ಸಂಸ್ಕೃತಸಾಹಿತ್ಯದಲ್ಲಿ ಸ್ತೋತ್ರಗಳಿಗೆ ವಿಶಿಷ್ಟ ಸ್ಥಾನವುಂಟು. ಅವು ಕರ್ಮ, ಧ್ಯಾನ, ಯೋಗ, ತಂತ್ರ, ಉಪಾಸನೆ, ಜ್ಞಾನವೇ-ಮುಂತಾದ ವಿಷಯಗಳನ್ನು ವಿಸ್ತರಿಸುವ ಶರೀರವುಳ್ಳವಾಗಿರುವವು. ಮತ್ತು ಭಕ್ತರ ಹೃದಯಕ್ಕೆ ಮೆಚ್ಚಾಗುವಂತೆ ಭಗವಂತನ ನಾನಾ ಅವತಾರಗಳು ಹಾಗೂ ವಿಶಿಷ್ಟವಾದ ರೂಪಗಳ ವರ್ಣನೆಯನ್ನೂ ಒಳಗೊಂಡಿರುವವು. ಪೌರಾಣಿಕಸ್ತೋತ್ರಗಳಂತೂ ಹೆಚ್ಚಿನ ಮಹಿಮೆಯುಳ್ಳವಾಗಿರುವವು. ಕೆಲವು ವೇಳೆ ಅವು ವೇದಮಂತ್ರಗಳ ಸ್ಥಾನವನ್ನೂ ಆಕ್ರಮಿಸುವಂಥ ಯೋಗ್ಯತೆಯುಳ್ಳವಾಗಿರುವವು. ಪ್ರತಿಯೊಂದು ಸ್ತೋತ್ರಕ್ಕೂ ತನ್ನದೇ ಆದ ಹೆಚ್ಚುಗಾರಿಕೆಯು ಇದ್ದುಕೊಂಡಿರುವದು.

ಈ ಗ್ರಂಥದಲ್ಲಿರುವ ಸ್ತೋತ್ರಗಳನ್ನೂ ಅವುಗಳ ಭಾವಾರ್ಥವನ್ನೂ ಸಹೃದಯರಾದ ವಾಚಕರು ಸ್ವೀಕರಿಸಿ ಉಪಯೋಗಮಾಡಿಕೊಳ್ಳುವರೆಂದು ಆಶಿಸಲಾಗಿದೆ.

1977ರಲ್ಲಿ ಮೊದಲಬಾರಿಗೆ ಪ್ರಕಟವಾಗಿದ್ದ ಈ ಗ್ರಂಥವನ್ನು ಪರಿಶೋಧಿಸಿ ಪ್ರಕಟಿಸಲಾಗಿದೆ. ವಾಚಕರು ಈ ಗ್ರಂಥವನ್ನೂ ಎಂದಿನಂತೆ ಬರಮಾಡಿಕೊಂಡು ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಪ್ರಮಾಥಿ ಸಂ||
ಮಾರ್ಗಶೀರ್ಷ ಬಹುಳ ಅಷ್ಟಮಿ — ಇತಿ,
ತಾ|| 31-12-1999 — ಪ್ರಕಾಶಕರು

# ವಿಷಯಾನುಕ್ರಮಣಿಕೆ


| | | ಪುಟ |
|---|---|---|
| ೧. | ಗಣನಾಯಕಾಷ್ಟಕಮ್ | ೧ |
| ೨. | ಸಂಕಟಹರ ಗಣಪತಿಸ್ತೋತ್ರಮ್ | ೩ |
| ೩. | ಗಣೇಶಭುಜಂಗಮ್ | ೪ |
| ೪. | ಗಣೇಶಪಂಚಚಾಮರಸ್ತೋತ್ರಮ್ | ೭ |
| ೫. | ಗಣಾಧಿಪ ಪಂಚರತ್ನಮ್ | ೯ |
| ೬. | ಚಂದ್ರಶೇಖರಾಷ್ಟಕಮ್ | ೧೨ |
| ೭. | ಶಿವಪಂಚಾಕ್ಷರಸ್ತೋತ್ರಮ್ | ೧೭ |
| ೮. | ಅಪರಾಧಕ್ಷಮಾಪಣಸ್ತೋತ್ರಮ್ | ೧೮ |
| ೯. | ವಿಶ್ವನಾಥಾಷ್ಟಕಮ್ | ೨೪ |
| ೧೦. | ಪಂಚಾಕ್ಷರೀ - ಅಷ್ಟೋತ್ತರಶತನಾಮಸ್ತೋತ್ರಮ್ | ೨೬ |
| ೧೧. | ಅರ್ಧನಾರೀಶ್ವರಾಷ್ಟಕಮ್ | ೩೬ |
| ೧೨. | ಪ್ರದೋಷಾಷ್ಟಕಮ್ | ೩೮ |
| ೧೩. | ಉಪಮನ್ಯುಕೃತ ಶಿವಸ್ತೋತ್ರಮ್ | ೪೧ |
| ೧೪. | ಶಿವಭುಜಂಗಸ್ತೋತ್ರಮ್ | ೪೬ |
| ೧೫. | ವೇದಸಾರಶಿವಸ್ತೋತ್ರಮ್ | ೫೭ |
| ೧೬. | ದ್ವಾದಶಜ್ಯೋತಿರ್ಲಿಂಗಸ್ತೋತ್ರಮ್ | ೬೦ |
| ೧೭. | ವಿಷ್ಣುಷೋಡಶನಾಮಸ್ತೋತ್ರಮ್ | ೬೧ |
| ೧೮. | ಪಾಂಡವಗೀತಾ | ೬೨ |

॥ಓಂ॥

# ಸ್ತೋತ್ರ ಮಾಲಾ - ೨

## ಗಣಪತಿಯ ಸ್ತೋತ್ರಗಳು

### ೧. ಗಣನಾಯಕಾಷ್ಟಕಮ್

**ಏಕದಂತಂ ಮಹಾಕಾಯಂ ತಪ್ತಕಾಂಚನಸನ್ನಿಭಮ್ ।**
**ಲಂಬೋದರಂ ವಿಶಾಲಾಕ್ಷಂ ವಂದೇಽಹಂ ಗಣನಾಯಕಮ್ ॥ ೧ ॥**

೧. ಒಂದೇ ಕೋರೆದಾಡೆಯುಳ್ಳವನೂ ದೊಡ್ಡ ಶರೀರವುಳ್ಳವನೂ ಪುಟವಿಟ್ಟ ಚಿನ್ನದಂತೆ ಕಾಂತಿಯುಳ್ಳವನೂ ದೊಡ್ಡ ಹೊಟ್ಟೆಯುಳ್ಳವನೂ ಅಗಲವಾದ ಕಣ್ಣುಗಳುಳ್ಳವನೂ ಆದ ಗಣನಾಯಕನನ್ನು ನಾನು ನಮಸ್ಕರಿಸುವೆನು.

**ಮೌಂಜೀ ಕೃಷ್ಣಾಜಿನಧರಂ ನಾಗಯಜ್ಞೋಪವೀತಿನಮ್ ।**
**ಬಾಲೇಂದುಶಕಲಂ ಮೌಳೌ ವಂದೇಽಹಂ ಗಣನಾಯಕಮ್ ॥ ೨ ॥**

೨. ಮೌಂಜಿಯನ್ನೂ ಕೃಷ್ಣಾಜಿನವನ್ನೂ* ಧರಿಸಿರುವ, ಹಾವನ್ನೇ ಯಜ್ಞೋಪವೀತವಾಗಿ ಮಾಡಿಕೊಂಡಿರುವ, ಬಾಲಚಂದ್ರನ ರೇಖೆಯನ್ನು ತಲೆಯಲ್ಲಿ ಧರಿಸಿರುವ ಗಣಪತಿಯನ್ನು ನಾನು ನಮಸ್ಕರಿಸುತ್ತೇನೆ.

**ಚಿತ್ರರತ್ನವಿಚಿತ್ರಾಂಗಂ ಚಿತ್ರಮಾಲಾವಿಭೂಷಿತಮ್ ।**
**ಕಾಮರೂಪಧರಂ ದೇವಂ ವಂದೇಽಹಂ ಗಣನಾಯಕಮ್ ॥ ೩ ॥**

೩. ಚಿತ್ರ ವಿಚಿತ್ರವಾದ ರತ್ನಾಭರಣಗಳಿಂದ ಅಲಂಕೃತನಾದ, ಬಗೆ ಬಗೆಯ (ಹೂಗಳ) ಮಾಲೆಯನ್ನು ಧರಿಸಿರುವ, ತನಗೆ ಇಷ್ಟಬಂದ ರೂಪವನ್ನು ಧರಿಸುವ ಸಾಮರ್ಥ್ಯವುಳ್ಳ ದೇವನಾದ ಗಣನಾಯಕನನ್ನು ವಂದಿಸುವೆನು.

**ಗಜವಕ್ತ್ರಂ ಸುರಶ್ರೇಷ್ಠಂ ಕರ್ಣಚಾಮರಭೂಷಿತಮ್ ।**
**ಪಾಶಾಂಕುಶಧರಂ ದೇವಂ ವಂದೇಽಹಂ ಗಣನಾಯಕಮ್ ॥ ೪ ॥**

* ಬ್ರಹ್ಮಚಾರಿಗಳು ಸೊಂಟದಲ್ಲಿ ದರ್ಭೆ ಹುಲ್ಲಿನಿಂದ ಹೊಸೆದಿರುವ ಮೌಂಜಿ ಎಂಬ ಉಡಿದಾರವನ್ನು ಧರಿಸಬೇಕೆಂದು ಶಾಸ್ತ್ರವಿಧಿಯಿದೆ. ಹಾಗೆಯೇ ಜನಿವಾರದಲ್ಲಿ ಕೃಷ್ಣಾಜಿನದ ಚೂರನ್ನೂ ಸಿಕ್ಕಿಸಿಕೊಂಡಿರಬೇಕೆಂದು ನಿಯಮ. ಗಣಪತಿಯನ್ನು ಬ್ರಹ್ಮಚಾರಿಯಂತ ಭಾವಿಸಿ ಇಲ್ಲಿ ಹೀಗೆ ಸ್ತುತಿಸಿದೆ.

೪. ಆನೆಯ ಮುಖವುಳ್ಳ, ದೇವತೆಗಳಲ್ಲಿ ಉತ್ತಮನಾದ, ಚಾಮರದಂತಿರುವ ಕಿವಿಗಳಿಂದ ಅಲಂಕೃತನಾದ, ಪಾಶ, ಅಂಕುಶಗಳನ್ನು ಹಿಡಿದಿರುವ ದೇವನಾದ ಗಣನಾಯಕನನ್ನು ನಮಸ್ಕರಿಸುತ್ತೇನೆ.

**ಮೂಷಕೋತ್ತಮಮಾರುಹ್ಯ ದೇವಾಸುರಮಹಾಹವೇ ।**
**ಯೋದ್ಧುಕಾಮಂ ಮಹಾವೀರ್ಯಂ ವನ್ದೇಽಹಂ ಗಣನಾಯಕಮ್ ॥ ೫ ॥**

೫. ಶ್ರೇಷ್ಠವಾದ ಇಲಿಯನ್ನು ಏರಿ ದೇವದಾನವರ ಮಹಾ ಯುದ್ಧದಲ್ಲಿ ಕಾದಾಡಲು ಇಚ್ಛೆಯುಳ್ಳ ಮಹಾವೀರನಾದ ಗಣನಾಯಕನನ್ನು ನಮಸ್ಕರಿಸುವೆನು.

**ಯಕ್ಷಕಿನ್ನರಗಂಧರ್ವಸಿದ್ಧವಿದ್ಯಾಧರೈಸ್ಸದಾ ।**
**ಸ್ತೂಯಮಾನಂ ಮಹಾಬಾಹುಂ ವನ್ದೇಽಹಂ ಗಣನಾಯಕಮ್ ॥ ೬ ॥**

೬. ಯಕ್ಷರು, ಕಿನ್ನರರು, ಗಂಧರ್ವರು, ಸಿದ್ಧರು, ವಿದ್ಯಾಧರರು - ಇವರುಗಳಿಂದ ಯಾವಾಗಲೂ ಹೊಗಳಲ್ಪಡುತ್ತಿರುವ ಮಹಾಬಾಹುವಾದ ಗಣನಾಯಕನನ್ನು ನಮಸ್ಕರಿಸುತ್ತೇನೆ.

**ಅಂಬಿಕಾಹೃದಯಾನಂದಂ ಮಾತೃಭಿಃ ಪರಿವೇಷ್ಟಿತಮ್ ।**
**ಭಕ್ತಪ್ರಿಯಂ ಮದೋನ್ಮತ್ತಂ ವನ್ದೇಽಹಂ ಗಣನಾಯಕಮ್ ॥ ೭ ॥**

೭. ಅಂಬಿಕೆಯಾದ (ಪಾರ್ವತಿಯ) ಹೃದಯಕ್ಕೆ ಆನಂದವನ್ನುಂಟು ಮಾಡುವ, ಸಪ್ತಮಾತೃಕೆಯರಿಂದೊಡಗೂಡಿದ, ಭಕ್ತರನ್ನು ಪ್ರೀತಿಸುವ, ಮದದಿಂದ ಕೊಬ್ಬಿರುವ ಗಣನಾಯಕನನ್ನು ವಂದಿಸುವೆನು.

**ಸರ್ವವಿಘ್ನಹರಂ ದೇವಂ ಸರ್ವವಿಘ್ನವಿವರ್ಜಿತಮ್ ।**
**ಸರ್ವಸಿದ್ಧಿಪ್ರದಾತಾರಂ ವನ್ದೇಽಹಂ ಗಣನಾಯಕಮ್ ॥ ೮ ॥**

೮. ಎಲ್ಲಾ ವಿಘ್ನಗಳನ್ನೂ ಪರಿಹರಿಸುವ ದೇವನಾದ, ಸಕಲ ವಿಘ್ನಗಳಿಂದಲೂ ದೂರನಾಗಿರುವ, ಎಲ್ಲಾ ಸಿದ್ಧಿಗಳನ್ನೂ ಕೊಡುವ ಗಣನಾಯಕನನ್ನು ವಂದಿಸುವೆನು.

**ಗಣಾಷ್ಟಕಮಿದಂ ಪುಣ್ಯಂ ಯಃ ಪಠೇತ್ ಸತತಂ ನರಃ ।**
**ಸಿಧ್ಯಂತಿ ಸರ್ವಕಾರ್ಯಾಣಿ ವಿದ್ಯಾವಾನ್ ಧನವಾನ್ ಭವೇತ್ ॥ ೯ ॥**

೯. ಪುಣ್ಯಕರವಾದ ಈ ಗಣನಾಯಕ ಪತಿಯ ಅಷ್ಟಕವನ್ನು ಯಾವನು ಸದಾ ಪಠಿಸುತ್ತಿರುವನೋ ಅವನ ಎಲ್ಲಾ ಕಾರ್ಯಗಳೂ ನೆರವೇರುವವು ; ವಿದ್ಯಾವಂತನೂ ಧನವಂತನೂ ಆಗುವನು.

ಇತಿ ಶ್ರೀ ಗಣನಾಯಕಾಷ್ಟಕಮ್

# ೨. ಸಂಕಟಹರಗಣಪತಿಸ್ತೋತ್ರಮ್

ಪ್ರಣಮ್ಯ ಶಿರಸಾ ದೇವಂ ಗೌರೀಪುತ್ರಂ ವಿನಾಯಕಮ್ ।
ಭಕ್ತಾವಾಸಂ ಸ್ಮರೇನ್ನಿತ್ಯಮಾಯುಷ್ಕಾಮಾರ್ಥಸಿದ್ಧಯೇ ॥ ೧ ॥

೧. ಗೌರಿಯ ಮಗನಾದ ವಿನಾಯಕ ದೇವನನ್ನು ಶಿರಸ್ಸಿನಿಂದ ವಂದಿಸಿ, ಭಕ್ತರ ಹೃದಯನಿವಾಸಿಯಾದ ಆತನನ್ನು ಆಯುಷ್ಯ, ಇಷ್ಟಾರ್ಥಸಿದ್ಧಿಗಳಿಗಾಗಿ ನಿತ್ಯವೂ ಸ್ಮರಿಸತಕ್ಕದ್ದು.

ಪ್ರಥಮಂ ವಕ್ರತುಂಡಂ ಚ ಏಕದಂತಂ ದ್ವಿತೀಯಕಮ್ ।
ತೃತೀಯಂ ಕೃಷ್ಣಪಿಂಗಾಕ್ಷಂ ಗಜವಕ್ತ್ರಂ ಚತುರ್ಥಕಮ್ ॥ ೨ ॥

೨. ಸೊಟ್ಟವಾದ ಕೋರೆದಾಡೆಯುಳ್ಳವನು ಎಂಬುದು ಮೊದಲನೆಯ ನಾಮವು. ಏಕದಂತನೆಂಬುದು ಎರಡನೆಯದು. ಕಪ್ಪಗೆ ಕಂದುಬಣ್ಣದ ಕಂಗಳುಳ್ಳವನೆಂಬುದು ಮೂರನೆಯದು. ಆನೆಯ ಮುಖವುಳ್ಳವನೆಂಬುದು ನಾಲ್ಕನೆಯದು.

ಲಂಬೋದರಂ ಪಂಚಮಂ ಚ ಷಷ್ಠಂ ವಿಕಟಮೇವ ಚ ।
ಸಪ್ತಮಂ ವಿಘ್ನರಾಜಂ ಚ ಧೂಮ್ರವರ್ಣಂ ತಥಾಷ್ಟಕಮ್ ॥ ೩ ॥

೩. ಲಂಬೋದರ (ದೊಡ್ಡ ಹೊಟ್ಟೆಯವನು) ಎಂಬುದು ಐದನೆಯ ನಾಮವು. ವಿಕಟನೆಂಬುದು ಆರನೆಯದು. ವಿಘ್ನಗಳಿಗೆ ಒಡೆಯನೆಂಬುದು ಏಳನೆಯದು. ಹೊಗೆಯಂತೆ ಬಣ್ಣವುಳ್ಳವನು ಎಂಬುದು ಎಂಟನೆಯದು.

ನವಮಂ ಫಾಲಚಂದ್ರಂ ಚ ದಶಮಂ ತು ವಿನಾಯಕಮ್ ।
ಏಕಾದಶಂ ಗಣಪತಿಂ ದ್ವಾದಶಂ ತು ಗಜಾನನಮ್ ॥ ೪ ॥

೪. ಹಣೆಯಲ್ಲಿ ಚಂದ್ರನನ್ನು ಧರಿಸಿರುವವನು - ಎಂಬುದು ಒಂಭತ್ತನೆಯದು. ತನಗೆ ಬೇರೆ ಯಾರೂ ಒಡೆಯರಿಲ್ಲದವನು ಎಂಬುದು ಹತ್ತನೆಯದು. ಗಣಗಳಿಗೆ ಪ್ರಭುವೆಂಬುದು ಹನ್ನೊಂದನೆಯದು. ಆನೆಯ ಮುಖವುಳ್ಳವನೆಂಬುದು ಹನ್ನೆರಡನೆಯದು.

ದ್ವಾದಶೈತಾನಿ ನಾಮಾನಿ ತ್ರಿಸಂಧ್ಯಂ ಯಃ ಪಠೇನ್ನರಃ ।
ನ ಚ ವಿಘ್ನಭಯಂ ತಸ್ಯ ಸರ್ವಸಿದ್ಧಿಕರಂ ಪರಮ್ ॥ ೫ ॥

೫. ಯಾವ ಮನುಷ್ಯನು ಈ ಹನ್ನೆರಡು ನಾಮಗಳನ್ನು ಮೂರು ಸಂಧ್ಯಾ ಕಾಲಗಳಲ್ಲಿಯೂ ಪಠಿಸುವನೋ ಅವನಿಗೆ ವಿಘ್ನಗಳ (ಭಯವಿರುವದಿಲ್ಲ.) ಹೆಚ್ಚಿನದಾಗಿ ಎಲ್ಲಾ ಸಿದ್ಧಿಗಳೂ ಕೈಗೂಡುವವು.

ವಿದ್ಯಾರ್ಥೀ ಲಭತೇ ವಿದ್ಯಾಂ ಧನಾರ್ಥೀ ಲಭತೇ ಧನಮ್ ।
ಪುತ್ರಾರ್ಥೀ ಲಭತೇ ಪುತ್ರಾನ್ ಮೋಕ್ಷಾರ್ಥೀ ಲಭತೇ ಗತಿಮ್ ॥ ೬ ॥

೬. ವಿದ್ಯಾರ್ಥಿಯಾದವನು ವಿದ್ಯೆಯನ್ನೂ ಧನಾರ್ಥಿಯಾದವನು ಹಣವನ್ನೂ ಪುತ್ರಾರ್ಥಿಯಾದವನು (ಗಂಡು) ಮಕ್ಕಳನ್ನೂ ಮೋಕ್ಷಾರ್ಥಿಯಾದವನು ಮೋಕ್ಷವನ್ನೂ ಪಡೆಯುತ್ತಾನೆ.

ಜಪೇದ್ ಗಣಪತಿಸ್ತೋತ್ರಂ ಷಡ್ಭಿರ್ಮಾಸೈಃ ಫಲಂ ಲಭೇತ್ ।
ಸಂವತ್ಸರೇಣ ಸಿದ್ಧಿಂ ಚ ಲಭತೇ ನಾತ್ರ ಸಂಶಯಃ ॥ ೭ ॥

೭. ಈ ಗಣಪತಿಯ ಸ್ತೋತ್ರವನ್ನು ಜಪಿಸಿದ್ದೇ ಆದರೆ ಆರು ತಿಂಗಳೊಳಗೆ ಇಷ್ಟಾರ್ಥಸಿದ್ಧಿಯನ್ನು ಹೊಂದುವನು, ಮತ್ತು ಒಂದು ವರ್ಷದೊಳಗೆ (ಪೂರ್ಣವಾಗಿ) ಕಾರ್ಯಸಿದ್ಧಿಯನ್ನು ಪಡೆದೇತೀರುವನು. ಈ ಬಗ್ಗೆ ಸಂಶಯವಿಲ್ಲ.

ಅಷ್ಟಾನಾಂ ಬ್ರಾಹ್ಮಣಾನಾಂ ಚ ಲಿಖಿತ್ವಾ ಯಸ್ಸಮರ್ಪಯೇತ್ ।
ತಸ್ಯ ವಿದ್ಯಾ ಭವೇತ್ ಸರ್ವಾ ಗಣೇಶಸ್ಯ ಪ್ರಸಾದತಃ ॥ ೮ ॥

೮. ಎಂಟು ಜನ ಬ್ರಾಹ್ಮಣರಿಗೆ ಈ ಸ್ತೋತ್ರವನ್ನು ಬರೆದು ದಾನಮಾಡಿದಲ್ಲಿ ಗಣೇಶನ ಅನುಗ್ರಹದಿಂದ ಅಂಥವನಿಗೆ ಎಲ್ಲಾ ವಿದ್ಯೆಗಳೂ ದೊರಕುವವು.

ಇತಿ ಶ್ರೀ ಸಂಕಟಹರಗಣಪತಿಸ್ತೋತ್ರಮ್

# ೩. ಗಣೇಶಭುಜಂಗಮ್ *

ರಣತ್ ಕ್ಷುದ್ರಘಂಟಾನಿನಾದಾಭಿರಾಮಂ
ಚಲತ್ತಾಂಡವೋದ್ದಂಡವತ್ ಪದ್ಮತಾಲುಮ್ ।
ಲಸತ್ತುಂದಿಲಾಂಗೋಪರಿ ವ್ಯಾಲಹಾರಂ
ಗಣಾಧೀಶಮೀಶಾನಸೂನುಂ ತಮೀಡೇ ॥ ೧ ॥

೧. ಚಿಕ್ಕ ಘಂಟೆಗಳ ಸದ್ದಿನಿಂದ ಮನೋಹರವಾಗಿರುವ, ಚಂಚಲವಾದ ದಂಟಿನ ಮೇಲಿರುವ ಕಮಲದಂತಿರುವ ದವಡೆಗಳುಳ್ಳ, ವಿರಾಜಮಾನವಾದ ಸ್ಥೂಲವಾದ ಶರೀರದಲ್ಲಿ ಧರಿಸಲ್ಪಟ್ಟ ಹಾವುಗಳ ಹಾರವುಳ್ಳ, ಪರಮೇಶ್ವರನ ಪುತ್ರನಾದ ಗಣಾಧೀಶನನ್ನು ಸ್ತುತಿಸುವೆನು.

* ಈ ಸ್ತೋತ್ರವು 'ಭುಜಂಗಪ್ರಯಾತ'ವೆಂಬ ವೃತ್ತದಲ್ಲಿರುವದರಿಂದ ಈ ಹೆಸರಿನಿಂದ ಕರೆದಿದೆ.

ಧ್ವನಿಧ್ವಂಸವೀಣಾಲಯೋಲ್ಲಾಸಿವಕ್ತ್ರಂ
ಸ್ಫುರಚ್ಛುಂಡದಂಡೋಲ್ಲಸದ್ ಬೀಜಪೂರಮ್ ।
ಗಲದ್ದರ್ಪಸೌಗನ್ಧ್ಯಲೋಲಾಲಿಮಾಲಂ
ಗಣಾಧೀಶಮೀಶಾನಸೂನುಂ ತಮೀಡೇ ॥ ೨ ॥

೨. ಕಂಠಧ್ವನಿಯ ಮಾಧುರ್ಯದಿಂದ ವೀಣೆಯ ಶಬ್ದವನ್ನೂ ಮೀರಿಸುವಂಥವನಾಗಿರುವ, ವಿರಾಜಮಾನವಾದ ಮುಖದಿಂದ ಕೂಡಿರುವ, ಹೊಳೆಯುತ್ತಿರುವ ಸೊಂಡಿಲಿನಲ್ಲಿ ಧರಿಸಿರುವ ಸೀಬೆಹಣ್ಣಿನಿಂದ ಸುಂದರನಾಗಿರುವ, ಕಂಠದಲ್ಲಿ ದರ್ಪದಿಂದುಂಟಾದ ಮದೋದಕದ ಸುವಾಸನೆಗಾಗಿ ಹಾರಾಡುತ್ತಿರುವ ಭ್ರಮರಗಳುಳ್ಳ, ಈಶ್ವರಪುತ್ರನಾದ ಗಣಾಧಿಪನನ್ನು ಸ್ತೋತ್ರಮಾಡುವೆನು.

ಪ್ರಕಾಶಜ್ಜಪಾರಕ್ತರತ್ನಪ್ರಸೂನ-
ಪ್ರವಾಲಪ್ರಭಾತಾರುಣಜ್ಯೋತಿರೇಕಮ್ ।
ಪ್ರಲಂಬೋದರಂ ವಕ್ರತುಂಡೈಕದಂತಂ
ಗಣಾಧೀಶಮೀಶಾನಸೂನುಂ ತಮೀಡೇ ॥ ೩ ॥

೩. ಹೊಳೆಯುತ್ತಿರುವ ಕೆಂಪುದಾಸವಾಳದಂತಿರುವ ರತ್ನಗಳಿಂದ ಉಂಟಾದ ಕಾಂತಿಯ ಕಿರಣಗಳೊಡಗೂಡಿದ ಸೂರ್ಯನಂತೆ ಇರುವ, ಅದ್ವಿತೀಯನಾದ, ಹೆಚ್ಚು ದೊಡ್ಡದಾದ ಉದರವುಳ್ಳವನೂ ವಕ್ರತುಂಡನೂ ಏಕದಂತನೂ ಆಗಿರುವ ಈಶ್ವರಪುತ್ರನಾದ ಗಣಪತಿಯನ್ನು ಸ್ತೋತ್ರಮಾಡುವೆನು.

ವಿಚಿತ್ರಸ್ಫುರದ್ರತ್ನಮಾಲಾಕಿರೀಟಂ
ಕಿರೀಟೋಲ್ಲಸಚ್ಚಂದ್ರರೇಖಾವಿಭೂಷಮ್ ।
ವಿಭೂಷೈಕಭೂಷಂ ಭವಧ್ವಂಸಹೇತುಂ
ಗಣಾಧೀಶಮೀಶಾನಸೂನುಂ ತಮೀಡೇ ॥ ೪ ॥

೪. ವಿಚಿತ್ರವಾಗಿ ಪ್ರಕಾಶಿಸುತ್ತಿರುವ ರತ್ನಗಳ ಸಾಲಿನಿಂದ ಅಲಂಕೃತವಾದ ಕಿರೀಟವುಳ್ಳವನಾದ, ಕಿರೀಟದಲ್ಲಿ ಎದ್ದು ಕಾಣುತ್ತಿರುವ ಚಂದ್ರರೇಖೆಯಿಂದ ಭೂಷಿತನಾದ, ಒಡವೆಗಳಿಗೆಲ್ಲ ತಕ್ಕ ಒಡವೆಯಾದ (ಒಡವೆಗಳಿಗೂ ಮೆರುಗನ್ನಿತ್ತಿರುವ) ಸಂಸಾರವನ್ನು ನಾಶಗೊಳಿಸಿ (ರಕ್ಷಿಸುವ) ಕಾರಣನಾದ ಗಣಾಧೀಶನಾದ ಈಶ್ವರಪುತ್ರನನ್ನು ನಾನು ಸ್ತೋತ್ರಮಾಡುವೆನು.

ಉದಂಚದ್ಭುಜಾವಲ್ಲರೀದೃಶ್ಯಮೂಲೋ-
ಚ್ಚಲದ್ಭ್ರೂಲತಾವಿಭ್ರಮಭ್ರಾಜದಕ್ಷಮ್ ।
ಮರುತ್ಸುಂದರೀಚಾಮರೈಃ ಸೇವ್ಯಮಾನಂ
ಗಣಾಧೀಶಮೀಶಾನಸೂನುಂ ತಮೀಡೇ ॥ ೫ ॥

೫. ಮೇಲಕ್ಕೆ ಉಬ್ಬಿದ ಭುಜಲತೆಗಳ ಬುಡದಲ್ಲಿ ಅಳ್ಳಾಡುತ್ತಿರುವ ಹುಬ್ಬುಗಳೆಂಬ ಬಳ್ಳಿಗಳ ವಿಲಾಸದಿಂದ ವಿರಾಜಮಾನನಾದ, ದೇವತಾಸ್ತ್ರೀಯರುಗಳು ಕೈಯಲ್ಲಿ ಹಿಡಿದು ಬೀಸುತ್ತಿರುವ ಚಾಮರಗಳಿಂದ ಸೇವಿತನಾದ, ಪರಮೇಶ್ವರನ ಮಗನಾದ ಗಣಪತಿಯನ್ನು ನಾನು ಸ್ತೋತ್ರ ಮಾಡುವೆನು.

ಸ್ಫುರನ್ನಿಷ್ಠುರಾಲೋಲಪಿಂಗಾಕ್ಷತಾರಂ
ಕೃಪಾಕೋಮಲೋದಾರಲೀಲಾವತಾರಮ್ ।
ಕಲಾಬಿಂದುಗಂ ಗೀಯತೇ ಯೋಗಿವರ್ಯೈಃ
ಗಣಾಧೀಶಮೀಶಾನಸೂನುಂ ತಮೀಡೇ ॥ ೬॥

೬. ಹೊಳೆಯುತ್ತಿರುವ ಕಠಿನವೂ ಚಂಚಲವೂ ಆದ ಕಂದುಬಣ್ಣದ ಕಂಗಳ ಗುಡ್ಡೆಯುಳ್ಳವನಾದ, ಭಕ್ತರ ಮೇಲಿನ ಕರುಣೆಯಿಂದ ಸ್ವೀಕರಿಸಲ್ಪಟ್ಟ ಕೋಮಲವೂ ಉದಾರವೂ ಆದ ಲೀಲಾವಿಗ್ರಹವುಳ್ಳವನಾದ, ಕಲಾಬಿಂದುವಿನಲ್ಲಿ ನೆಲಸಿರುವ, ಯೋಗಿಗಳಿಂದ ಸ್ತೋತ್ರಮಾಡಲ್ಪಡುತ್ತಿರುವ, ಈಶ್ವರಪುತ್ರನಾದ ಗಣಾಧೀಶನನ್ನು ಸ್ತೋತ್ರಮಾಡುವೆನು.

ಯಮೇಕಾಕ್ಷರಂ ನಿರ್ಮಲಂ ನಿರ್ವಿಕಲ್ಪಂ
ಗುಣಾತೀತಮಾನನ್ದಮಾಕಾರಶೂನ್ಯಮ್ ।
ಪರಂ ಪಾರಮೋಂಕಾರಮಾಮ್ನಾಯಗರ್ಭಂ
ವದಂತಿ ಪ್ರಗಲ್ಭಂ ಪುರಾಣಂ ತಮೀಡೇ ॥ ೭ ॥

೭. ಯಾವನನ್ನು ಒಂದೇ ಅಕ್ಷರವಾದ ಓಂಕಾರನೆಂದೂ ನಿರ್ಮಲನೆಂದೂ ನಿರ್ವಿಕಲ್ಪನೆಂದೂ, ಗುಣಗಳನ್ನು ಮೀರಿದ ಆನಂದಸ್ವರೂಪನೂ ಆಕಾರವಿಲ್ಲದವನೂ ಆಗಿರುವನೆಂದೂ, ಕಟ್ಟಕಡೆಯ ಮಜಲಿನಂತೆ ಓಂಕಾರಸ್ವರೂಪನಾಗಿ ಇರುವವನೆಂದೂ ವೇದಗಳನ್ನು ತನ್ನೊಳಗೆ ಧರಿಸಿರುವವನೆಂದೂ ಪುರಾಣ ಪುರುಷನೆಂದೂ ಗಟ್ಟಿಯಾಗಿ (ಶಾಸ್ತ್ರಗಳು) ಹೊಗಳುತ್ತಿರುವವೋ ಅವನನ್ನು ಸ್ತುತಿಸುವೆನು.

ಚಿದಾನಂದಸಾಂದ್ರಾಯ ಶಾಂತಾಯ ತುಭ್ಯಂ
ನಮೋ ವಿಶ್ವಕರ್ತ್ರೇ ಚ ಹರ್ತ್ರೇ ಚ ತುಭ್ಯಮ್ ।
ನಮೋಽನಂತಲೀಲಾಯ ಕೈವಲ್ಯಭಾಸೇ
ನಮೋ ವಿಶ್ವಬೀಜ ಪ್ರಸೀದೇಶಸೂನೋ ॥ ೮ ॥

೮. ಜ್ಞಾನಾನಂದಗಳ ಗಟ್ಟಿಯಾಗಿರುವ, ಶಾಂತನಾದ, ಪ್ರಪಂಚದ ಸೃಷ್ಟಿಯನ್ನು ಮಾಡುವವನೂ ನಾಶಮಾಡುವವನೂ ಆದ, ಅನಂತಲೀಲೆಗಳನ್ನು ತೋರಿಸುವ, ಮೋಕ್ಷಸ್ವರೂಪಪ್ರಕಾಶನಾದ, ವಿಶ್ವಕಾರಣನಾದ ನಿನಗೆ ನಮಸ್ಕಾರ. ಎಲೈ ಪರಮೇಶ್ವರನ ಪುತ್ರನೆ, ಪ್ರಸನ್ನನಾಗು.

ಇಮಂ ಸುಸ್ತವಂ ಪ್ರಾತರುತ್ಥಾಯ ಭಕ್ತ್ಯಾ
ಪಠೇದ್ಯಸ್ತು ಮರ್ತ್ಯೋ ಲಭೇತ್ ಸರ್ವಕಾಮಾನ್ ।
ಗಣೇಶಪ್ರಸಾದೇನ ಸಿಧ್ಯಂತಿ ವಾಚೋ
ಗಣೇಶೇ ವಿಭೌ ದುರ್ಲಭಂ ಕಿಂ ಪ್ರಸನ್ನೇ ॥ ೯ ॥

೯. ಈ ಪವಿತ್ರವಾದ ಸ್ತೋತ್ರವನ್ನು ಬೆಳಗಾಗಿ ಎದ್ದು ಭಕ್ತಿಯಿಂದ ಯಾವ ಮನುಷ್ಯನು ಪಠನಮಾಡುವನೋ ಅವನು ಸರ್ವಕಾಮಗಳನ್ನೂ ಪಡೆದುಕೊಳ್ಳುವನು. ಗಣೇಶನ ಪ್ರಸಾದದಿಂದ ವಾಕ್‌ಸಿದ್ಧಿಯೂ ಉಂಟಾಗುವದು. ವಿಭುವಾದ ಗಣೇಶನು ಪ್ರಸನ್ನನಾಗಲಾಗಿ ದುರ್ಲಭವಾದದ್ದೇನಿದ್ದೀತು?

ಇತಿ ಶ್ರೀ ಶಂಕರಭಗವತಃ ಕೃತೌ ಗಣೇಶಭುಜಂಗಮ್

# ೪. ಗಣೇಶಪಂಚಚಾಮರಸ್ತೋತ್ರಮ್ *

ಮುದಾ ಕರಾತ್ತಮೋದಕಂ ಸದಾ ವಿಮುಕ್ತಿಸಾಧಕಂ
ಕಲಾಧರಾವತಂಸಕಂ ವಿಲಾಸಿಲೋಕರಕ್ಷಕಮ್ ।
ಅನಾಯಕೈಕನಾಯಕಂ ವಿನಾಶಿತೇಭದೈತ್ಯಕಂ
ನತಾಶುಭಾಶುನಾಶಕಂ ನಮಾಮಿ ತಂ ವಿನಾಯಕಮ್ ॥ ೧ ॥

೧. ಸಂತೋಷಭರಿತನಾಗಿ ಕೈಯಲ್ಲಿ ಕಡುಬನ್ನು ಹಿಡಿದುಕೊಂಡಿರುವ, ಯಾವಾಗಲೂ ಮೋಕ್ಷವನ್ನು ಸಾಧಿಸಿಕೊಡುವ, ಚಂದ್ರನನ್ನು ತಲೆಯ ಮೇಲಿನ ಅಲಂಕಾರವಾಗಿಟ್ಟುಕೊಂಡಿರುವ, ತನ್ನ ಭಕ್ತಜನರನ್ನು ಕಾಪಾಡುವ, ಮತ್ತೊಬ್ಬರು ಒಡೆಯರಿಲ್ಲದ ತಾನೊಬ್ಬನೇ ಒಡೆಯನಾದ, ಆನೆಯರೂಪದ ರಾಕ್ಷಸನನ್ನು ನಾಶಮಾಡಿದ, ನಮಸ್ಕರಿಸಿದವರ ಅಮಂಗಲವನ್ನು ತೊಡೆದು ಹಾಕುವ ಆ ವಿನಾಯಕನನ್ನು ನಮಸ್ಕರಿಸುವೆನು.

ನತೇತರಾತಿಭೀಕರಂ ನವೋದಿತಾರ್ಕಭಾಸ್ವರಂ
ನಮತ್ಸುರಾರಿನಿರ್ಜರಂ ನತಾದಿಕಾಪದುದ್ಧರಮ್ ।
ಸುರೇಶ್ವರಂ ನಿಧೀಶ್ವರಂ ಗಜೇಶ್ವರಂ ಗಣೇಶ್ವರಂ
ಮಹೇಶ್ವರಂ ತಮಾಶ್ರಯೇ ಪರಾತ್ಪರಂ ನಿರಂತರಮ್ ॥ ೨ ॥

೨. ನಮಸ್ಕರಿಸದೆ ಇರುವವರಿಗೆ ಅತಿಭಯಂಕರನಾದ, ಹೊಸದಾಗಿ ಉದಯಿಸಿದ ಸೂರ್ಯನಂತೆ ಪ್ರಕಾಶಿಸುತ್ತಿರುವ, ಅಸುರರಿಂದಲೂ ದೇವತೆಗಳಿಂದಲೂ ನಮಸ್ಕರಿಸಲ್ಪಡುತ್ತಿರುವ, ವಂದಿಸಿದವರ ಕಷ್ಟವನ್ನು ಕಳೆಯುವ, ದೇವತೆಗಳಿಗೊಡೆಯನೂ ಧನಾಧಿಪನೂ, ಆನೆಗಳ ಯಜಮಾನನೂ ಎಲ್ಲಾ ಗಣಗಳಿಗೂ

---

* ಈ ಸ್ತೋತ್ರವು 'ಪಂಚಚಾಮರ'ವೆಂಬ ವೃತ್ತದಲ್ಲಿ ರಚಿಸಲ್ಪಟ್ಟಿರುವದರಿಂದ ಈ ಹೆಸರು ಬಂದಿದೆ.

ಪತಿಯೂ ಆಗಿರುವ, ಮಹೇಶ್ವರನೇ ಆದ, ಎಲ್ಲಕ್ಕೂ ಹೆಚ್ಚಿನವನಾದ ಆ ವಿನಾಯಕನನ್ನು ಎಡಬಿಡದೆ ಆಶ್ರಯಿಸುತ್ತೇನೆ.

**ಸಮಸ್ತ ಲೋಕಶಂಕರಂ ನಿರಸ್ತದೈತ್ಯಕುಂಜರಂ**
**ದರೇತರೋದರಂ ವರಂ ವರೇಭವಕ್ತ್ರಮಕ್ಷರಮ್ ।**
**ಕೃಪಾಕರಂ ಕ್ಷಮಾಕರಂ ಮುದಾಕರಂ ಯಶಸ್ಕರಂ**
**ಮನಸ್ಕರಂ ನಮಸ್ಕೃತಾಂ ನಮಸ್ಕರೋಮಿ ಭಾಸ್ವರಮ್ ॥ ೩ ॥**

೩. ಎಲ್ಲಾ ಜನರಿಗೂ ಸುಖವನ್ನುಂಟುಮಾಡುವ, ಆನೆಯ ರೂಪದ ದೈತ್ಯನನ್ನು ಸಂಹರಿಸಿದ, ದೊಡ್ಡ ಹೊಟ್ಟೆಯವನಾದ, ಶ್ರೇಷ್ಠನಾದ, ಉತ್ತಮವಾದ ಆನೆಯ ಮುಖವುಳ್ಳ, ನಾಶರಹಿತನಾದ, ಕರುಣಾಸಾಗರನಾದ, ಅಪರಾಧಗಳನ್ನು ಕ್ಷಮಿಸುವವನಾದ, ಸಂತೋಷವನ್ನುಂಟುಮಾಡುವ, ಕೀರ್ತಿಯನ್ನುಂಟುಮಾಡುವ, ಹಾಗೂ ನಮಸ್ಕರಿಸುವವರಿಗೆ ಸದ್ಬುದ್ಧಿಯನ್ನು ಕೊಡುವ ಪ್ರಕಾಶಕನಾದ (ವಿನಾಯಕನನ್ನು) ನಮಸ್ಕರಿಸುತ್ತೇನೆ.

**ಅಕಿಂಚನಾರ್ತಿಮಾರ್ಜನಂ ಚಿರಂತನೋಕ್ತಿಭಾಜನಂ**
**ಪುರಾರಿಪೂರ್ವನಂದನಂ ಸುರಾರಿಗರ್ವಚರ್ವಣಮ್**
**ಪ್ರಪಂಚನಾಶಭೀಷಣಂ ಧನಂಜಯಾದಿಭೂಷಣಂ**
**ಕಪೋಲದಾನವಾರಣಂ ಭಜೇ ಪುರಾಣವಾರಣಮ್ ॥ ೪ ॥**

೪. ಬಡವರ ಅಥವಾ ಎಲ್ಲವನ್ನೂ ಬಿಟ್ಟು ಅನನ್ಯರಾಗಿರುವವರ ಸಂಕಟವನ್ನು ಪರಿಹರಿಸುವ, ಪೂರ್ವಿಕರಾದ (ಮಹರ್ಷಿಗಳ) ಸ್ತುತಿಗೆ ಪಾತ್ರನಾದ, ಮಹೇಶ್ವರನ ಹಿರಿಯಮಗನಾದ, ಅಸುರರ ಅಹಂಕಾರವನ್ನು ಅಗಿದುಹಾಕುವ, ಪ್ರಪಂಚವನ್ನೆಲ್ಲ ನಾಶಗೊಳಿಸುವಂಥ ಭಯಂಕರರೂಪನಾದ ಅಗ್ನಿಯೇ ಮುಂತಾದ ದೇವತೆಗಳಿಂದ ಒಪ್ಪುತ್ತಿರುವ, ಕೆನ್ನೆಯ ಮೇಲಿನ ಮದೋದಕವನ್ನು ನಿವಾರಿಸಿಕೊಳ್ಳುತ್ತಿರುವ, ಪುರಾತನಗಜವಾಗಿರುವ, ವಿನಾಯಕನನ್ನು ಭಜಿಸುವೆನು.

**ನಿತಾಂತಕಾಂತದಂತಕಾಂತಿಮಂತಕಾಂತಕಾತ್ಮಜಂ**
**ಅಚಿಂತ್ಯರೂಪಮಂತಹೀನಮಂತರಾಯಕೃಂತರಮ್**
**ಹೃದಂತರೇ ನಿರಂತರಂ ವಸಂತಮೇವ ಯೋಗಿನಾಂ**
**ತಮೇಕದಂತಮೇವ ತಂ ವಿಚಿಂತಯಾಮಿ ಸಂತತಮ್ ॥ ೫ ॥**

೫. ಬಹಳವಾಗಿ ಹೊಳೆಯುತ್ತಿರುವ ಹಲ್ಲುಗಳ ಕಾಂತಿಯುಳ್ಳಾತನೂ ಯಮನಿಗೂ ಯಮನಾದ ಶಿವನ ಪುತ್ರನೂ ಅಚಿಂತ್ಯವಾದ ಸ್ವರೂಪವುಳ್ಳವನೂ ಕೊನೆಯಿಲ್ಲ (ನಾಶವಿಲ್ಲ)ದವನೂ,. ವಿಘ್ನವನ್ನು ಪರಿಹರಿಸುವವನೂ ಆದ, ಯಾವಾಗಲೂ ಯೋಗಿಗಳ ಹೃದಯದಲ್ಲಿ ವಾಸಿಸುತ್ತಿರುವವನೂ ಆಗಿರುವ ಏಕದಂತನಾದ ಆತನನ್ನೇ ಸಂತತವಾಗಿ (ಎಡೆಬಿಡದೆ) ಚಿಂತಿಸುತ್ತೇನೆ.

ಮಹಾಗಣೇಶಪಂಚರತ್ನ ಮಾದರೇಣ ಯೋಽನ್ವಹಂ
ಪ್ರಜಲ್ಪತಿ ಪ್ರಭಾತಕೇ ಹೃದಿ ಸ್ಮರನ್ ಗಣೇಶ್ವರಮ್ ।
ಆರೋಗತಾಮದೋಷತಾಂ ಸುಸಾಹಿತೀಂ ಸುಪುತ್ರತಾಂ
ಸಮಾಹಿತಾಯುರಷ್ಟಭೂತಿಮಭ್ಯುಪೈತಿ ಸೋಽಚಿರಾತ್ ॥ ೬ ॥

೬. ''ಮಹಾಗಣೇಶಪಂಚರತ್ನ'' ವೆಂಬ ಈ ಸ್ತೋತ್ರವನ್ನು ಯಾವನು ಪ್ರತಿದಿನವೂ ಬೆಳಗಿನ ವೇಳೆಯಲ್ಲಿ ಭಕ್ತಿಯಿಂದ ಗಣೇಶನನ್ನು ಮನಸ್ಸಿನಲ್ಲಿ ನೆನೆಯುತ್ತಾ ಹೇಳಿಕೊಳ್ಳುವನೋ ಅವನು ಆರೋಗ್ಯವನ್ನೂ ದೋಷಗಳ ಪರಿಹಾರವನ್ನೂ ಒಳ್ಳೆಯ ಸಾಹಿತ್ಯಜ್ಞಾನವನ್ನೂ ಉತ್ತಮನಾದ ಪುತ್ರನನ್ನೂ ಬೇಕಾದಷ್ಟು ಆಯುಷ್ಯವನ್ನೂ ಅಷ್ಟಸಿದ್ಧಿಗಳನ್ನೂ ಬೇಗನೆ ಪಡೆದುಕೊಳ್ಳುವನು.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ
ಶ್ರೀಶಂಕರಭಗವತಃ ಕೃತೌ
ಗಣೇಶಪಂಚಚಾಮರಸ್ತೋತ್ರಮ್

## ೫. ಶ್ರೀ ಗಣಾಧಿಪ-ಪಂಚರತ್ನಮ್

ಸರಾಗಲೋಕದುರ್ಲಭಂ ವಿರಾಗಿಲೋಕಪೂಜಿತಂ
ಸುರಾಸುರೈರ್ನಮಸ್ಕೃತಂ ಜರಾಪಮೃತ್ಯುನಾಶಕಮ್ ।
ಗಿರಾ ಗುರುಂ ಶ್ರಿಯಾ ಹರಿಂ ಜಯಂತಿ ಯತ್ಪದಾರ್ಚಕಾಃ
ನಮಾಮಿ ತಂ ಗಣಾಧಿಪಂ ಕೃಪಾಪಯಃಪಯೋನಿಧಿಮ್ ॥ ೧ ॥

೧. ಕಾಮಿಗಳಾದ ಜನರಿಗೆ ದುರ್ಲಭನಾದ, ವೈರಾಗ್ಯಶೀಲರಾದವರಿಂದ ಪೂಜಿಸಲ್ಪಡುವ ದೇವಾಸುರರುಗಳಿಂದ ವಂದಿಸಲ್ಪಟ್ಟ, ಮುಪ್ಪುಸಾವುಗಳನ್ನು ನಾಶಮಾಡುವ ಮತ್ತು ಯಾವನ ಪಾದಗಳನ್ನು ಪೂಜಿಸುವವರು ವಾಕ್ಸಿದ್ಧಿಯಿಂದ ಬೃಹಸ್ಪತಿಯನ್ನೂ ಐಶ್ವರ್ಯದಿಂದ ಶ್ರೀ ಮಹಾವಿಷ್ಣುವನ್ನೂ ಜಯಿಸಬಲ್ಲರೋ, ಆ ಕೃಪಾಜಲನಿಧಿಯಾದ ಗಣಾಧಿಪನನ್ನು ನಾನು ನಮಸ್ಕರಿಸುವೆನು.

ಗಿರೀಂದ್ರಜಾಮುಖಾಂಬುಜಪ್ರಮೋದದಾನಭಾಸ್ಕರಂ
ಕರೀಂದ್ರವಕ್ತ್ರಮಾನತಾಘಸಂಘವಾರಣೋದ್ಯತಮ್ ।
ಸರೀಸೃಪೇಶಬದ್ಧಕುಕ್ಷಿಮಾಶ್ರಯಾಮಿ ಸಂತತಂ
ಶರೀರಕಾಂತಿನಿರ್ಜಿತಾಬ್ಜಬಂಧುಬಾಲಸಂತತಿಮ್ ॥ ೨ ॥

೨. ಗಿರಿಕನ್ಯೆಯಾದ ಪಾರ್ವತಿಯ ಮುಖವೆಂಬ ಪದ್ಮಕ್ಕೆ ಆನಂದವನ್ನು ಕೊಡುವ ಸೂರ್ಯನಂತಿರುವ, ಶ್ರೇಷ್ಠವಾದ ಆನೆಯ ಮುಖವುಳ್ಳ, ನಮಸ್ಕರಿಸಿದ ಭಕ್ತರ

ಪಾಪಸಮೂಹಗಳನ್ನು ಪರಿಹರಿಸುವದರಲ್ಲಿ ಬದ್ಧಾದರನಾದ, ಹಾವುಗಳ ಒಡೆಯನಾದ ಸರ್ಪರಾಜನಿಂದ ಸುತ್ತಲ್ಪಟ್ಟ ಹೊಟ್ಟೆಯುಳ್ಳ, ತನ್ನ ಶರೀರದ ಸೌಂದರ್ಯದಿಂದ ಬಾಲಸೂರ್ಯರುಗಳ ಪರಂಪರೆಯನ್ನೂ ಮೀರಿಸಿರುವ ಗಣಪತಿಯನ್ನು ಯಾವಾಗಲೂ ಆಶ್ರಯಿಸುವೆನು.

ಶುಕಾದಿಮೌನಿವಂದಿತಂ ಗಕಾರವಾಚ್ಯಮಕ್ಷರಂ
ಪ್ರಕಾಮಮಿಷ್ಟದಾಯಿನಂ ಸಕಾಮನಮ್ರಪಂಕ್ತಯೇ ।
ಚಕಾಸತಂ ಚತುರ್ಭುಜೈರ್ವಿಕಾಸಿಪದ್ಮಪೂಜಿತಂ
ಪ್ರಕಾಶಿತಾತ್ಮತತ್ತ್ವಕಂ ನಮಾಮ್ಯಹಂ ಗಣಾಧಿಪಮ್ ॥ ೩ ॥

೩. ಶುಕರೇ ಮುಂತಾದ ಮುನಿಜನರಿಂದ ನಮಸ್ಕರಿಸಲ್ಪಟ್ಟ, ಗಕಾರವೆಂಬ ಬೀಜಾಕ್ಷರದಿಂದ ವಾಚ್ಯನಾಗಿರುವ, ನಾಶರಹಿತನಾದ ಇಷ್ಟಾರ್ಥಗಳನ್ನು ಬಯಸಿ ನಮಸ್ಕರಿಸುವವರ ಪಂಕ್ತಿಗೆ ಯಥೇಚ್ಛವಾಗಿ ವರಗಳನ್ನು ಕೊಡುವವನಾದ, ನಾಲ್ಕು ಭುಜಗಳಿಂದ ವಿರಾಜಮಾನನಾದ, ಅರಳಿದ ತಾವರೆಗಳಿಂದ ಪೂಜಿಸಲ್ಪಟ್ಟ, ಆತ್ಮ ತತ್ತ್ವವನ್ನು ಪ್ರಕಾಶಗೊಳಿಸಿರುವ ಗಣಾಧಿಪನನ್ನು ನಾನು ನಮಸ್ಕರಿಸುವೆನು.

ನರಾಧಿಪತ್ವದಾಯಕಂ ಸ್ವರಾದಿಲೋಕನಾಯಕಂ
ಜ್ವರಾದಿರೋಗವಾರಕಂ ನಿರಾಕೃತಾಸುರವ್ರಜಮ್ ।
ಕರಾಂಬುಜೋಲ್ಲಸತ್ಸೃಣಿಂ ವಿಕಾರಶೂನ್ಯಮಾನಸೈಃ
ಹೃದಾ ಸದಾ ವಿಭಾವಿತಂ ಮುದಾ ನಮಾಮಿ ವಿಘ್ನಪಮ್ ॥ ೪ ॥

೪. ಮಹಾರಾಜಪದವಿಯನ್ನು ಕೊಡುವಂಥ, ಸ್ವರ್ಗಾದಿಲೋಕಗಳಿಗೆ ಒಡೆಯನಾದ, ಜ್ವರವೇ ಮುಂತಾದ ರೋಗಗಳನ್ನು ಹೋಗಲಾಡಿಸುವ, ಹೊಡೆದೋಡಿಸಲ್ಪಟ್ಟ ರಾಕ್ಷಸಸಮೂಹವುಳ್ಳ, ಕಮಲದಂತಿರುವ ಕೈನಲ್ಲಿ ವಿರಾಜಿಸುತ್ತಿರುವ ಅಂಕುಶವುಳ್ಳ, ಮನೋವಿಕಾರವಿಲ್ಲದ ಯೋಗಿಗಳಿಂದ ಯಾವಾಗಲೂ ಹೃದಯದಲ್ಲಿ ಚಿಂತಿಸಲ್ಪಡುತ್ತಿರುವ ವಿಘ್ನರಾಜನನ್ನು ಸಂತೋಷದಿಂದ ನಮಸ್ಕರಿಸುವೆನು.

ಶ್ರಮಾಪನೋದನಕ್ಷಮಂ ಸಮಾಹಿತಾಂತರಾತ್ಮನಾಂ
ಸುಮಾದಿಭಿಃ ಸದಾರ್ಚಿತಂ ಕ್ಷಮಾನಿಧಿಂ ಗಣಾಧಿಪಮ್ ।
ರಮಾಧವಾದಿಪೂಜಿತಂ ಯಮಾಂತಕಾತ್ಮಸಂಭವಂ
ಶಮಾದಿಷಡ್ಗುಣಪ್ರದಂ ನಮಾಮ್ಯಹಂ ವಿಭೂತಯೇ ॥ ೫ ॥

೫. ಯಾವಾಗಲೂಅಲುಗಾಡದ ಚಿತ್ತವುಳ್ಳ ಸಾಧಕರ ಶ್ರಮವನ್ನು ಹೋಗಲಾಡಿಸುವದರಲ್ಲಿಸಮರ್ಥನಾದ, ಹೂವೇ ಮುಂತಾದ ಪೂಜಾದ್ರವ್ಯಗಳಿಂದ

ಯಾವಾಗಲೂ ಪೂಜಿತನಾದ, ಕ್ಷಮಾನಿಧಿಯಾದ, ವಿಷ್ಣುವೇ ಮುಂತಾದವರಿಂದ ಅರ್ಚಿಸಲ್ಪಡುವ, ಯಮನಿಗೂ ಮೃತ್ಯುವಾದ ಈಶ್ವರನ ಪುತ್ರನಾದ, ಶಮೆಯೇ ಮುಂತಾದ ಆರು ಗುಣ*ಗಳನ್ನು ಉಂಟುಮಾಡುವ ಗಣಾಧಿಪನನ್ನು ಐಶ್ವರ್ಯಪ್ರಾಪ್ತಿಗಾಗಿ ನಾನು ನಮಿಸುವೆನು.

ಗಣಾಧಿಪಸ್ಯ ಪಂಚಕಂ ನೃಣಾಮಭೀಷ್ಟದಾಯಕಂ
ಪ್ರಣಾಮಪೂರ್ವಕಂ ಜನಾಃ ಪಠಂತಿ ಯೇ ಮುದಾನ್ವಿತಾಃ ।
ಭವಂತಿ ತೇ ವಿದಾಂ ಪುರಃ ಪ್ರಗೀತವೈಭವಾ ಜವಾತ್
ಚಿರಾಯುಷೋಽಧಿಕಃ ಶ್ರಿಯಃ ಸುಸೂನವೋ ನ ಸಂಶಯಃ ॥ ೬ ॥

೬. ಮಾನವರಿಗೆ ಇಷ್ಟಾರ್ಥದಾಯಕವಾದ ಗಣಾಧಿಪನ ಈ ಪಂಚಕವನ್ನು ಯಾರು ಸಂತೋಷದಿಂದ ಗಣಪತಿಗೆ ನಮಸ್ಕರಿಸಿ ಪಠಿಸುವರೋ ಅವರು ವಿದ್ವಾಂತರ ಮುಂದೆ ಹೊಗಳಲ್ಪಟ್ಟ ಕೀರ್ತಿಯುಳ್ಳವರೂ, ಚಿರಂಜೀವಿಗಳೂ, ಹೆಚ್ಚಿನ ಐಶ್ವರ್ಯವಂತರೂ ಒಳ್ಳೆಯ ಪುತ್ರರುಳ್ಳವರೂ ಆಗಿ ಬೇಗನೆ ಪ್ರಸಿದ್ಧರಾಗುವರು. ಇದರಲ್ಲಿ ಸಂಶಯವಿಲ್ಲ.

ಇತಿ ಶ್ರೀ ನೃಸಿಂಹಭಾರತೀಸ್ವಾಮಿವಿರಚಿತಂ
ಗಣಾಧಿಪಪಂಚರತ್ನಮ್

**ಶಮೆ, ದಮೆ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ - ಇವೇ ಆರು ಗುಣಗಳು.**

# ಶಿವಸ್ತೋತ್ರಗಳು

## ೧. ಚಂದ್ರಶೇಖರಾಷ್ಟಕಮ್

ಚಂದ್ರಶೇಖರ ಚಂದ್ರಶೇಖರ ಚಂದ್ರಶೇಖರ ಪಾಹಿ[1] ಮಾಮ್ ।
ಚಂದ್ರಶೇಖರ ಚಂದ್ರಶೇಖರ ಚಂದ್ರಶೇಖರ ರಕ್ಷ ಮಾಮ್ ॥ ಪ ॥
ರತ್ನಸಾನುಶರಾಸನಂ ರಜತಾದ್ರಿಶೃಂಗನಿಕೇತನಂ
ಶಿಂಜಿನೀಕೃತಪನ್ನಗೇಶ್ವರಮಚ್ಯುತಾನಲಸಾಯಕಮ್ ।
ಕ್ಷಿಪ್ರದಗ್ಧಪುರತ್ರಯಂ ತ್ರಿದಶಾಲಯೈರಭಿವಂದಿತಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥ ೧ ॥

೧. ಮೇರುಪರ್ವತವನ್ನು ಧನುಸ್ಸಾಗಿ ಉಳ್ಳ, ಬೆಳ್ಳಿಯಬೆಟ್ಟವಾದ ಕೈಲಾಸದಲ್ಲಿ ನೆಲಸಿರುವ, ಕಾಲುಬಳೆಯಾಗಿ ಮಾಡಿಕೊಂಡಿರುವ ಸರ್ಪರಾಜನುಳ್ಳ, ವಿಷ್ಣು, ಅಗ್ನಿ - ಎಂಬ ದೇವತೆಗಳನ್ನು ಬಾಣವಾಗಿ ಮಾಡಿಕೊಂಡ, ಬಹುಬೇಗ ಸುಡಲ್ಪಟ್ಟ ತ್ರಿಪುರಗಳುಳ್ಳ, ದೇವತೆಗಳಿಂದ ನಮಸ್ಕರಿಸಲ್ಪಟ್ಟ ಚಂದ್ರಶೇಖರನನ್ನು ನಾನು ಆಶ್ರಯಿಸುವೆನು. ಯಮನು ನನ್ನನ್ನು ಏನುಮಾಡಿಯಾನು ?

ಪಂಚಪಾದಪಪುಷ್ಪಗಂಧಪದಾಂಬುಜದ್ವಯಶೋಭಿತಂ
ಫಾಲಲೋಚನಜಾತಪಾವಕದಗ್ಧಮನ್ಮಥವಿಗ್ರಹಮ್ ।
ಭಸ್ಮದಿಗ್ಧಕಲೇವರಂ ಭವನಾಶನಂ ಭವಮವ್ಯಯಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥ ೨ ॥

೨. (ದೇವಲೋಕದ) ಐದು ವೃಕ್ಷಗಳ[2] ಹೂವು-ಗಂಧಗಳಿಂದ ಪೂಜಿಸಲ್ಪಟ್ಟ, ಎರಡು ಪಾದಕಮಲಗಳಿಂದ ಶೋಭಿತನಾದ, ಹಣೆಗಣ್ಣಿನ ದೆಸೆಯಿಂದ ಹುಟ್ಟಿದ ಬೆಂಕಿಯಿಂದ ಸುಡಲ್ಪಟ್ಟ ಕಾಮದೇವನ ಶರೀರವುಳ್ಳ, (ಮನ್ಮಥನನ್ನು ಸುಟ್ಟು ಬೂದಿಮಾಡಿದವನಾದ) ಶರೀರದಲ್ಲೆಲ್ಲ ವಿಭೂತಿಯನ್ನು ಸವರಿಕೊಂಡಿರುವ, ಸಂಸಾರವಿನಾಶಕನೂ ಭವನೆಂಬ ಹೆಸರಿನವನೂ ಅವ್ಯಯನೂ ಆದ ಚಂದ್ರಶೇಖರನನ್ನು ಆಶ್ರಯಿಸುತ್ತೇನೆ. ಯಮನು ನನ್ನನ್ನು ಏನುಮಾಡಿಯಾನು?

ಮತ್ತವಾರಣಮುಖ್ಯಚರ್ಮಕೃತೋತ್ತರೀಯಮನೋಹರಂ
ಪಂಕಜಾಸನಪದ್ಮಲೋಚನಪೂಜಿತಾಂಘ್ರಿಸರೋರುಹಮ್ ।
ದೇವಸಿಂಧುತರಂಗಶೀಕರಸಿಕ್ತಶುಭ್ರಜಟಾಧರಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥ ೩ ॥

1 ಮಾಂ ಪಾಹಿ, ರಕ್ಷ - ಎಂದರೆ ನನ್ನನ್ನು ಕಾಪಾಡು - ಎಂದರ್ಥ.

2. ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ, ಹರಿಚಂದನ - ಇವೇ ಐದು ದೇವ ವೃಕ್ಷಗಳು.

೩. ಮದಿಸಿದ ಆನೆಯ ದಪ್ಪಚರ್ಮವನ್ನು ಮೇಲುಹೊದಿಕೆಯಾಗಿ ಧರಿಸಿ ಮನೋಹರನಾಗಿರುವ, ಬ್ರಹ್ಮ, ವಿಷ್ಣು - ಇವರುಗಳಿಂದ ಪೂಜಿಸಲ್ಪಟ್ಟ ಚರಣಕಮಲಗಳುಳ್ಳ, ದೇವನದಿಯಾದ ಗಂಗೆಯ ಅಲೆಗಳ ಹನಿಗಳಿಂದ ತೋಯಿಸಲ್ಪಟ್ಟ ಪವಿತ್ರವಾದ ಜಟಾಜೂಟವನ್ನು ಧರಿಸಿರುವ ಚಂದ್ರಶೇಖರನನ್ನು ಆಶ್ರಯಿಸುವೆನು. ಯಮನು ನನ್ನನ್ನು ಏನುಮಾಡಿಯಾನು ?

ಯಕ್ಷರಾಜಸಖಂ ಭಗಾಕ್ಷಹರಂ ಭುಜಂಗವಿಭೂಷಣಂ
ಶೈಲರಾಜಸುತಾಪರಿಷ್ಕೃತಚಾರುವಾಮಕಲೇಬರಮ್ ।
ಕ್ಷ್ವೇಳನೀಳಗಳಂ ಪರಶ್ವಧಧಾರಿಣಂ ಮೃಗಧಾರಿಣಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥ ೪ ॥

೪. ಕುಬೇರನ ಸ್ನೇಹಿತನಾದ, ಭಗನೆಂಬ ದೇವತೆಯ ಕಣ್ಣನ್ನು ಕಿತ್ತು ಹಾಕಿದ, ಸರ್ಪಗಳ ಆಭರಣಗಳುಳ್ಳ ಮತ್ತು ಪರ್ವತರಾಜನ ಮಗಳಾದ ಪಾರ್ವತಿಯಿಂದ ಆಲಿಂಗಿಸಲ್ಪಟ್ಟ ಸುಂದರವಾದ ದೇಹದ ಎಡಭಾಗವುಳ್ಳ, ವಿಷದಿಂದ ಕಪ್ಪಾದ ಕಂಠವುಳ್ಳ, ಪರಶುವೆಂಬ ಆಯುಧವನ್ನೂ ಜಿಂಕೆಯನ್ನೂ ಕೈಯಲ್ಲಿ ಹಿಡಿದಿರುವ ಚಂದ್ರಶೇಖರನನ್ನು ಆಶ್ರಯಿಸುವೆನು. ಯಮನು ನನ್ನನ್ನು ಏನುಮಾಡಿಯಾನು ?

ಕುಂಡಲೀಕೃತಕುಂಡಲೇಶ್ವರಕುಂಡಲಂ ವೃಷವಾಹನಂ
ನಾರದಾದಿಮುನೀಶ್ವರಸ್ತುತವೈಭವಂ ಭುವನೇಶ್ವರಮ್ ।
ಅಂಧಕಾಂತಕಮಾಶ್ರಿತಾಮರಪಾದಪಂ ಶಮನಾಂತಕಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥ ೫ ॥

೫. ಶಿಂಬಿಯಂತೆ ಸುತ್ತಲ್ಪಟ್ಟ ವಾಸುಕಿ ಮುಂತಾದ ಹಾವುಗಳನ್ನು ಕಿವಿಯ ಆಭರಣವಾಗಿ ಮಾಡಿಕೊಂಡಿರುವ, ಬಸವನನ್ನು ವಾಹನವಾಗಿ ಹೊಂದಿರುವ, ನಾರದರೇ ಮುಂತಾದ ಋಷಿಗಳಿಂದ ಹೊಗಳಲ್ಪಟ್ಟ ಮಹಿಮೆಯುಳ್ಳವನಾದ, ಜಗದೊಡೆಯನಾದ, ಅಂಧಕಾಸುರನನ್ನು ಸಂಹಾರಮಾಡಿದ, ಆಶ್ರಯಿಸಿದವರಿಗೆ ಕಲ್ಪವೃಕ್ಷನಾದ, ಯಮನನ್ನು ಹಿಮ್ಮೆಟ್ಟಿಸಿರುವ ಚಂದ್ರಶೇಖರನನ್ನು ನಾನು ಆಶ್ರಯಿಸುವೆನು. ಮೃತ್ಯುವು ನನ್ನನ್ನು ಏನುಮಾಡಿಯಾನು ?

ಭೇಷಜಂ ಭವರೋಗಿಣಾಮಖಿಲಾಪದಾಮಪಹಾರಿಣಂ
ದಕ್ಷಯಜ್ಞವಿನಾಶನಂ ತ್ರಿಗುಣಾತ್ಮಕಂ ತ್ರಿವಿಲೋಚನಮ್ ।
ಭುಕ್ತಿಮುಕ್ತಿಫಲಪ್ರದಂ ಸಕಲಾಘಸಂಘನಿಬರ್ಹಣಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥ ೬ ॥

೬. ಸಂಸಾರವೆಂಬ ರೋಗಕ್ಕೆ ವಶರಾದವರಿಗೆ ಔಷಧಿಯಾಗಿರುವ, ಎಲ್ಲಾ ಸಂಕಟಗಳನ್ನೂ ನಾಶಗೊಳಿಸುವವನಾದ, ದಕ್ಷಯಜ್ಞವನ್ನು ಧ್ವಂಸಮಾಡಿದ, ತ್ರಿಗುಣಾತ್ಮಕನೂ ಮುಕ್ಕಣ್ಣನೂ ಆಗಿರುವ, ಭೋಗಮೋಕ್ಷಗಳೆಂಬ ಎರಡು ಫಲಗಳನ್ನೂ ಕೊಡುವಂಥ, ಎಲ್ಲಾ ಪಾಪಸಂಘಗಳನ್ನೂ ತೊಡೆದುಹಾಕುವ, ಚಂದ್ರಶೇಖರನನ್ನು ಆಶ್ರಯಿಸುವೆನು. ಯಮನು ನನ್ನನ್ನು ಏನು ಮಾಡಿಯಾನು?

ಭಕ್ತವತ್ಸಲಮರ್ಚಿತಂ ನಿಧಿಮಕ್ಷಯಂ ಹರಿದಂಬರಂ
ಸರ್ವಭೂತಪತಿಂ ಪರಾತ್ಪರಮಪ್ರಮೇಯಮನುತ್ತಮಮ್ ।
ಸೋಮವಾರುಣಭೂಹುತಾಶನಸೋಮಪಾನಿಲಖಾಕೃತಿಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥ ೭ ॥

೭. ಭಕ್ತಪ್ರಿಯನೂ ಪೂಜ್ಯನೂ ಅಕ್ಷಯನಿಧಿಯೂ ದಿಗಂಬರನೂ ಆಗಿರುವ, ಎಲ್ಲಾ ಪ್ರಾಣಿಗಳಿಗೂ ಒಡೆಯನಾದ, ಪರಾತ್ಪರನಾದ, ಪ್ರಮಾಣಗಳಿಗೆ ನಿಲುಕದ, ಉತ್ತಮರಲ್ಲಿ ಸರ್ವೋತ್ತಮನಾದ, ಚಂದ್ರ, ಜಲ, ಪೃಥಿವೀ, ಅಗ್ನಿ, ಯಜಮಾನ, ವಾಯು, ಆಕಾಶವೇ ಮುಂತಾದ * ಭೂತಗಳ ಆಕಾರದಿಂದ ತೋರಿಕೊಳ್ಳುತ್ತಿರುವ ಚಂದ್ರಶೇಖರನನ್ನು ಆಶ್ರಯಿಸುವೆನು. ಮೃತ್ಯುವು ನನ್ನನ್ನು ಏನು ಮಾಡಿಯಾನು ?

ವಿಶ್ವಸೃಷ್ಟಿವಿಧಾಯಿನಂ ಪುನರೇವ ಪಾಲನತತ್ಪರಂ
ಸಂಹರಂತಮಪಿ ಪ್ರಪಂಚಮಶೇಷಲೋಕನಿವಾಸಿನಮ್ ।
ಕ್ರೀಡಯಂತಮಹರ್ನಿಶಂ ಗಣನಾಥಯೂಥಸಮನ್ವಿತಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥ ೮ ॥

೮. ಜಗತ್ತನ್ನು ಸೃಷ್ಟಿಮಾಡುವದರಲ್ಲಿ ತೊಡಗಿರುವ, ಮತ್ತು ಅದನ್ನು ಕಾಪಾಡುವದರಲ್ಲಿ ನಿರತನಾದ ಹಾಗೂ ಕಡೆಯಲ್ಲಿ ಸಂಹಾರವನ್ನೂ ಕೈಗೊಳ್ಳುವ, ಎಲ್ಲಾ ಲೋಕಗಳಲ್ಲಿಯೂ ಹರಡಿಕೊಂಡು ಇದ್ದುಕೊಂಡಿರುವ, ಹಗಲೂ ರಾತ್ರಿಯೂ ಲೀಲಾಕಾರ್ಯಗಳಲ್ಲಿ ಆಸಕ್ತನಾಗಿರುವ, ಪ್ರಮಥಗಣಗಳ ಗುಂಪುಗಳಿಂದ ಕೂಡಿದ ಚಂದ್ರಶೇಖರನನ್ನು ಆಶ್ರಯಿಸುವೆನು. ಯಮನು ನನ್ನನ್ನು ಏನುಮಾಡಿಯಾನು?

ಮೃತ್ಯುಭೀತಮೃಕಂಡುಸೂನುಕೃತಸ್ತವಂ ಶಿವಸನ್ನಿಧೌ
ಯತ್ರ ಕುತ್ರ ಚ ಯಃ ಪಠೇನ್ನ ಹಿ ತಸ್ಯ ಮೃತ್ಯುಭಯಂ ಭವೇತ್
ಪೂರ್ಣಮಾಯುರರೋಗತಾಮಖಿಲಾರ್ಥಸಂಪದಮಾದರಂ
ಚಂದ್ರಶೇಖರ ಏವ ತಸ್ಯ ದದಾತಿ ಮುಕ್ತಿಮಯತ್ನತಃ ॥ ೯ ॥

* ಸೂರ್ಯನನ್ನೂ ಸೇರಿಸಿಕೊಂಡಲ್ಲಿ ಅಷ್ಟಮೂರ್ತಿರೂಪನಾಗಿ ಜಗತ್ತನ್ನು ಧರಿಸಿರುವನು ಎಂದು ಅಭಿಪ್ರಾಯ.

೯. ಮೃತ್ಯುಭಯಕ್ಕೆ ವಶನಾದ ಮೃಕಂಡುಮುನಿಯ ಮಗನಿಂದ ರಚಿಸಲ್ಪಟ್ಟ ಈ ಸ್ತೋತ್ರವನ್ನು ಶಿವನ ಸನ್ನಿಧಿಯಲ್ಲಿ ಅಥವಾ ಮತ್ತೆಲ್ಲಿಯೇ ಆದರೂ ಪಠಿಸಿದ್ದೇ ಆದರೆ ಅಂಥವನಿಗೆ ಎಂದಿಗೂ ಯಮನ ಭಯವಿರುವದಿಲ್ಲ. ಮತ್ತು ಪೂರ್ಣವಾದ ಆಯುಷ್ಯವೂ ಆರೋಗ್ಯವೂ ಎಲ್ಲಾ ಇಷ್ಟಾರ್ಥಸಂಪತ್ತುಗಳನ್ನೂ ಯಾವ ವಿಶೇಷಪ್ರಯತ್ನವನ್ನೂ ಮಾಡದೇಇದ್ದರೂ ಚಂದ್ರಶೇಖರನಾದ ಶಿವನೇ ಕೊಟ್ಟು ಮುಕ್ತಿಯನ್ನೂ ಅನುಗ್ರಹಿಸುವನು.

**ಸಂಸಾರಸರ್ಪದಷ್ಟಾನಾಂ ಜಂತೂನಾಮವಿವೇಕಿನಾಮ್ ।**
**ಚಂದ್ರಶೇಖರಪಾದಾಬ್ಜಸ್ಮರಣಂ ಪರಮೌಷಧಮ್ ॥ ೧೦ ॥**

೧೦. ಸಂಸಾರವೆಂಬ ವಿಷಸರ್ಪದಿಂದ ಕಡಿಯಲ್ಪಟ್ಟ ಅವಿವೇಕಿಗಳಾದ ಪ್ರಾಣಿಗಳಿಗೆ, ಚಂದ್ರಶೇಖರನ ಪಾದಾರವಿಂದಗಳ ಸ್ಮರಣೆಯೆಂಬುದು ದಿವ್ಯವಾದ ಔಷಧಿಯಾಗಿರುವದು.

**ರುದ್ರಂ ಪಶುಪತಿಂ ಸ್ಥಾಣುಂ ನೀಲಕಂಠಮುಮಾಪತಿಮ್ ।**
**ನಮಾಮಿ ಶಿರಸಾ ದೇವಂ ಕಿಂ ನೋ ಮೃತ್ಯುಃ ಕರಿಷ್ಯತಿ * ॥ ೧೧ ॥**

೧೧. ರುದ್ರನೂ ಪಶುಗಳ ಒಡೆಯನೂ ಅಚಲನೂ ನೀಲಕಂಠನೂ ಪಾರ್ವತೀಪತಿಯೂ ಆದ ದೇವನನ್ನು ತಲೆಬಾಗಿ ನಮಸ್ಕರಿಸುವೆನು. ಯಮನು ನಮ್ಮನ್ನು ಏನುತಾನೆಮಾಡಿಯಾನು ?

**ಕಾಲಕಂಠಂ ಕಲಾಮೂರ್ತಿಂ ಕಾಲಾಗ್ನಿಂ ಕಾಲನಾಶನಮ್ ।**
**ಅನಂತಮವ್ಯಯಂ ಶಾಂತಮಕ್ಷಮಾಲಾಧರಂ ಹರಮ್ ॥ ೧೨ ॥**

೧೨. ಕಪ್ಪಾದ ಕಂಠವುಳ್ಳವನೂ ಕಲಾರೂಪನೂ ಕಾಲಾಗ್ನಿ (ಪ್ರಳಯಾಗ್ನಿ) ಸ್ವರೂಪನೂ ಯಮನನ್ನು ನಾಶಗೊಳಿಸಿದವನೂ ಅನಂತನೂ ಅವ್ಯಯನೂ, ಶಾಂತನೂ ಸ್ಫಟಿಕಮಣಿಮಾಲೆಯನ್ನು ಧರಿಸಿರುವವನೂ ಆದ (ವನನ್ನು ನಮಸ್ಕರಿಸುವೆನು).

**ಆನಂದಂ ಪರಮಂ ನಿತ್ಯಂ ಕೈವಲ್ಯಪದಕಾರಣಮ್ ।**
**ದೇವದೇವಂ ಜಗನ್ನಾಥಂ ದೇವೇಶಂ ವೃಷಭಧ್ವಜಮ್ ॥ ೧೩ ॥**

೧೩. ಆನಂದಸ್ವರೂಪನೂ ಹೆಚ್ಚಿನವನೂ ನಿತ್ಯನೂ ಮೋಕ್ಷಪದವಿಗೆ ಕಾರಣನೂ ದೇವದೇವನೂ ಜಗನ್ನಾಯಕನೂ, ದೇವತೆಗಳೊಡೆಯನೂ ಎತ್ತಿನ ಗುರುತಿನ ಬಾವುಟವುಳ್ಳವನೂ ಆದ (ವನನ್ನು ನಮಸ್ಕರಿಸುವೆನು.)

* ನಮಾಮಿ ಶಿರಸಾ .... ಎಂಬ ಈ ಶ್ಲೋಕಾರ್ಧವನ್ನು ೧೨ನೆಯ ಪದ್ಯದಿಂದ ಮುಂದಕ್ಕೆ ಎಲ್ಲಾ ಶ್ಲೋಕಗಳ ಜೊತೆಗೂ ಸೇರಿಸಿ ಹೇಳಿಕೊಳ್ಳಬೇಕು.

**ಸ್ವರ್ಗಾಪವರ್ಗದಾತಾರಂ ಸೃಷ್ಟಿಸ್ಥಿತ್ಯಂತಕಾರಣಮ್ ।**
**ಗಂಗಾಧರಂ ಶಶಿಧರಂ ಶಂಕರಂ ಶೂಲಪಾಣಿನಮ್ ॥ ೧೪ ॥**

**೧೪.** ಸ್ವರ್ಗಮೋಕ್ಷಗಳನ್ನೀಯುವ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾದ, ಗಂಗೆಯನ್ನು ತಲೆಯಲ್ಲಿ ಧರಿಸಿರುವ, ಹಾಗೂ ಚಂದ್ರನನ್ನು ಹೊತ್ತಿರುವ, ಲೋಕಗಳಿಗೆಲ್ಲ ಸುಖವನ್ನುಂಟುಮಾಡುವ, ಶೂಲವೆಂಬ ಆಯುಧವನ್ನು ಕೈಯಲ್ಲಿ ಹಿಡಿದಿರುವ (ವನನ್ನು ನಮಸ್ಕರಿಸುವೆನು.)

**ಭಸ್ಮೋದ್ಧೂಳಿತಸರ್ವಾಂಗಂ ನಾಗಾಭರಣಭೂಷಿತಮ್ ।**
**ನಮಾಮಿ ಶಿರಸಾ ದೇವಂ ಕಿಂ ನೋ ಮೃತ್ಯುಃ ಕರಿಷ್ಯತಿ ॥ ೧೫ ॥**

**೧೫.** ವಿಭೂತಿಯಿಂದ ಬಳಿಯಲ್ಪಟ್ಟ ಎಲ್ಲಾ ಅವಯವಗಳುಳ್ಳ, ಹಾವುಗಳೆಂಬ ಆಭರಣಗಳಿಂದ ಅಲಂಕೃತನಾದ ದೇವನನ್ನು ತಲೆಬಾಗಿ ನಮಸ್ಕರಿಸುವೆನು. ಮೃತ್ಯುವು ನನ್ನನ್ನು ಏನುಮಾಡಿಯಾನು ?

**ಮಾರ್ಕಂಡೇಯಕೃತಂ ಸ್ತೋತ್ರಂ ಯಃ ಪಠೇತ್ ಶಿವಸನ್ನಿಧೌ ।**
**ತಸ್ಯ ಮೃತ್ಯುಭಯಂ ನಾಸ್ತಿ ಸತ್ಯಂ ಸತ್ಯಂ ವದಾಮ್ಯಹಮ್ ॥ ೧೬ ॥**

**೧೬.** ಮಾರ್ಕಂಡೇಯನಿಂದ ರಚಿಸಲ್ಪಟ್ಟ ಈ ಸ್ತೋತ್ರವನ್ನು ಈಶ್ವರನ ಸನ್ನಿಧಿಯಲ್ಲಿ ಯಾವನು ಪಠಿಸುವನೋ ಅವನಿಗೆ (ಅಪ) ಮೃತ್ಯುವಿನ ಭಯವಿರುವದಿಲ್ಲ. ನಾನು ಇದನ್ನು ನಿಜವೆಂದು ಸಾರಿ ಹೇಳುವೆನು.

**ಶಿವೇಶಾನ ಮಹಾದೇವ ವಾಮದೇವ ಸದಾಶಿವ ।**
**ಕಲ್ಪಾಯುರ್ದೇಹಿ ಮೇ ಪೂರ್ಣಂ ಯಾವದಾಯುರರೋಗತಾಮ್ ॥ ೧೭ ॥**

**೧೭.** ಶಿವನೆ, ಈಶಾನನೆ, ಮಹಾದೇವನೆ, ವಾಮದೇವನೆ, ಸದಾಶಿವನೆ, ನನಗೆ ಕಲ್ಪಕಾಲದ ಪೂರ್ಣಾಯುಸ್ಸನ್ನೂ ಬದುಕಿರುವವರೆಗೂ ಆರೋಗ್ಯವನ್ನೂ ಕೊಡುವವನಾಗು.

**ಮೃತ್ಯುಂಜಯಾಯ ರುದ್ರಾಯ ನೀಲಕಂಠಾಯ ಶಂಭವೇ ।**
**ಅಮೃತೇಶಾಯ ಶರ್ವಾಯ ಮಹಾದೇವಾಯ ತೇ ನಮಃ ॥ ೧೮ ॥**

**೧೮.** ಮೃತ್ಯುವನ್ನು ಗೆದ್ದಿರುವ, ದುಃಖವನ್ನು ಹೋಗಲಾಡಿಸುವ, (ವಿಷದಿಂದ) ಕಪ್ಪಾದ ಕುತ್ತಿಗೆಯುಳ್ಳ, ಸುಖವನ್ನುಂಟುಮಾಡುವ, ಅಮೃತಕ್ಕೆ ಒಡೆಯನಾದ, ದುಷ್ಟರನ್ನು ಹಿಂಸಿಸುವ, ಮಹಾದೇವನಾದ ನಿನಗೆ ನಮಸ್ಕಾರ.

ಇತಿ ಶ್ರೀ ಪದ್ಮಪುರಾಣೇ ಚಂದ್ರಶೇಖರಾಷ್ಟಕಮ್

# ೨. ಶಿವಪಂಚಾಕ್ಷರಸ್ತೋತ್ರಮ್

ನಾಗೇಂದ್ರಹಾರಾಯ ತ್ರಿಲೋಚನಾಯ
ಭಸ್ಮಾಂಗರಾಗಾಯ ಮಹೇಶ್ವರಾಯ ।
ನಿತ್ಯಾಯ ಶುದ್ಧಾಯ ದಿಗಂಬರಾಯ
ತಸ್ಮೈ ನಕಾರಾಯ ನಮಃ ಶಿವಾಯ ॥ ೧ ॥

೧. ನಾಗಗಳಲ್ಲಿ ಶ್ರೇಷ್ಠನಾದ ವಾಸುಕಿಯೇ ಮುಂತಾದ ಹಾವುಗಳ ಹಾರವುಳ್ಳವನೂ ಮುಕ್ಕಣ್ಣನೂ, ವಿಭೂತಿಯನ್ನು ಶರೀರದಲ್ಲಿ ಧರಿಸಿರುವವನೂ ಮಹೇಶ್ವರನೂ ನಿತ್ಯನೂ ಶುದ್ಧನೂ ದಿಗಂಬರನೂ ಆಗಿರುವ ನಕಾರರೂಪನಾದ ಶಿವನಿಗೆ ನಮಸ್ಕಾರವು.

ಮಂದಾಕಿನೀಸಲಿಲಚಂದನಚರ್ಚಿತಾಯ
ನಂದೀಶ್ವರಪ್ರಮಥನಾಥಮಹೇಶ್ವರಾಯ ।
ಮಂದಾರಮುಖ್ಯಬಹುಪುಷ್ಪಸುಪೂಜಿತಾಯ
ತಸ್ಮೈ ಮಕಾರಾಯ ನಮಃ ಶಿವಾಯ ॥ ೨ ॥

೨. ದೇವಗಂಗೆಯ ನೀರಿನಿಂದ (ಸಿದ್ಧವಾದ) ಚಂದನಗಂಧದಿಂದ ಪೂಜಿಸಲ್ಪಟ್ಟವನಾದ, ನಂದೀಶ್ವರನೇ ಮುಂತಾದ ಪ್ರಮಥಗಣಗಳಿಗೆ ಒಡೆಯನಾದ, ಮಂದಾರವೇ ಮುಂತಾದ ಶ್ರೇಷ್ಠವಾದ ನಾನಾಕುಸುಮಗಳಿಂದ ಸುಂದರವಾಗಿ ಅಲಂಕರಿಸಲ್ಪಟ್ಟ ಮಕಾರರೂಪನಾದ ಶಿವನಿಗೆ ಸಮಸ್ಕಾರವು.

ಶಿವಾಯ ಗೌರೀವದನಾರವಿಂದ-
ಸೂರ್ಯಾಯ ದಕ್ಷಾಧ್ವರನಾಶನಾಯ ।
ಶ್ರೀನೀಲಕಂಠಾಯ ವೃಷಧ್ವಜಾಯ
ತಸ್ಮೈ ಶಿಕಾರಾಯ ನಮಃ ಶಿವಾಯ ॥ ೩ ॥

೩. ಶಿವನೂ ಪಾರ್ವತಿಯ ಮುಖಕಮಲಕ್ಕೆ ಸೂರ್ಯನಂತಿರುವವನೂ ಆದ, ದಕ್ಷಪ್ರಜಾಪತಿಯ ಯಜ್ಞವನ್ನು ವಿನಾಶಗೊಳಿಸಿದ, ನೀಲಕಂಠನೂ ವೃಷಭಧ್ವಜನೂ ಆದ ಶಿಕಾರರೂಪನಾದ ಶಿವನಿಗೆ ನಮಸ್ಕಾರವು.

ವಸಿಷ್ಠಕುಂಭೋದ್ಭವಗೌತಮಾದಿ-
ಮುನೀಂದ್ರದೇವಾರ್ಚಿತಶೇಖರಾಯ
ಚಂದ್ರಾರ್ಕವೈಶ್ವಾನರಲೋಚನಾಯ
ತಸ್ಮೈ ವಕಾರಾಯ ನಮಃ ಶಿವಾಯ ॥ ೪ ॥

೪. ವಸಿಷ್ಠರು, ಅಗಸ್ತ್ಯರು, ಗೌತಮರೇ ಮುಂತಾದ ಋಷಿಶ್ರೇಷ್ಠರಾದವರಿಂದ ಪೂಜಿಸಲ್ಪಟ್ಟ ಶಿರಸ್ಸುಳ್ಳ; ಸೂರ್ಯ, ಚಂದ್ರ, ಅಗ್ನಿಗಳೆಂಬ (ಮೂರು) ಕಣ್ಣುಗಳುಳ್ಳ ವಕಾರರೂಪನಾದ ಶಿವನಿಗೆ ನಮಸ್ಕಾರ.

ಯಕ್ಷಸ್ವರೂಪಾಯ ಜಟಾಧರಾಯ
ಪಿನಾಕಹಸ್ತಾಯ ಸನಾತನಾಯ ।
ಸುದಿವ್ಯದೇಹಾಯ ದಿಗಂಬರಾಯ
ತಸ್ಮೈ ಯಕಾರಾಯ ನಮಃ ಶಿವಾಯ ॥ ೫ ॥

೫. ಯಕ್ಷರೆಂಬ ದೇವತಾವಿಶೇಷಗಳ ಸ್ವರೂಪನೂ ಜಟಾಧಾರಿಯೂ ಪಿನಾಕವೆಂಬ ಬಿಲ್ಲನ್ನು ಕೈಯಲ್ಲಿ ಹಿಡಿದಿರುವವನೂ ಸನಾತನನೂ ಆದ, ಶೋಭನವಾದ ಅಪ್ರಾಕೃತಶರೀರವುಳ್ಳ ದಿಕ್ಕುಗಳೇ ವಸ್ತ್ರವಾಗಿ ಉಳ್ಳ ಯಕಾರರೂಪನಾದ ಶಿವನಿಗೆ ನಮಸ್ಕಾರವು.

ಪಂಚಾಕ್ಷರಮಿದಂ ಪುಣ್ಯಂ ಯಃ ಪಠೇತ್ ಶಿವಸನ್ನಿಧೌ ।
ಶಿವಲೋಕಮವಾಪ್ನೋತಿ ಶಿವೇನ ಸಹ ಮೋದತೇ ॥ ೬ ॥

೬. ಪುಣ್ಯತಮವಾದ ಈ ಪಂಚಾಕ್ಷರಸ್ತೋತ್ರವನ್ನು ಯಾವನು ಶಿವನ ಸನ್ನಿಧಿಯಲ್ಲಿ ಪಠಿಸುತ್ತಾನೋ (ಹೇಳುತ್ತಾನೋ) ಅವನು ಶಿವಲೋಕವನ್ನು ಪಡೆದು ಶಿವನೊಡನೆ ಆನಂದದಿಂದಿರುವನು.

## ೩. ಅಪರಾಧಕ್ಷಮಾಪಣಸ್ತೋತ್ರಮ್

ಆದೌ ಕರ್ಮಪ್ರಸಂಗಾತ್ ಕಲಯತಿ ಕಲುಷಂ ಮಾತೃಕುಕ್ಷೌ ಸ್ಥಿತಂ ಮಾಂ
ವಿಣ್ಮೂತ್ರಾಮೇಧ್ಯಮಧ್ಯೇ ಕ್ವಥಯತಿ ನಿತರಾಂ ಜಾಠರೋ ಜಾತವೇದಾಃ ।
ಯದ್ಯದ್ವೈ ತತ್ರ ದುಃಖಂ ವ್ಯಥಯತಿ ನಿತರಾಂ ಶಕ್ಯತೇ ಕೇನ ವಕ್ತುಂ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೧ ॥

೧. ಆರಂಭದಲ್ಲಿ ಹುಟ್ಟುವ ಮುಂಚೆ ಕರ್ಮಗತಿಗೆ ಅನುಗುಣವಾಗಿ ತಾಯಿಯ ಗರ್ಭದಲ್ಲಿ ಕಲುಷರೂಪದಿಂದ ಸೇರಿಕೊಂಡಿರುವ ನನ್ನನ್ನು ಮಲ ಮೂತ್ರಕೊಳೆಗಳಿಂದ ಆವೃತವಾಗಿರುವ ಸ್ಥಳದಲ್ಲಿ, ಹೊಟ್ಟೆಯಲ್ಲಿರುವ ಆಹಾರವನ್ನು ಜೀರ್ಣಿಸುವ ಜಠರಾಗ್ನಿಯು ಬಹಳವಾಗಿ ಬೇಯಿಸುತ್ತಿರುವನು. ಅಲ್ಲಿ ಏನೇನು ದುಃಖಗಳಾಗುವವೋ ಅವನ್ನು ಸಂಪೂರ್ಣವಾಗಿ ಹೇಳಲು ಯಾರಿಗೆ ತಾನೆ ಸಾಧ್ಯವಾದೀತು? (ಇಂಥ ಕಷ್ಟದಲ್ಲಿ ಸಿಲುಕಿದ ನಾನು ಶಂಕರನನ್ನು ನೆನೆಯಲಾಗಲಿಲ್ಲ.) ಎಲೈ ಶ್ರೀ ಮಹಾದೇವನೆ, ಶಂಭುವೆ, ಈ ನನ್ನ ಅಪರಾಧವನ್ನು ಕ್ಷಮಿಸುವವನಾಗು.

ಬಾಲ್ಯೇ ದುಃಖಾತಿರೇಕಾನ್ಮಲಲುಲಿತವಪುಃ ಸ್ತನ್ಯಪಾನೇ ಪಿಪಾಸಾ
ನೋ ಶಕ್ಯಂ ಚೇಂದ್ರಿಯೇಭ್ಯೋ ಭವಗುಣಜನಿತಾ ಜಂತವೋ ಮಾಂ ತುದಂತಿ ।
ನಾನಾರೋಗಾದಿದುಃಖಾದ್ರುದಿತಪರವಶಶ್ಶಂಕರಂ ನ ಸ್ಮರಾಮಿ
ಕ್ಷಂತವ್ಯೋ ಮೇಽಪರಾಧಶ್ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೨ ॥

೨. ಮಗುವಾಗಿರುವಾಗ ಮಿತಿಮೀರಿದ ಅಳುವಿನ ಕಾರಣದಿಂದಲೂ ಮೈಯಲ್ಲಿ ಕೊಳೆಯು ಹತ್ತಿಕೊಂಡಿದ್ದರೂ ಮೊಲೆಯಹಾಲು ಕುಡಿಯಲು ಆತುರ - ಬಾಯಾರಿಕೆಗಳಿಂದಲೂ ಕೂಡಿದವನಾಗಿರುವೆನು. ಯಾವ ಇಂದ್ರಿಯಪಾಟವವೂ ಇಲ್ಲದ, ಮತ್ತು ಸಂಸಾರದಲ್ಲಿ ನನ್ನಂತೆಯೇ ಕರ್ಮವಶದಿಂದ ಹುಟ್ಟಿರುವ ಕ್ಷುದ್ರಪ್ರಾಣಿಗಳು (ಸೊಳ್ಳೆ, ತಿಗಣೆ, ಇರುವೆ - ಮುಂತಾದವು) ನನ್ನನ್ನು ಕಚ್ಚುತ್ತಿರುವವು. ಹೀಗೆ ಕಚ್ಚಿದ್ದರಿಂದಲೂ ಎಳೆಯ ವಯಸ್ಸಿನಲ್ಲಿ ಬರುವ (ಶೀತ, ನೆಗಡಿ, ಜ್ವರ - ಮುಂತಾದ) ಅನೇಕರೋಗಗಳು ದುಃಖದಿಂದಲೂ ಪಾಪಪರವಶನಾದ ನಾನು ಶಂಕರನನ್ನು ಸ್ಮರಿಸದೆ ಇದ್ದೇನೆ. ಎಲೈ ಶಂಭುವೆ, ಈ ನನ್ನ ಅಪರಾಧವನ್ನು ಕ್ಷಮಿಸುವವನಾಗು.

**ಪ್ರೌಢೋಽಹಂ ಯೌವನಸ್ಥೋ ವಿಷಯವಿಷಧರೈಃ ಪಂಚಭಿರ್ಮರ್ಮಸಂಧೌ**
**ದಷ್ಟೋ ನಷ್ಟೋಽವಿವೇಕಃ ಸುತಧನಯುವತಿಸ್ವಾದುಸೌಖ್ಯೇ ನಿಷಣ್ಣಃ ।**
**ಶೈವೀಚಿಂತಾವಿಹೀನಂ ಮಮ ಹೃದಯಮಹೋ ಮಾನಗರ್ವಾಧಿರೂಢಂ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೩ ॥**

೩. ಯುವಕನಾದಾಗ ನಾನು ಬಲಿತುಕೊಂಡವನಾದೆನಾದರೂ ವಿಷಯಗಳೆಂಬ ಐದು ಹಾವುಗಳಿಂದ ಮರ್ಮಸಂಧಿಯಲ್ಲಿ ಕಚ್ಚಲ್ಪಟ್ಟು ನಷ್ಟನಾಗಿ, ಅವಿವೇಕಿಯಾಗಿ ಮಗ, ಹಣ, ಸ್ತ್ರೀ - ಮುಂತಾದ ರುಚಿಯಾದ ವಿಷಯಸುಖಗಳಲ್ಲಿ ನಿರತನಾಗಿಬಿಟ್ಟೆನು. ಆಗ್ಗೆ ನನ್ನ ಹೃದಯವು ಅಹಂಕಾರಜಂಭಗಳಿಂದ ಕೂಡಿದ್ದು ಅಯ್ಯೋ, ಈಶ್ವರನ ವಿಷಯಕವಾದ ಚಿಂತೆಯಿಲ್ಲದ್ದಾಗಿ ಬಿಟ್ಟಿತು! ಎಲೈ ಶಿವನೆ, ಮಹಾದೇವನಾದ ಶಂಭುವೆ, ಈ ನನ್ನ ಅಪರಾಧವನ್ನು ಕ್ಷಮಿಸು.

**ವಾರ್ಧಕ್ಯೇ ಚೇಂದ್ರಿಯಾಣಾಂ ವಿಕಲಗತಮತಿಶ್ಚಾಧಿದೈವಾದಿತಾಪೈಃ**
**ಪಾಪೈ ರೋಗೈ ರ್ವಿಯೋಗೈರ್ವ್ಯಸನಕೃಶತನುರ್ಜ್ಞಪ್ತಿಹೀನಂ ಚ ದೀನಮ್ ।**
**ಮಿಥ್ಯಾ ಮೋಹಾಭಿಲಾಷೈರ್ಭ್ರಮತಿ ಮಮ ಮನೋ ಧೂರ್ಜಟೇರ್ಧ್ಯಾನಶೂನ್ಯಂ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೪ ॥**

೪. ಮುಪ್ಪಿನಲ್ಲಿ ಇಂದ್ರಿಯಗಳ (ದೌರ್ಬಲ್ಯದಿಂದ) ಸಡಿಲವಾದ ಬುದ್ಧಿಯವನಾಗಿ ಹೊರಗಿನ ಶೀತೋಷ್ಣಾದಿತಾಪಗಳಿಂದಲೂ ಪಾಪಗಳು, ರೋಗಗಳು, (ಇಷ್ಟ ವಸ್ತುಗಳ) ವಿಯೋಗಗಳಿಂದಲೂ ಬಳಲಿಬೆಂಡಾದ ಶರೀರದವನಾಗಿ ಅರಿವಿಲ್ಲದೆ ಕುಸಿದುಬಿದ್ದವನಾದೆನು. ಸುಳ್ಳೇ ಆಗಿರುವ ವಸ್ತುಗಳ ಮೇಲಿನ ಆಶೆ ಆಕಾಂಕ್ಷೆಗಳಿಂದ ನನ್ನ ಮನಸ್ಸು ಧೂರ್ಜಟಿಯಾದ ಶಿವನ ಧ್ಯಾನವೇ ಇಲ್ಲದ್ದಾಯಿತು. ಎಲೈ ಶಿವನೆ, ಮಹಾದೇವನಾದ ಶಂಭುವೆ, ಈ ನನ್ನ ಅಪರಾಧವನ್ನು ಕ್ಷಮಿಸುವವನಾಗು.

ಸ್ನಾತ್ವಾ ಪ್ರತ್ಯೂಷಕಾಲೇ ಸ್ನಪನವಿಧಿವಿಧೌ ನಾಹೃತಂ ಗಾಂಗತೋಯಂ
ಪೂಜಾರ್ಥಂ ವಾ ಕದಾಜಿತ್ ಬಹುತರಗಹನೇಽಖಂಡಬಿಲ್ವೀದಳಾನಿ ।
ನಾನೀತಾ ಪದ್ಮಮಾಲಾ ಸರಸಿ ವಿಕಸಿತಾ ಗಂಧಪುಷ್ಪೈಸ್ತ್ವದರ್ಥಂ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೫ ॥

೫. ಉಷಃಕಾಲದಲ್ಲಿ ಸ್ನಾನಮಾಡಿ ಅಭಿಷೇಕಕಾರ್ಯಕ್ಕಾಗಿ ಶಾಸ್ತ್ರ ರೀತಿಯಿಂದ ಅಗ್ರೋದಕವಾಗಿ ಗಂಗೆಯ ನೀರನ್ನು ನಾನು ತರಲಿಲ್ಲ. ಮತ್ತು ಪೂಜೆಗಾಗಿ ಬಹಳವಾದ (ಬಿಲ್ವವೃಕ್ಷಗಳ) ಕಾಡಿನಲ್ಲಿ ಸುತ್ತಾಡಿ ತುಂಡಾಗದೆ ಇರುವ ಬಿಲ್ವಪತ್ರೆಯ ದಳಗಳನ್ನು ಸಹ ಯಾವಾಗಲೂ ತರಲಿಲ್ಲ. ಸರೋವರದಲ್ಲಿ ಅರಳಿದ ಕಮಲಗಳ ಮಾಲೆಯನ್ನೂ ಸುವಾಸನೆಯುಳ್ಳ ಪುಷ್ಪಗಳನ್ನೂ ಪೂಜೆಗಾಗಿ ನಿನಗೋಸ್ಕರ ತರಲಿಲ್ಲ. ಎಲೈ ಶಂಭುವೆ, ಮಹಾದೇವನಾದ ಶಿವನೆ, ನನ್ನ ಅಪರಾಧವನ್ನು ಕ್ಷಮಿಸುವವನಾಗು.

ದುಗ್ಧೈರ್ಮಧ್ವಾಜ್ಯಯುಕ್ತೈರ್ದಧಿಗುಡಸಹಿತೈಃ ಸ್ನಾಪಿತಂ ನೈವ ಲಿಂಗಂ
ನೋ ಲಿಪ್ತಂ ಚಂದನಾದ್ಯೈಃ ಕನಕವಿರಚಿತೈಃ ಪೂಜಿತಂ ನ ಪ್ರಸೂನೈಃ ।
ಧೂಪೈಃ ಕರ್ಪೂರದೀಪೈಃ ವಿವಿಧರಸಯುತೈರ್ನೈವ ಭಕ್ಷ್ಯೋಪಹಾರೈಃ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೬ ॥

೬. ಜೇನು, ತುಪ್ಪ, ಮೊಸರು, ಬೆಲ್ಲಗಳಿಂದ ಕೂಡಿದ ಹಾಲು (ಪಂಚಾಮೃತ)ಗಳಿಂದ ಲಿಂಗಕ್ಕೆ ಸ್ನಾನಮಾಡಿಸಲಿಲ್ಲ. ಚಂದನಾದಿಗಳಿಂದ ಬಳಿಯಲೂ ಇಲ್ಲ. ಸುವರ್ಣನಿರ್ಮಿತವಾದ ಪುಷ್ಪಗಳಿಂದ ಪೂಜಿಸಲಿಲ್ಲ. ಮತ್ತು ಧೂಪ, ಕರ್ಪೂರಾರತಿ, ದೀಪ, ಹಾಗೂ ನಾನಾರಸೋಪೇತವಾದ ತಿಂಡಿತಿನುಸುಗಳ ಉಪಹಾರಗಳಿಂದ ಕೂಡಿದ ನೈವೇದ್ಯವನ್ನೂ ಸಮರ್ಪಿಸಲಿಲ್ಲ. ಎಲೈ ಶಿವನೆ, ಮಹಾದೇವನಾದ ಶಂಭುವೆ, ಈ ನನ್ನ ಅಪರಾಧವನ್ನು ಕ್ಷಮಿಸು.

ನೋ ಶಕ್ಯಂ ಸ್ಮಾರ್ತಕರ್ಮ ಪ್ರತಿಪದಗಹನಪ್ರತ್ಯವಾಯಾಕುಲಾಢ್ಯಂ
ಶ್ರೌತೇ ವಾರ್ತಾ ಕಥಂ ಮೇ ದ್ವಿಜಕುಲವಿಹಿತೇ ಬ್ರಹ್ಮಮಾರ್ಗಾನುಸಾರೇ ।
ಜ್ಞಾತೇ ತತ್ತ್ವೇ ವಿಚಾರೇ ಶ್ರವಣಮನನಯೋಃ ಕೋ ನಿದಿಧ್ಯಾಸಿತವ್ಯಃ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೭ ॥

೭. ಒಂದೊಂದು ಹೆಜ್ಜೆಗೂ ಕಠಿನವಾದ ನಿಯಮಗಳುಳ್ಳ ಹಾಗೂ ತಪ್ಪಾಗಿ ಮಾಡಿದರೆ ದೋಷಬರುವಂಥ ಸ್ಮೃತ್ಯುಕ್ತವಾದ ಶಾಸ್ತ್ರೀಯಕರ್ಮವು ನನ್ನಿಂದ ಮಾಡಲಾಗಲಿಲ್ಲ. ಹೀಗಿರುವಲ್ಲಿ ವೇದಮಾರ್ಗವನ್ನೇ ಅನುಸರಿಸಿರುವ, ವೈದಿಕ ಕುಲದವರಿಗೇ ವಿಹಿತವಾದ ಶ್ರೌತಕರ್ಮಗಳ ಸುದ್ದಿಯಾದರೂ ನನಗೆ ಎಲ್ಲಿಯದು? ಇನ್ನು ಶ್ರವಣಮನನಗಳ ರಹಸ್ಯವಾಗಲಿ, ತತ್ತ್ವವಿಚಾರವಾಗಲಿ ಏನೂ ಗೊತ್ತಿಲ್ಲದೆ

ಇರುವಾಗ * ಯಾರನ್ನು ಹೃದಯದಲ್ಲಿ ಚಿಂತಿಸಲಿ? ಎಲೈ ಶಿವನೆ, ಮಹಾದೇವನಾದ ಶಂಭುವೆ, ನನ್ನ ಈ ಎಲ್ಲಾ ಅಪರಾಧಗಳನ್ನೂ ನೀನು ಕ್ಷಮಿಸುವವನಾಗು.

**ಧ್ಯಾತ್ವಾ ಚಿತ್ತೇ ಶಿವಾಖ್ಯಂ ಪ್ರಚುರತರಧನಂ ನೈವ ದತ್ತಂ ದ್ವಿಜೇಭ್ಯೋ**
**ಹವ್ಯಂ ತೇ ಲಕ್ಷಸಂಖ್ಯೈಃ ಹುತವಹವದನೇ ನಾರ್ಪಿತಂ ಬೀಜಮಂತ್ರೈಃ ।**
**ನೋ ತಪ್ತಂ ಗಾಂಗತೀರೇ ವ್ರತಜಪನಿಯಮೈಃ ರುದ್ರಜಾಪ್ಯೈರ್ನ ವೇದೈಃ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೮ ॥**

೮. ಶಿವನೆಂಬ (ತತ್ತ್ವವನ್ನು) ಮನಸ್ಸಿನಲ್ಲಿ ಧ್ಯಾನಮಾಡಿ ಬಹಳವಾಗಿ ಧಾರಾಳವಾದ ಬುದ್ಧಿಯಿಂದ ಬ್ರಾಹ್ಮಣರಿಗೆ ಹಣವನ್ನು ನಾನು ದಾನಮಾಡಲಿಲ್ಲ. ಬೀಜಮಂತ್ರಗಳಿಂದ ಲಕ್ಷಗಟ್ಟಲೆಯ ಸಂಖ್ಯೆಯಲ್ಲಿ ಅಗ್ನಿಯಲ್ಲಿ ನಿನಗೆ ಹೋಮ ದ್ರವ್ಯವನ್ನೂ ಅರ್ಪಿಸಲಿಲ್ಲ. ಮತ್ತು ಗಂಗಾತೀರದಲ್ಲಿ ವ್ರತನಿಯಮಗಳು, ಜಪಸಂಖ್ಯೆಯ ನಿಯಮಗಳಿಂದಾಗಲಿ, ರುದ್ರಪಾರಾಯಣಗಳಿಂದಲಾಗಲಿ, ವೇದ ಪಾಠಗಳಿಂದಾಗಲಿ, ತಪಸ್ಸನ್ನು ಮಾಡಲಿಲ್ಲ. ಎಲೈ ಶಿವನೆ, ಮಹಾದೇವನಾದ ಶಂಭುವೆ, ಈ ನನ್ನ ಅಪರಾಧಗಳನ್ನು ಕ್ಷಮಿಸುವನಾಗು.

**ನಗ್ನೋ ನಿಸ್ಸಂಗಶುದ್ಧ ಸ್ತ್ರಿಗುಣವಿರಹಿತೋ ಧ್ವಸ್ತಮೋಹಾಂಧಕಾರಃ**
**ನಾಸಾಗ್ರೇ ನ್ಯಸ್ತದೃಷ್ಟಿರ್ವಿದಿತಭವಗುಣೋ ನೈವ ದೃಷ್ಟಃ ಕದಾಚಿತ್ ।**
**ಉನ್ಮತ್ತಾವಸ್ಥಯಾ ತ್ವಾಂ ವಿಗತಕಲಿಮಲಂ ಶಂಕರಂ ನ ಸ್ಮರಾಮಿ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೯ ॥**

೯. ದಿಗಂಬರನಾಗಿ ನಿಸ್ಸಂಗನೂ ಚಿತ್ತಶುದ್ಧಿಯುಳ್ಳವನೂ ತ್ರಿಗುಣಗಳನ್ನು ಮೀರಿದವನೂ ಅಜ್ಞಾನವೆಂಬ ಕತ್ತಲೆಯನ್ನು ಕಳೆದುಕೊಂಡವನೂ ಆಗಿ, ಮೂಗಿನ ತುದಿಯಲ್ಲಿ ನೆಟ್ಟದೃಷ್ಟಿಯುಳ್ಳವನಾಗಿ, ಸಂಸಾರದ (ಅಸಾರತೆಯೆಂಬ) ಗುಣವನ್ನು ಅರಿತು ವಿರಕ್ತನಾಗಿ ನಿನ್ನನ್ನು ಯಾವಾಗಲೂ ಕಂಡಕೊಳ್ಳಲಿಲ್ಲ. ಕಲಿದೋಷದೂರನಾದ ಶಂಕರನನ್ನು (ಅಜ್ಞಾನವೆಂಬ) ಹುಚ್ಚಿನ ಸ್ಥಿತಿಯಿಂದ ಈವರೆಗೂ ಸ್ಮರಿಸದೆ ಇದ್ದೇನೆ. ಎಲೈ ಶಿವನೆ, ಮಹಾದೇವನಾದ ಶಂಭುವೆ, ನನ್ನ ಅಪರಾಧಗಳನ್ನು ಕ್ಷಮಿಸುವನಾಗು.

**ಸ್ಥಿತ್ವಾ ಸ್ಥಾನೇ ಸರೋಜೇ ಪ್ರಣವಮಯಮರುತ್ಕುಂಡಲೇ ಸೂಕ್ಷ್ಮಮಾರ್ಗೇ**
**ಶಾಂತೇ ದಾಂತೇ ಪ್ರಲೀನೇ ಪ್ರಕಟಿತಗಹನೇ ದಿವ್ಯರೂಪೇ ಶಿವಾಖ್ಯೇ ।**
**ಲಿಂಗಾಗ್ರೇ ಬ್ರಹ್ಮವಾಕ್ಯೇ ಸಕಲಗತತನೌ ಶಂಕರಂ ನ ಸ್ಮರಾಮಿ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೧೦ ॥**

* 'ಜ್ಞಾತೇ' ಎಂಬುದನ್ನು 'ಅಜ್ಞಾತೇ' ಎಂಬರ್ಥದಲ್ಲಿ ಪರಿವರ್ತಿಸಿಕೊಂಡು ಅರ್ಥವನ್ನು ಬರೆದಿದೆ. 'ತತ್ತ್ವೇಽಜ್ಞಾತೇ' ಎಂಬ ಪಾಠವೂ ಇದೆ.

೧೦. ಹೃದಯಕಮಲವೆಂಬ ಸ್ಥಾನದಲ್ಲಿ ನಿಂತು ಓಂಕಾರಮಯವಾದ ಪ್ರಾಣಾಯಾಮಕ್ರಮದಿಂದ ಸೂಕ್ಷ್ಮವಾದ ಕುಂಡಲಿನೀಮಾರ್ಗದಲ್ಲಿ ಹೊಕ್ಕು ಶಾಂತವೂ ದಾಂತವೂ ದ್ವೈತರಹಿತವೂ ದುರ್ಗಮವೂ ಆದ ಶಿವನೆಂಬ ಹೆಸರಿನ ಲಿಂಗದ ಪರಮಾವಧಿಯಲ್ಲಿ ವೇದವಾಕ್ಯಗಳಲ್ಲಿ (ಅಡಗಿರುವ) ಉಪಾಧಿರಹಿತವಾದ, ಅಶರೀರವಾದ ಸ್ಥಿತಿಯಲ್ಲಿ ನಿಂತು ನಾನು ಶಂಕರನನ್ನು ನೆನೆಯಲಿಲ್ಲ. ಎಲೈ ಮಹಾದೇವನಾದ ಶಂಭುವೆ, ಶಿವನೆ, ಈ ನನ್ನ ಅಪರಾಧವನ್ನು ಕ್ಷಮಿಸುವವನಾಗು.

**ಹೃದ್ಯಂ ವೇದಾಂತವೇದ್ಯಂ ಹೃದಯಸರಸಿಜೇ ದೀಪಮುದ್ಯತ್ಪ್ರಕಾಶಂ**
**ಸತ್ಯಂ ಶಾಂತಸ್ವರೂಪಂ ಸಕಲಮುನಿಮನಃಪದ್ಮಷಂಡೈಕವೇದ್ಯಮ್ ।**
**ಜಾಗ್ರತ್ಸ್ವಪ್ನೇ ಸುಷುಪ್ತೌ ತ್ರಿಗುಣವಿರಹಿತಂ ಶಂಕರಂ ನ ಸ್ಮರಾಮಿ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀ ಮಹಾದೇವ ಶಂಭೋ ॥ ೧೧ ॥**

೧೧. ಹೃದಯಕ್ಕೆ ಮೆಚ್ಚಾದದ್ದೂ ವೇದಾಂತಗಳಿಂದ ತಿಳಿಯಬರತಕ್ಕದ್ದೂ ಹೃದಯಕಮಲದಲ್ಲಿ ಚೆನ್ನಾಗಿ ಬೆಳಗುತ್ತಿರುವ ದೀಪವೂ, ಸತ್ಯವೂ ಶಾಂತ ಸ್ವರೂಪವೂ ಎಲ್ಲಾ ಋಷಿಗಳ ಮನಸ್ಸೆಂಬ ಪದ್ಮದಲ್ಲಿ ಮಾತ್ರವೇ ತಿಳಿಯಬರತಕ್ಕದ್ದೂ ಎಚ್ಚರ ಕನಸುನಿದ್ರೆಗಳಲ್ಲಿ ಮೂರು ಗುಣಗಳಿಂದ ರಹಿತವಾದದ್ದೂ ಆಗಿರುವ ಶಂಕರನೆಂಬ ತತ್ತ್ವವನ್ನು ನಾನು ನೆನೆಯಲಿಲ್ಲ. ಎಲೈ ಮಹಾದೇವನೆ, ಶಂಭುವೆ, ನನ್ನ ಅಪರಾಧಗಳನ್ನು ಕ್ಷಮಿಸು.

**ಚಂದ್ರೋದ್ಭಾಸಿತಶೇಖರೇಸ್ಮರಹರೇ ಗಂಗಾಧರೇ ಶಂಕರೇ**
**ಸರ್ಪೈರ್ಭೂಷಿತಕಂಠಕರ್ಣವಿವರೇ ನೇತ್ರೋತ್ಥವೈಶ್ವಾನರೇ ।**
**ದಂತಿತ್ವಕ್ಕೃತಸುಂದರಾಂಬರಧರೇ ತ್ರೈಲೋಕ್ಯಸಾರೇ ಹರೇ**
**ಮೋಕ್ಷಾರ್ಥಂ ಕುರು ಚಿತ್ತವೃತ್ತಿಮಖಿಲಾಮನ್ಯೈಸ್ತು ಕಿಂ ಕರ್ಮಭಿಃ ॥ ೧೨ ॥**

೧೨. ಎಲೈ ಮನಸ್ಸೆ, ಚಂದ್ರನಿಂದ ಬೆಳಗುತ್ತಿರುವ ಜಟೆಯುಳ್ಳ, ಮನ್ಮಥನನ್ನು ಸಂಹಾರಮಾಡಿದ, ಗಂಗೆಯನ್ನು ತಲೆಯಲ್ಲಿ ಧರಿಸಿರುವ, ಲೋಕಕ್ಷೇಮಕರನಾದ, ಸರ್ಪಗಳಿಂದ ಅಲಂಕೃತವಾದ ಕಿವಿಗಳು ಹಾಗೂ ಕಂಠವುಳ್ಳ ಮೂರನೆಯ ಕಣ್ಣಿನಿಂದ ಎದ್ದ ಬೆಂಕಿಯುಳ್ಳ, ಆನೆಯ ಚರ್ಮದಿಂದ ಮಾಡಿದ ಸುಂದರವಾದ ಬಟ್ಟೆಯನ್ನು ಧರಿಸಿರುವ ಮೂರು ಲೋಕಗಳ ತಿರುಳಾದ (ಸರ್ವಪಾಪ)ಹರನಾದ ಶಿವನಲ್ಲಿ ಮೋಕ್ಷವನ್ನು ಪಡೆದುಕೊಳ್ಳುವದಕ್ಕಾಗಿ ನಿನ್ನ ಎಲ್ಲಾ ವೃತ್ತಿಗಳನ್ನೂ ಮಾಡುವವನಾಗು. ಉಳಿದ ಕರ್ಮಗಳಿಂದಾಗಬೇಕಾದದ್ದೇನು?

**ಕಿಂ ಯಾನೇನ ಧನೇನ ವಾಜಿಕರಿಭಿಃ ಪ್ರಾಪ್ತೇನ ರಾಜ್ಯೇನ ಕಿಂ**
**ಕಿಂ ವಾ ಪುತ್ರಕಲತ್ರಮಿತ್ರಪಶುಭಿರ್ದೇಹೇನ ಗೇಹೇನ ಕಿಮ್ ।**
**ಜ್ಞಾತ್ವೈತತ್ ಕ್ಷಣಭಂಗುರಂ ಸಪದಿ ರೇ ತ್ಯಾಜ್ಯಂ ಮನೋ ದೂರತಃ**
**ಸ್ವಾತ್ಮಾರ್ಥಂ ಗುರುವಾಕ್ಯತೋ ಭಜ ಭಜ ಶ್ರೀಪಾರ್ವತೀವಲ್ಲಭಮ್ ॥ ೧೩ ॥**

೧೩. ವಾಹನದಿಂದೇನು? ಹಣ, ಕುದುರೆ, ಆನೆಗಳಿಂದೇನು? ರಾಜ್ಯವನ್ನು ಪಡೆದುಕೊಂಡಿದ್ದರಿಂದೇನು? ಮಗ, ಹೆಂಡತಿ, ಸ್ನೇಹಿತ, ಪಶುಗಳು, ಶರೀರ, ಮನೆ - ಇವುಗಳಿಂದಲಾದರೂ ಆಗಬೇಕಾದದ್ದೇನು? ಎಲೈ ಮನವೆ, ಇದೆಲ್ಲವೂ ಒಂದು ಕ್ಷಣಕಾಲವಿದ್ದು ನಾಶವಾಗತಕ್ಕವೆಂದು ತಿಳಿದು ನೀನು ದೂರವಾಗಿ ಬಿಟ್ಟುಬಿಡು. ತನ್ನ ಆತ್ಮೋದ್ಧಾರಕ್ಕಾಗಿ ಗುರುವಾಕ್ಯೋಪದೇಶದಂತೆ ಶ್ರೀ ಪಾರ್ವತೀಪತಿಯಾದ ಶಿವನನ್ನು ಭಜಿಸು.

**ಪೌರೋಹಿತ್ಯಂ ರಜನಿಚರಿತಂ ಗ್ರಾಮಣೀತ್ವಂ ನಿಯೋಗಃ**
**ಮಾಠಾಪತ್ಯಂ ಹ್ಯನೃತವಚನಂ ಸಾಕ್ಷಿವಾದಃ ಪರಾನ್ನಮ್ ।**
**ಬ್ರಹ್ಮದ್ವೇಷಃ ಖಲಜನರತಿಃ ಪ್ರಾಣಿನಾಂ ನಿರ್ದಯತ್ವಂ**
**ಮಾ ಭೂದೇವಂ ಮಮ ಪಶುಪತೇ ಜನ್ಮಜನ್ಮಾಂತರೇಷು ॥ ೧೪ ॥**

೧೪. ಪೌರೋಹಿತ್ಯವನ್ನು ಮಾಡಿಸುವದು, ರಾತ್ರಿವೇಳೆಯಲ್ಲಿ ಮಾಡುವ ನಿಷಿದ್ಧಕರ್ಮಾಚರಣೆಯಲ್ಲಿ ತೊಡಗುವದು, ಊರಿಗೆ ಮುಖಂಡನಾಗುವಿಕೆ, ರಾಯಭಾರಿಯಾಗುವದು, ಮಠಗಳ ಅಧಿಪತಿಯಾಗುವದು, ಸುಳ್ಳುಹೇಳುವದು, ಸಾಕ್ಷಿಹೇಳುವದು, ಮತ್ತೊಬ್ಬರ ಮನೆಯ ಅನ್ನವನ್ನು ತಿನ್ನುವದು, ಬ್ರಾಹ್ಮಣರನ್ನೂ ವೇದಗಳನ್ನೂ ಹಗೆಮಾಡುವದು, ದುಷ್ಟಜನರ ಸಹವಾಸವನ್ನು ಪ್ರೀತಿಸುವದು, ಪ್ರಾಣಿಗಳಲ್ಲಿ ಕನಿಕರವಿಲ್ಲದವನಾಗಿರುವದು - (ಇವೇ ಮುಂತಾದದ್ದು) ಎಲೈ ಪಶುಪತಿಯೆ, ನನಗೆ ಜನ್ಮಜನ್ಮಾಂತರಗಳಲ್ಲಿಯೂ ಒದಗದೆ ಇರಲಿ.

**ಆಯುರ್ನಶ್ಯತಿ ಪಶ್ಯತಾಂ ಪ್ರತಿದಿನಂ ಯಾತಿ ಕ್ಷಯಂ ಯೌವನಂ**
**ಪ್ರತ್ಯಾಯಾನ್ತಿ ಗತಾಃ ಪುನರ್ನ ದಿವಸಾಃ ಕಾಲೋ ಜಗದ್ಭಕ್ಷಕಃ ।**
**ಲಕ್ಷ್ಮೀಸ್ತೋಯತರಂಗಭಂಗಚಪಲಾ ವಿದ್ಯುಚ್ಚಲಂ ಜೀವಿತಂ**
**ತಸ್ಮಾನ್ಮಾಂ ಶರಣಾಗತಂ ಶರಣದ ತ್ವಂ ರಕ್ಷ ರಕ್ಷಾಧುನಾ ॥ ೧೫ ॥**

೧೫. ನೋಡುತ್ತಿರುವಂತೆಯೇ ಪ್ರತಿದಿನವೂ ಆಯುಸ್ಸು ಮುಗಿದು ಹೋಗುತ್ತಿದೆ. ಯೌವನವೂ ಕ್ಷೀಣಿಸುತ್ತಿದೆ. ಕಳೆದುಹೋದದಿನಗಳು ಮತ್ತೆ ಬರಲಾರವು. ಕಾಲನು ಜಗತ್ತನ್ನೇ ತಿನ್ನುತ್ತಿರುವನು. ಐಶ್ವರ್ಯವಾದರೋ ನೀರಿನ ಅಲೆಯಂತೆ ಚಂಚಲವಾಗಿರುವದು. ಬದುಕು ಎಂಬುದು ಮಿಂಚಿನಂತೆ ತೋರಿಹಾರುತ್ತಿರುವದು. ಆದ್ದರಿಂದ ಶರಣಾಗತನಾದ ನನ್ನನ್ನು ಎಲೈ ಶರಣ್ಯನೆ, ಈಗ ಕಾಪಾಡು ; ಕಾಪಾಡುವವನಾಗು.

**ಹರ ಶಂಭೋ ಮಹಾದೇವ ವಿಶ್ವೇಶಾಮರವಲ್ಲಭ ।**
**ಶಿವ ಶಂಕರ ಸರ್ವಾತ್ಮನ್ ನೀಲಕಂಠ ನಮೋಽಸ್ತು ತೇ ॥ ೧೬ ॥**

೧೬. ಸರ್ವಪಾಪಪರಿಹಾರಕನೆ, ಸುಖಪ್ರದನೆ, ಮಹಾದೇವನೆ, ವಿಶ್ವೇಶನೆ, ದೇವತೆಗಳೊಡೆಯನೆ, ಶಿವನೆ, ಶಂಕರನೆ, ಸರ್ವಾತ್ಮನೆ, ನೀಲಕಂಠನೆ, ನಿನಗೆ ನಮಸ್ಕಾರ.

# ೪. ವಿಶ್ವನಾಥಾಷ್ಟಕಮ್

ಗಂಗಾತರಂಗರಮಣೀಯಜಟಾಕಲಾಪಂ
ಗೌರೀನಿರಂತರವಿಭೂಷಿತವಾಮಭಾಗಮ್
ನಾರಾಯಣಪ್ರಿಯಮನಂಗಮದಾಪಹಾರಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥ ೧ ॥

೧. ಗಂಗೆಯ ಅಲೆಗಳ ಚಾಂಚಲ್ಯದಿಂದ ಕೂಡಿದ ಮನೋಹರವಾದ ಜಟೆಗಳ ಸಮೂಹವುಳ್ಳ, ಯಾವಾಗಲೂ ಗೌರೀದೇವಿಯಿಂದ ಅಲಂಕೃತವಾದ ಎಡಭಾಗವುಳ್ಳ ಮಹಾವಿಷ್ಣುವಿಗೆ ಪ್ರಿಯನಾದ, ಮನ್ಮಥನ ಅಹಂಕಾರವನ್ನು ನಾಶಗೊಳಿಸಿದ ವಾರಾಣಸೀಕ್ಷೇತ್ರಪ್ರಭುವಾದ ವಿಶ್ವನಾಥನನ್ನು (ಎಲೈ ಮಾನವನೆ) ಭಜಿಸುವನಾಗು.

ವಾಚಾಮಗೋಚರಮನೇಕಗುಣಸ್ವರೂಪಂ
ವಾಗೀಶವಿಷ್ಣುಸುರಸೇವಿತಪಾದಪೀಠಮ್ ।
ವಾಮೇನ ವಿಗ್ರಹವರೇಣ ಕಳತ್ರವಂತಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥ ೨ ॥

೨. ಮಾತುಗಳಿಗೆ ನಿಲುಕದ ಸ್ವರೂಪದವನಾದ, ಅನೇಕ (ಕಲ್ಯಾಣ) ಗುಣಗಳಿಂದ ಕೂಡಿರುವ ಸ್ವರೂಪನಾದ, ಬ್ರಹ್ಮ, ವಿಷ್ಣು - ಮುಂತಾದ ದೇವತೆಗಳಿಂದ ಆರಾಧಿಸಲ್ಪಟ್ಟ ಪಾದಕಮಲಗಳುಳ್ಳ, ಎಡಭಾಗದ ಶ್ರೇಷ್ಠವಾದ ಶರೀರದಿಂದ ಪತ್ನಿಯುಳ್ಳವನಾದ ವಾರಾಣಸೀ ಪಟ್ಟಣದ ಒಡೆಯನಾದ ವಿಶ್ವನಾಥನನ್ನು ಭಜಿಸುವನಾಗು.

ಭೂತಾಧಿಪಂ ಭುಜಗಭೂಷಣಭೂಷಿತಾಂಗಂ
ವ್ಯಾಘ್ರಾಜಿನಾಂಬರಧರಂ ಜಟಿಲಂ ತ್ರಿನೇತ್ರಮ್ ।
ಪಾಶಾಂಕುಶಾಭಯವರಪ್ರದಶೂಲಪಾಣಿಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥ ೩ ॥

೩. ಭೂತಗಳಿಗೆ ಒಡೆಯನೂ ಸುಂದರವಾದ ಹಾವುಗಳಿಂದ ಅಲಂಕೃತವಾದ ಶರೀರವುಳ್ಳವನೂ ಹುಲಿಯ ಚರ್ಮದ ಬಟ್ಟೆಯನ್ನು ಉಟ್ಟಿರುವವನೂ ಜಟಾಧಾರಿಯೂ ಮುಕ್ಕಣ್ಣನೂ, ಪಾಶ, ಅಂಕುಶ, ಅಭಯ, ವರದ, ಶೂಲ - ಹಸ್ತಗಳಿಂದ ಶೋಭಿತನೂ ಆದ ವಾರಾಣಸೀಕ್ಷೇತ್ರಪತಿಯಾದ ವಿಶ್ವನಾಥನನ್ನು ಭಜಿಸುವವನಾಗು.

ಶೀತಾಂಶುಶೋಭಿತಕಿರೀಟವಿರಾಜಮಾನಂ
ಫಾಲೇಕ್ಷಣಾನಲವಿಶೋಷಿತಪಂಚಬಾಣಮ್ ।
ನಾಗಾಧಿಪಾರಚಿತಭಾಸುರಕರ್ಣಪೂರಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥ ೪ ॥

೪. ಚಂದ್ರನಿಂದ ಅಲಂಕೃತವಾದ ಕಿರೀಟದಿಂದ ಭೂಷಿತನಾದ, ಹಣೆಗಣ್ಣಿನ ಬೆಂಕಿಯಿಂದ ಮನ್ಮಥನನ್ನು ಸುಟ್ಟುಹಾಕಿರುವ, (ವಾಸುಕಿಯೆಂಬ) ನಾಗರಾಜನಿಂದ ಮಾಡಲ್ಪಟ್ಟ ಹೊಳೆಯುತ್ತಿರುವ ಕುಂಡಲಗಳುಳ್ಳ ವಾರಾಣಸೀಪುರಪತಿಯಾದ ವಿಶ್ವನಾಥನನ್ನು ಭಜಿಸುವವನಾಗು.

**ಪಂಚಾನನಂ ದುರಿತಮತ್ತಮತಂಗಜಾನಾಂ**
**ನಾಗಾಂತಕಂ ದನುಜಪುಂಗವಪನ್ನಗಾನಾಮ್ ।**
**ದಾವಾನಲಂ ಮರಣಶೋಕಜರಾಟವೀನಾಂ**
**ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥ ೫ ॥**

೫. ಪಾಪಗಳೆಂಬ ಕೊಬ್ಬಿದ ಆನೆಗಳಿಗೆ ಸಿಂಹನಾಗಿರುವ, ರಾಕ್ಷಸಶ್ರೇಷ್ಠರೆಂಬ ನಾಗಗಳಿಗೆ ಗರುಡನಾಗಿರುವ, ಸಾವು, ದುಃಖ, ಮುಪ್ಪುಗಳೆಂಬ ಸಂಸಾರವನಕ್ಕೆ ಕಾಡುಕಿಚ್ಚಿನಂತಿರುವ ವಾರಾಣಸೀಕ್ಷೇತ್ರವಾಸಿಯಾದ ವಿಶ್ವನಾಥನನ್ನು ಭಜಿಸುವನಾಗು.

**ತೇಜೋಮಯಂ ಸಗುಣನಿರ್ಗುಣಮದ್ವಿತೀಯಂ**
**ಆನಂದಕಂದಮಪರಾಜಿತಮಪ್ರಮೇಯಮ್ ।**
**ನಾದಾತ್ಮಕಂ ಸಕಳನಿಷ್ಕಳಮಾತ್ಮರೂಪಂ**
**ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥ ೬ ॥**

೬. ಬೆಳಕಿನ ಗನಿಯಾದ ಸಗುಣನೂ ನಿರ್ಗುಣನೂ ಆಗಿರುವ, ತನಗೆರಡನೆಯದಿಲ್ಲದ ಒಂದೇ ಆಗಿರುವ ಆನಂದರೂಪನಾದ, ಪರಾಜಯರಹಿತನಾದ, ಅಳೆಯಲಸಾಧ್ಯನಾದ, ನಾದಾತ್ಮಕನೂ, ಸಕಳನೂ ನಿಷ್ಕಳನೂ ಆತ್ಮರೂಪನೂ ಆಗಿರುವ, ವಾರಾಣಸೀಕ್ಷೇತ್ರವಾಸಿಯಾದ ವಿಶ್ವನಾಥನನ್ನು ಭಜಿಸುವವನಾಗು.

**ಆಶಾಂ ವಿಹಾಯ ಪರಿಹೃತ್ಯ ಪರಸ್ಯ ನಿನ್ದಾಂ**
**ಪಾಪೇ ರತಿಂ ಚ ಸುನಿವಾರ್ಯ ಮನಸ್ಸಮಾಧೌ ।**
**ಆದಾಯ ಹೃತ್ಕಮಲಮಧ್ಯಗತಂ ಪರೇಶಂ**
**ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥ ೭ ॥**

೭. ಆಸೆಯನ್ನು ಬಿಟ್ಟು ಮತ್ತೊಬ್ಬರ ದೂಷಣೆಯಿಂದ ಹಿಂದಕ್ಕೆ ಸರಿದು ಪಾಪದಲ್ಲಿ ಆಸಕ್ತಿಯನ್ನು ಚೆನ್ನಾಗಿ ಕಳೆದುಕೊಂಡು ಮನಸ್ಸನ್ನು ಸಮಾಧಾನಗೊಳಿಸಿ, ಹೃದಯಕಮಲದ ನಡುವೆ ಇದ್ದುಕೊಂಡಿರುವ, ಪರಮೇಶ್ವರನನ್ನು ಮನಸ್ಸಿಗೆ ತಂದುಕೊಡು ವಾರಾಣಸೀಕ್ಷೇತ್ರವಾಸಿಯಾದ ವಿಶ್ವನಾಥನನ್ನು ಭಜಿಸುವವನಾಗು.

**ರಾಗಾದಿದೋಷರಹಿತಂ ಸ್ವಜನಾನುರಾಗಂ**
**ವೈರಾಗ್ಯಶಾಂತಿನಿಲಯಂ ಗಿರಿಜಾಸಹಾಯಮ್ ।**
**ಮಾಧುರ್ಯಧೈರ್ಯಸುಭಗಂ ಗರಳಾಭಿರಾಮಂ**
**ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ।೮॥**

೮. ಕಾಮವೇ ಮುಂತಾದ ದೋಷಗಳಿಲ್ಲದವನಾದ. ತನ್ನ ಭಕ್ತರಲ್ಲಿ ಪ್ರೇಮವುಳ್ಳವನಾದ, ವೈರಾಗ್ಯ, ಶಾಂತಿಗಳಿಗೆ ಆಸರೆಯಾಗಿರುವ, ಪಾರ್ವತೀಸಖನಾದ, ಮಾಧುರ್ಯ, ಧೈರ್ಯಗಳಿಂದ ಕೂಡಿರುವ, ಕಂಠದಲ್ಲಿ ವಿಷದಿಂದ ಮನೋಹರನಾಗಿ ಕಾಣುವ ವಾರಾಣಸೀಕ್ಷೇತ್ರವಾಸಿಯಾದ ವಿಶ್ವನಾಥನನ್ನು ಭಜಿಸುವವನಾಗು.

**ವಾರಾಣಸೀಪುರಪತೇಃ ಸ್ತವನಂ ಶಿವಸ್ಯ**
**ವ್ಯಾಸೋಕ್ತಮಷ್ಟಕಮಿದಂ ಪಠತೇ ಮನುಷ್ಯಃ ।**
**ವಿದ್ಯಾಂ ಶ್ರಿಯಂ ವಿಪುಲಸೌಖ್ಯಮನಂತಕೀರ್ತಿಂ**
**ಸಂಪ್ರಾಪ್ಯ ದೇಹವಿಲಯೇ ಲಭತೇ ಚ ಮೋಕ್ಷಮ್ ॥೯॥**

೯. ಕಾಶೀಕ್ಷೇತ್ರನಿವಾಸಿಯಾದ ಶಿವನ ಸ್ತೋತ್ರವಾದ ಈ ವ್ಯಾಸೋಕ್ತವಾದ ಅಷ್ಟಕವನ್ನು ಮನುಷ್ಯನು ಪಠಿಸಿದವನಾದರೆ, ವಿದ್ಯೆ, ಸಂಪತ್ತು, ವಿಪುಲ (ತುಂಬಿದ) ಸುಖ, ಅನಂತವಾದ ಕೀರ್ತಿ - ಇವುಗಳನ್ನು ಪಡೆದು ಶರೀರವು ಬಿದ್ದುಹೋದ ಅನಂತರ ಮೋಕ್ಷವನ್ನು ಪಡೆಯುವನು.

**ವಿಶ್ವನಾಥಾಷ್ಟಕಮಿದಂ ಯಃ ಪಠೇತ್ ಶಿವಸನ್ನಿಧೌ**
**ಶಿವಲೋಕಮವಾಪ್ನೋತಿ ಶಿವೇನ ಸಹ ಮೋದತೇ ॥೧೦॥**

೧೦. ಈಶ್ವರನ ಸನ್ನಿಧಿಯಲ್ಲಿ ಈ ವಿಶ್ವನಾಥನ ಅಷ್ಟಕವನ್ನು ಯಾವನು ಪಠಿಸುವನೋ ಅವನು ಶಿವಲೋಕವನ್ನು ಸೇರಿ ಶಿವನೊಡನೆ ಆನಂದಿಸುವನು.

## ೫. ಪಂಚಾಕ್ಷರೀ ಅಷ್ಟೋತ್ತರ ಶತನಾಮಸ್ತೋತ್ರಮ್

ಸೂಚನೆ :- ಈ ಸ್ತೋತ್ರದಲ್ಲಿ ಪರಮೇಶ್ವರನ ೧೦೮ ನಾಮಗಳಿವೆ. ಇವು ಪಂಚಾಕ್ಷರೀಕ್ರಮದಿಂದ ಹೆಣೆಯಲ್ಪಟ್ಟಿವೆ. ಪ್ರತಿಯೊಂದು ಶ್ಲೋಕಾರ್ಧವೂ ಒಂದೊಂದು ನಾಮವಾಗಿದ್ದು ಅರ್ಚನೆಗೂ ಉಪಯೋಗಿಸಬಹುದಾಗಿದೆ. ಇದರ ಮೂಲವು ದೊರೆಯಲಿಲ್ಲ. 'ವ್ರತರತ್ನಮಾಲಾ' ಎಂಬ ಗ್ರಂಥದಿಂದ ಆರಿಸಿಕೊಳ್ಳಲಾಗಿದೆ. ಅದರಲ್ಲಿದ್ದ ೧೦೮ ಕ್ಕಿಂತ ಹೆಚ್ಚಿನ ನಾಮಗಳನ್ನು ಕೈಬಿಡಲಾಗಿದೆ.

ಕೆಲವು ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಿಕೊಂಡಿದೆ. ಈ ಸ್ತೋತ್ರದ ಸಾಹಿತ್ಯವೂ ಅರ್ಥವೂ ಶಿವಭಕ್ತರಿಗೆ ಆಕರ್ಷಕವಾಗಿ ಕಂಡುಬಂದದ್ದರಿಂದ ಈ ಮಾಲೆಯಲ್ಲಿ ಸೇರಿಸಲಾಯಿತು. ವಾಚಕರು ಇದರ ಸದುಪಯೋಗವನ್ನು ಪಡೆಯುವರೆಂದು ಆಶಿಸಲಾಗಿದೆ.

## 'ಓಂ'ಕಾರ ಪೂರ್ವಕವಾದ ನಾಮಗಳು

**ಓಮ್॥ ಓಂಕಾರನಂದನೋದ್ಯಾನಕಲ್ಪಕಾಯ ನಮೋ ನಮಃ ।**
**ಓಂಕಾರಪೀಯೂಷಸರಃಕಮಲಾಯ ನಮೋ ನಮಃ ॥ ೧ ॥**

೧. ಓಂಕಾರವೆಂಬ ನಂದನವನದಲ್ಲಿ ಕಲ್ಪವೃಕ್ಷನಾಗಿರುವವನಿಗೆ ನಮಸ್ಕಾರ. (ಮತ್ತು) ಓಂಕಾರವೆಂಬ ಹಾಲಿನ ಸರೋವರಕ್ಕೆ ಕಮಲದಂತಿರುವವನಿಗೆ ನಮಸ್ಕಾರವು.

**ಓಂಕಾರಪಂಜರಕ್ರೀಡಾವಿಹಂಗಾಯ ನಮೋ ನಮಃ ।**
**ಓಂಕಾರಗಗನಭ್ರಾಜದ್‌ಭಾಸ್ಕರಾಯ ನಮೋ ನಮಃ ॥ ೨ ॥**

೨. ಓಂಕಾರವೆಂಬ ಪಂಜರದಲ್ಲಿ ವಿಹಾರಮಾಡುತ್ತಿರುವ ಪಕ್ಷಿಯಾದವನಿಗೆ ನಮಸ್ಕಾರವು. ಓಂಕಾರವೆಂಬ ಆಕಾಶದಲ್ಲಿ ಹೊಳೆಯುತ್ತಿರುವ ಸೂರ್ಯನಾದವನಿಗೆ ನಮಸ್ಕಾರ.

**ಓಂಕಾರಾದ್ರಿಗುಹಾರತ್ನ ಪ್ರದೀಪಾಯ ನಮೋ ನಮಃ ।**
**ಓಂಕಾರವಿಮಲಾದರ್ಶಬಿಂಬಿತಾಯ ನಮೋ ನಮಃ ॥ ೩ ॥**

೩. ಓಂಕಾರವೆಂಬ ಬೆಟ್ಟದಲ್ಲಿರುವ ಗುಹೆಯಲ್ಲಿ ರತ್ನಮಯವಾದ ದೊಡ್ಡ ದೀಪದಂತೆ ಇರುವವನಿಗೆ ನಮಸ್ಕಾರ. ಓಂಕಾರವೆಂಬ ಸ್ವಚ್ಛವಾದ ಕನ್ನಡಿಯಲ್ಲಿ ಕಾಣಿಸಿಕೊಳ್ಳುವ ಪ್ರತಿಬಿಂಬನಾದವನಿಗೆ ನಮಸ್ಕಾರವು.

**ಓಂಕಾರಶುಕ್ತಿಕಾಮಧ್ಯಮೌಕ್ತಿಕಾಯ ನಮೋ ನಮಃ ।**
**ಓಂಕಾರಪುಟಲಸತ್ ಕರ್ಪೂರಾಯ ನಮೋ ನಮಃ ॥ ೪ ॥**

೪. ಓಂಕಾರವೆಂಬ ಕಪ್ಪೆಚಿಪ್ಪಿನ ನಡುವೆ (ಹುಟ್ಟಿರುವ) ಮುತ್ತಿನಂತಿರುವವನಿಗೆ ನಮಸ್ಕಾರ. ಓಂಕಾರವೆಂಬ ಭರಣಿ (ಡಬ್ಬಿ) ಯಲ್ಲಿ ಸುವಾಸಿತವಾಗಿದ್ದುಕೊಂಡಿರುವ (ಪಚ್ಚ) ಕರ್ಪೂರದಂತಿರುವವನಿಗೆ ನಮಸ್ಕಾರ.

**ಓಂಕಾರಸಾಧ್ವೀಮಾಂಗಲ್ಯಾಭರಣಾಯ ನಮೋ ನಮಃ ।**
**ಓಂಕಾರದಿವ್ಯಕುಸುಮಸೌರಭ್ಯಾಯ ನಮೋ ನಮಃ ॥ ೫ ॥**

೫. ಓಂಕಾರವೆಂಬ ಪತಿವ್ರತೆಯ ಕಂಠಾಭರಣರೂಪನಾಗಿರುವವನಿಗೆ ನಮಸ್ಕಾರ. ಓಂಕಾರವೆಂಬ ದಿವ್ಯವಾದ ಹೂವಿನ ವಾಸನೆಯಂತಿರುವವನಿಗೆ ನಮಸ್ಕಾರವು.

ಓಂಕಾರಖಂಡಖರ್ಜೂರಮಧುರಾಯ ನಮೋ ನಮಃ ।
ಓಂಕಾರಚಂದ್ರಿಕಾಸಾರಶೀತಲಾಯ ನಮೋ ನಮಃ ॥ ೬ ॥

೬. ಓಂಕಾರವೆಂಬ ಖರ್ಜೂರದ ಹಣ್ಣಿನ ಚೂರಿನ ಸಿಹಿಯಾಗಿರುವವನಿಗೆ ನಮಸ್ಕಾರವು. ಓಂಕಾರವೆಂಬ ಬೆಳದಿಂಗಳಿನ ಸಾರವಾದ ತಂಪಿನಂತೆ ಇರುವವನಿಗೆ ನಮಸ್ಕಾರವು.

ಓಂಕಾರವನಿತಾವಕ್ತ್ರಲಾವಣ್ಯಾಯ ನಮೋ ನಮಃ ।
ಓಂಕಾರಾಖ್ಯಪ್ರಪಂಚೈಕಚೈತನ್ಯಾಯ ನಮೋ ನಮಃ ॥ ೭ ॥

೭. ಓಂಕಾರವೆಂಬ ಸುಂದರಳಾದ ಯುವತಿಯ ಮುಖದ ಲಾವಣ್ಯರೂಪನಾದವನಿಗೆ ನಮಸ್ಕಾರ. ಓಂಕಾರವೆಂಬ ಹೆಸರಿನ ಪ್ರಪಂಚದ ಮುಖ್ಯ ಚೇತನನಾಗಿರುವವನಿಗೆ ನಮಸ್ಕಾರವು.

ಓಂಕಾರಚಾರುನಗರಾಧೀಶ್ವರಾಯ ನಮೋ ನಮಃ ।
ಓಂಕಾರಭವನಕ್ರೀಡಮಾರಾಯ ಚ ನಮೋ ನಮಃ ॥ ೮ ॥

೮. ಓಂಕಾರವೆಂಬ ಸುಂದರವಾದ ನಗರದ ಒಡೆಯನಿಗೆ ನಮಸ್ಕಾರವು. ಓಂಕಾರವೆಂಬ ಮನೆಯಲ್ಲಿ ಆಟವಾಡುತ್ತಿರುವ ಮನ್ಮಥನಿಗೆ ನಮಸ್ಕಾರ.

ಓಂಕಾರಬೃಹದಾರಣ್ಯಮೃಗೇಂದ್ರಾಯ ನಮೋ ನಮಃ ।
ಓಂಕಾರನಟನಾಗಾರನರ್ತಕಾಯ ನಮೋ ನಮಃ ॥ ೯ ॥

೯. ಓಂಕಾರವೆಂಬ ಮಹಾರಣ್ಯ(ಕಾಡು)ದಲ್ಲಿರುವ ಸಿಂಹನಿಗೆ ನಮಸ್ಕಾರ. ಓಂಕಾರವೆಂಬ ನೃತ್ಯಶಾಲೆಯ ಮುಖ್ಯ ನಟನಾಗಿರುವವನಿಗೆ ನಮಸ್ಕಾರ.

ಓಂಕಾರಕಲ್ಪಲತಿಕಾಸ್ತಂಭಕಾಯ ನಮೋ ನಮಃ ।
ಓಂಕಾರಲೀಲಾಶೈಲೇಂದ್ರಬರ್ಹಿಣೇ ಚ ನಮೋ ನಮಃ ॥ ೧೦ ॥

೧೦. ಓಂಕಾರವೆಂಬ ಕಲ್ಪವೃಕ್ಷದ ಬಳ್ಳಿಗೆ ಊರುಗೋಲಾಗಿರುವವನಿಗೆ ನಮಸ್ಕಾರ. ಓಂಕಾರವೆಂಬ ಆಟದ ಚಿಕ್ಕ ಬೆಟ್ಟದಲ್ಲಿರುವ ನವಿಲಾಗಿರುವವನಿಗೆ ನಮಸ್ಕಾರ.

ಓಂಕಾರಭಿತ್ತಿಕಾದಿವ್ಯಚಿತ್ರಕಾಯ ನಮೋ ನಮಃ ।
ಓಂಕಾರಗೋಪುರಮಣಿಕಲಶಾಯ ನಮೋ ನಮಃ ॥ ೧೧ ॥

೧೧. ಓಂಕಾರವೆಂಬ ಗೋಡೆಯ ಮೇಲೆ ಚಿತ್ರಿಸಲ್ಪಟ್ಟಿರುವ ದಿವ್ಯಚಿತ್ರನಾಗಿರುವವನಿಗೆ ನಮಸ್ಕಾರ. ಓಂಕಾರನೆಂಬ ಗೋಪುರದ ರತ್ನಶಿಖರದಂತಿರುವವನಿಗೆ ನಮಸ್ಕಾರ.

# 'ನ' ಕಾರ ಪೂರ್ವಕವಾದ ನಾಮಗಳು

**ನವಚಕ್ರಮಹಾಪದ್ಮಸಂಸ್ಥಿತಾಯ ನಮೋ ನಮಃ ।**
**ನಭಃಸ್ಥಲಸ್ಥಭಕ್ತೈಕೋಪಾಸಿತಾಯ ನಮೋ ನಮಃ ॥ ೦೨ ॥**

೦೨. ಒಂಭತ್ತು ಚಕ್ರಗಳ ನಡುವೆ ಇರುವ ಮಹಾಪದ್ಮದಲ್ಲಿ ನೆಲೆಸಿರುವವನಿಗೆ ನಮಸ್ಕಾರ. ಹೃದಯಾಕಾಶದಲ್ಲಿ ನಿಂತು ಚಿಂತಿಸುವ ಭಕ್ತರಿಗೆ ಮಾತ್ರ ಉಪಾಸ್ಯನಾಗಿರುವವನಿಗೆ ನಮಸ್ಕಾರ.

**ನವಲಿಂಗಮಯಾಕಾರಶೋಭಿತಾಯ ನಮೋ ನಮಃ ।**
**ನವಕೋಟಿಗಣಾರಾಧ್ಯಪಾದುಕಾಯ ನಮೋ ನಮಃ ॥ ೦೩ ॥**

೦೩. ಹೊಸದಾದ ಲಿಂಗದ ಆಕಾರದಿಂದ ವಿರಾಜಿಸುವವನಿಗೆ ನಮಸ್ಕಾರ. ಒಂಭತ್ತು ಕೋಟಿ ಗಣದೇವತೆಗಳಿಂದ ಪೂಜಿಸಲ್ಪಡುತ್ತಿರುವ ಪಾದಗಳುಳ್ಳವನಿಗೆ ನಮಸ್ಕಾರ.

**ನವನಂದೀಶ್ವರಸ್ತೋತ್ರಸಂಸ್ತುತಾಯ ನಮೋ ನಮಃ ।**
**ನವಬ್ರಹ್ಮಶಿಖೋತ್ತಂಸನಿಜಾಜ್ಞಾಯ ನಮೋ ನಮಃ ॥ ೦೪**

೦೪. ಒಂಭತ್ತು ಜನ ನಂದೀಶ್ವರರ ಸ್ತುತಿಗಳಿಂದ ಸ್ತೋತ್ರ ಮಾಡಲ್ಪಟ್ಟವನಿಗೆ ನಮಸ್ಕಾರ. ಒಂಭತ್ತು ಜನ ಬ್ರಹ್ಮರುಗಳಿಂದಲೂ ತಲೆಯ ತುದಿಯಿಂದ ಸ್ವೀಕರಿಸಲ್ಪಟ್ಟ ಅಪ್ಪಣೆಯುಳ್ಳಂಥ (ಮಹಾದೇವನಿಗೆ) ನಮಸ್ಕಾರ.

**ನವನೀತಾತಿಮೃದುಲಮಾನಸಾಯ ನಮೋ ನಮಃ ।**
**ನವಾಮೃತರಸಸ್ರಾವವಚನಾಯ ನಮೋ ನಮಃ ॥ ೦೫ ॥**

೦೫. ಬೆಣ್ಣೆಯಂತೆ ಬಹಳ ಮೃದುವಾದ ಮನಸ್ಸುಳ್ಳವನಿಗೆ ನಮಸ್ಕಾರ. ಹೊಸದಾದ ಅಮೃತರಸವನ್ನು ಸುರಿಸುವ ಒಳ್ಳೆಯ ಮಾತುಗಳುಳ್ಳವನಿಗೆ ನಮಸ್ಕಾರ.

**ನರಕಾಂತಕರಾಮೌಘಸಾಯಕಾಯ ನಮೋ ನಮಃ ।**
**ನರಲೋಕತಮಃಪಂಕಕ್ಷಾಳನಾಯ ನಮೋ ನಮಃ ॥ ೦೬ ॥**

೦೬. ನರಕಗಳನ್ನು ನಾಶಪಡಿಸುವಂಥ, ರಾಮಬಾಣಗಳಂತೆ ಸಮರ್ಥವಾದ ಬಾಣಗಳುಳ್ಳವನಿಗೆ ನಮಸ್ಕಾರ. ಮನುಷ್ಯಲೋಕದ (ಅಜ್ಞಾನ) ಕತ್ತಲೆಯೆಂಬ ಕೆಸರನ್ನು ತೊಳೆದುಹಾಕುವವನಿಗೆ ನಮಸ್ಕಾರ.

**ನಗೇಂದ್ರತನಯಾಪ್ರಾಣವಲ್ಲಭಾಯ ನಮೋ ನಮಃ ।**
**ನಯನಾಗ್ನಿಪ್ಲುಷ್ಟಮಾರಶಲಭಾಯ ನಮೋ ನಮಃ ॥ ೦೭ ॥**

೦೭. ಪರ್ವತರಾಜನಾದ ಹಿಮಾಚಲನ ಮಗಳಾದ ಗೌರಿಯ ಪ್ರಿಯವಲ್ಲಭನಾದವನಿಗೆ ನಮಸ್ಕಾರ. ಮನ್ಮಥನೆಂಬ ಪತಂಗದ ಹುಳುವನ್ನು (ಮೂರನೆಯ) ಕಣ್ಣಿನ ಬೆಂಕಿಯಿಂದ ಸುಟ್ಟು ಬೂದಿಮಾಡಿದವನಿಗೆ ನಮಸ್ಕಾರ.

**ನಟನೋತ್ಸವಸೋಲ್ಲಾಸಹೃದಯಾಯ ನಮೋ ನಮಃ ।**
**ನತಾಪದ್ವಾರಿದವ್ರಾತವಾತೂಲಾಯ ನಮೋ ನಮಃ ॥ ೧೮ ॥**

೧೮. (ತಾಂಡವ) ನೃತ್ಯೋತ್ಸವದಲ್ಲಿ ಉಬ್ಬಿದ ಹೃದಯವುಳ್ಳವನಿಗೆ ಸಮಸ್ಕಾರ. ನಮಸ್ಕರಿಸಿದ ಜನರ ಸಂಕಟಗಳೆಂಬ ಮೋಡಗಳ ಗುಂಪಿಗೆ ಬಿರುಗಾಳಿಯಾಗಿರುವವನಿಗೆ ನಮಸ್ಕಾರ.

**ನಕ್ಷತ್ರನಾಥಸಾಹಸ್ರಭಾಸ್ವರಾಯ ನಮೋ ನಮಃ ।**
**ನಖಾಂಶುಚಯನಿರ್ಧೂತತಾರೇಶಾಯ ನಮೋ ನಮಃ । ೧೯ ॥**

೧೯. ಸಾವಿರಚಂದ್ರರುಗಳಿಗೆ ಸಮಾನವಾದ ಕಾಂತಿಯುಳ್ಳವನಿಗೆ ನಮಸ್ಕಾರ. ಉಗುರಿನ ಕಾಂತಿಯ ಸಮೂಹದಿಂದ ಚಂದ್ರನನ್ನು ತಿರಸ್ಕರಿಸಿದವನಿಗೆ ನಮಸ್ಕಾರ.

**ನಳಿನೀದಲಲಗ್ನಾಂಬುನಿರ್ಲೇಪಾಯ ನಮೋ ನಮಃ ।**
**ನಮಃ ಶಿವಾಯಮಂತ್ರಾಧಿದೈವತಾಯ ನಮೋ ನಮಃ ॥**
**ನಮಃ ಕೈಲಾಸಶಿಖರವಾಸ್ತವ್ಯಾಯ ನಮೋ ನಮಃ ॥ ೨೦ ॥**

೨೦. ನೀರಿಗೆ ಅಂಟಿಕೊಳ್ಳದೆ ಇರುವ ತಾವರೆಎಲೆಯಂತೆ ಅಸಂಗನಾಗಿರುವವನಿಗೆ ನಮಸ್ಕಾರ. 'ನಮಃ ಶಿವಾಯ' ಎಂಬ ಮಂತ್ರಕ್ಕೆ ಅಧಿದೈವತನಾಗಿರುವ (ಮುಖ್ಯಧ್ಯೇಯನಾಗಿರುವ) ವನಿಗೆ ನಮಸ್ಕಾರ. ನಮಸ್ಕಾರಕ್ಕೆ ತಕ್ಕದ್ದಾದ ಕೈಲಾಸಶಿಖರದಲ್ಲಿ ವಾಸಮಾಡುತ್ತಿರುವವನಿಗೆ ನಮಸ್ಕಾರ.

## 'ಮ' ಕಾರ ಪೂರ್ವಕವಾದ ನಾಮಗಳು

**ಮಹಾಮೋಹಮಯವ್ಯಾಧಿಭೇಷಜಾಯ ನಮೋ ನಮಃ ।**
**ಮಹಾದೇವಾಭಿಧಾನೈಕಗೂಢಾರ್ಥಾಯ ನಮೋ ನಮಃ ॥ ೨೧ ॥**

೨೧. ಮೋಹವೆಂಬ ಮಹಾರೋಗಕ್ಕೆ ಔಷಧಿಯಾಗಿರುವವನಿಗೆ ನಮಸ್ಕಾರ. 'ಮಹಾದೇವ'ನೆಂಬ ಹೆಸರಿನ ಹೆಚ್ಚಿನ ಗೂಢಾರ್ಥವನ್ನು ಹೊಂದಿರುವವನಿಗೆ ನಮಸ್ಕಾರ.

**ಮಹಾಲಕ್ಷ್ಮೀನಿಧಾನಾಂಘ್ರಿಪರಾಗಾಯ ನಮೋ ನಮಃ ।**
**ಮಂದಾಕಿನೀಸಮುಲ್ಲಾಸಿಪದಾಬ್ಜಾಯ ನಮೋ ನಮಃ ॥ ೨೨ ॥**

೨೨. ಹೆಚ್ಚಿನ ಐಶ್ವರ್ಯಲಕ್ಷ್ಮಿಯ ನಿವಾಸಕ್ಕೆ ಕಾರಣವಾಗಿರುವ ಪಾದ ಧೂಳಿಯುಳ್ಳವನಿಗೆ ನಮಸ್ಕಾರವು. ಆಕಾಶಗಂಗೆಯ ಅಲೆಗಳಿಂದ ವಿರಾಜಮಾನವಾದ ಪಾದಕಮಲಗಳುಳ್ಳವನಿಗೆ ನಮಸ್ಕಾರ.

ಮಮತ್ವಗ್ರಂಥಿವಿಚ್ಛೇದಲಂಪಟಾಯ ನಮೋ ನಮಃ ।
ಮಧುರಾಪಾಂಗಸಂಜಾತಸಾನಂದಾಯ ನಮೋ ನಮಃ ॥ ೨೩ ॥

೨೩. ನನ್ನದು - ಎಂಬ ಅಭಿಮಾನದ ಗಂಟನ್ನು ತುಂಡುಮಾಡುವದರಲ್ಲಿ ಆಸಕ್ತನಾಗಿರುವವನಿಗೆ ನಮಸ್ಕಾರ. ಮನೋಹರವಾದ ಕುಡಿಗಣ್ಣಿನ ನೋಟದಿಂದಲೇ ಉಂಟಾದ ಆನಂದದಿಂದ ಕೂಡಿದ (ಭಕ್ತರುಳ್ಳವನಿಗೆ) ನಮಸ್ಕಾರ.

ಮಲ್ಲಿಕಾಮುಕುಳಾಕಾರರದನಾಯ ನಮೋ ನಮಃ ।
ಮಂದಸ್ಮಿತಪರಾಭೂತಚಂದ್ರಿಕಾಯ ನಮೋ ನಮಃ ॥ ೨೪ ॥

೨೪. ಮಲ್ಲಿಗೆಯ ಮೊಗ್ಗಿನಂತೆ ಆಕಾರವುಳ್ಳ ಹಲ್ಲುಗಳುಳ್ಳವನಿಗೆ ನಮಸ್ಕಾರ. ಮುಗುಳುನಗೆಯಿಂದ ಸೋಲಿಸಲ್ಪಟ್ಟ ಬೆಳದಿಂಗಳುಳ್ಳವನಿಗೆ ನಮಸ್ಕಾರ.

ಮಂಜುಳಾಧರವಿಧ್ವಂಸಬಂಧೂಕಾಯ ನಮೋ ನಮಃ ।
ಮಕರಂದರಸಾಸಾರವಚನಾಯ ನಮೋ ನಮಃ ॥ ೨೫ ॥

೨೫. ಮನೋಹರವಾದ ತುಟಿಗಳ (ಮಾರ್ದವತೆಯಿಂದ) ಹಿಮ್ಮೆಟ್ಟಿಸಲ್ಪಟ್ಟ ಬಂಧೂಕವೆಂಬ ಹೂವುಳ್ಳವನಿಗೆ ನಮಸ್ಕಾರ. ಹೂವಿನ ರಸದ ಸಾರದಂತೆ ಮಧುರವಾದ ಮಾತುಗಳುಳ್ಳವನಿಗೆ ನಮಸ್ಕಾರ.

ಮಂದಾರವಿಟಪಿಸ್ಪರ್ಧಿದೋರ್ದಂಡಾಯ ನಮೋ ನಮಃ ।
ಮಹೋಕ್ಷಕಕುದಾಕಾರಭುಜಾಗ್ರಾಯ ನಮೋ ನಮಃ ॥ ೨೬ ॥

೨೬. ಮಂದಾರವೃಕ್ಷದ ರೆಂಬೆಯನ್ನು ಪ್ರತಿಸ್ಪರ್ಧಿಸುವಂಥ ಬಾಹುಗಳುಳ್ಳವನಿಗೆ ನಮಸ್ಕಾರ. ದೊಡ್ಡದಾದ ಎತ್ತಿನ ಡುಬ್ಬದಂತೆ ಉಬ್ಬಿದ ಭುಜದ ತುದಿಯುಳ್ಳವನಿಗೆ ನಮಸ್ಕಾರ.

ಮಹೀತಲವಿಶಾಲೋರುಫಲಕಾಯ ನಮೋ ನಮಃ ।
ಮಣಿಸೋಪಾನಸಂಕಾಶವಲೀಕಾಯ ನಮೋ ನಮಃ ॥ ೨೭ ॥

೨೭. ಭೂಮಿಯ ಮೈಯಂತೆ ವಿಶಾಲವಾದ ಎದೆಯ ಪ್ರದೇಶವುಳ್ಳವನಿಗೆ ನಮಸ್ಕಾರ. ರತ್ನಮಣಿಗಳ ಮೆಟ್ಟಿಲುಗಳಂತೆ ಹೊಳೆಯುತ್ತಿರುವ ದೇಹಾವಯವಗಳುಳ್ಳವನಿಗೆ ನಮಸ್ಕಾರ. -

ಮದಾವಳಕರಾಂಭೋರುಯುಗಳಾಯ ನಮೋ ನಮಃ ।
ಮಂಜುಪ್ರವಾಳರುಚಿರಪದಾಬ್ಜಾಯ ನಮೋ ನಮಃ ॥
ಮನೋಽನವಾಪ್ಯಸೌಭಾಗ್ಯಸರ್ವಾಂಗಾಯ ನಮೋ ನಮಃ ॥ ೨೮ ॥

೧೮. ಐರಾವತದ ಸೊಂಡಿಲಿನಂತೆ ಇರುವ ಎರಡು ತೊಡೆಗಳುಳ್ಳವನಿಗೆ ನಮಸ್ಕಾರ. ಮನೋಹರವಾದ ಹವಳದಂತೆ ಕಾಂತಿಯುಳ್ಳ ಪಾದಕಮಲಗಳುಳ್ಳವನಿಗೆ ನಮಸ್ಕಾರ. ಮನಸ್ಸಿನಿಂದ ಕೂಡ ಪಡೆಯಲಾಗದಂಥ ಸೌಭಾಗ್ಯದಿಂದೊಡಗೂಡಿದ ಸರ್ವಾಂಗ(ಸುಂದರ)ನಿಗೆ ನಮಸ್ಕಾರ.

## 'ಶಿ' ಕಾರ ಪೂರ್ವಕವಾದ ನಾಮಗಳು

**ಶಿವಾಗಮಜ್ಞಹೃನ್ಮಂಚಮಧ್ಯಸ್ಥಾಯ ನಮೋ ನಮಃ ।**
**ಶಿವಜ್ಞಾನಪಯೋರಾಶಿರಾಕಾಬ್ಜಾಯ ನಮೋ ನಮಃ ॥ ೧೯ ॥**

೧೯. ಶಿವಾಗಮವನ್ನು ಬಲ್ಲವರ ಹೃದಯವೆಂಬ ಮಂಚದ ಮಧ್ಯದಲ್ಲಿರುವವನಿಗೆ ನಮಸ್ಕಾರ. ಶಿವ(ತತ್ತ್ವ) ಜ್ಞಾನವೆಂಬ ತುಂಬಿ ಉಕ್ಕಿದ ಸರೋವರದ ಕಮಲದಂತೆ ಇರುವವನಿಗೆ ನಮಸ್ಕಾರ.

**ಶಿವಭಕ್ತಿಲತಾಮೂಲಸುಕಂದಾಯ ನಮೋ ನಮಃ ।**
**ಶಿವತತ್ತ್ವಾಕ್ಷಗುಳಿಕಾಶೇಖರಾಯ ನಮೋ ನಮಃ ॥ ೨೦ ॥**

೨೦. ಶಿವಭಕ್ತಿಯೆಂಬ ಬಳ್ಳಿಯ ಬುಡದಲ್ಲಿರುವ ಗೆಡ್ಡೆಯಂತೆ ಇರುವವನಿಗೆ ನಮಸ್ಕಾರ. ಶಿವತತ್ತ್ವವೆಂಬ ಸ್ಫಟಿಕದ ಜಪಮಾಲೆಯ ಮಧ್ಯಮಣಿಯಾಗಿರುವವನಿಗೆ ನಮಸ್ಕಾರ.

**ಶಿವಾತ್ಮಭಾವಾಭಿವ್ಯಕ್ತದಿನೇಶಾಯ ನಮೋ ನಮಃ ।**
**ಶಿವಲಿಂಗಾರ್ಚನವ್ಯಗ್ರಕಾಮದೋಗ್ಧ್ರೇ ನಮೋ ನಮಃ ॥ ೨೧ ॥**

೨೧. ಶಿವನೇ ತಾನೆಂಬ ಜ್ಞಾನದಿಂದ ಹೊರಬಂದ ಸೂರ್ಯನಂತೆ ಇರುವವನಿಗೆ ನಮಸ್ಕಾರ. ಶಿವಲಿಂಗವನ್ನು ಪೂಜಿಸುವದರಲ್ಲಿಯೇ ಮಗ್ನನಾದವನಿಗೆ ಇಷ್ಟಾರ್ಥಗಳನ್ನು ಕರೆಯುವ ಕಾಮಧೇನುವಾಗಿರುವವನಿಗೆ ನಮಸ್ಕಾರ.

**ಶಿವಾಹೃದಯಪಾಥೋಜಭ್ರಮರಾಯ ನಮೋ ನಮಃ ।**
**ಶಿವಂಕರನಿಜಾನಂದಸಂಪೂರ್ಣಾಯ ನಮೋ ನಮಃ ॥ ೨೨ ॥**

೨೨. ಪಾರ್ವತೀದೇವಿಯ ಹೃದಯವೆಂಬ ಕಮಲಕ್ಕೆ ದುಂಬಿಯಂತಿರುವವನಿಗೆ ನಮಸ್ಕಾರ. ಮಂಗಳಕರವಾದ ಸ್ವರೂಪಾನಂದದಿಂದ ತುಂಬಿರುವವನಿಗೆ ನಮಸ್ಕಾರ.

**ಶಿಶಿರಾಂಶುಕರೋಲ್ಲಾಸಿ ಕಿರೀಟಾಯ ನಮೋ ನಮಃ ।**
**ಶಿರೀಷಮೃದುಲಾಕಾರವಾಮಾರ್ಧಾಯ ನಮೋ ನಮಃ ॥ ೨೩ ॥**

೨೩. ಚಂದ್ರನ ಕಲೆಗಳಿಂದ ವಿರಾಜಮಾನವಾದ ಕಿರೀಟವುಳ್ಳವನಿಗೆ ನಮಸ್ಕಾರ. ಬಾಗೆಹೂವಿನಂತೆ ಮೃದುವಾದ ಎಡಭಾಗದ ಶರೀರವುಳ್ಳವನಿಗೆ ನಮಸ್ಕಾರ.

ಶೀತಾಂಶುಸೂರ್ಯದಹನನಯನಾಯ ನಮೋ ನಮಃ ।
ಶಿಥಿಲೀಕೃತಸಂಸಾರಬಂಧನಾಯ ನಮೋ ನಮಃ ॥ ೩೪ ॥

೩೪. ಚಂದ್ರ, ಸೂರ್ಯ, ಅಗ್ನಿಗಳನ್ನು ಕಣ್ಣಾಗಿ ಹೊಂದಿರುವವನಿಗೆ ನಮಸ್ಕಾರ. ಸಂಸಾರಬಂಧನವನ್ನು ಸಡಿಲಗೊಳಿಸಿಕೊಂಡವನಿಗೆ ನಮಸ್ಕಾರ.

ಶಿಕ್ಷಿತಾಖಿಲಕಾಮಾದಿಶತ್ರವೇ ಚ ನಮೋ ನಮಃ ।
ಶಿರೋವ್ರತಫಲೀಭೂತಸ್ವರೂಪಾಯ ನಮೋ ನಮಃ ॥ ೩೫ ॥

೩೫. ಕಾಮವೇ ಮುಂತಾದ ಶತ್ರುವರ್ಗವನ್ನು ಶಿಕ್ಷಿಸಿದವನಿಗೆ ನಮಸ್ಕಾರ. (ಆಥರ್ವಣಿಕರು ಕೈಗೊಳ್ಳುವ) ಶಿರೋವ್ರತವೆಂಬ ತಪಸ್ಸಿನ ಫಲವಾಗಿರುವ ಸ್ವರೂಪವುಳ್ಳವನಿಗೆ ನಮಸ್ಕಾರ.

ಶಿಲಾದಾಂಪತ್ಯದತ್ತೋರುಕರುಣಾಯ ನಮೋ ನಮಃ ।
ಶಿಖರೀಂದ್ರಧನುಃಶೋಭಿಕರಾಬ್ಜಾಯ ನಮೋ ನಮಃ ॥ ೩೬ ॥

೩೬. ಶಿಲೆಯಾಗಿದ್ದ (ಅಹಲ್ಯೆಯ ಪತಿಯಾದ ಗೌತಮರಿಗೆ) ದಯೆ ತೋರಿ ಅನುಗ್ರಹಮಾಡಿದವನಿಗೆ ನಮಸ್ಕಾರ. ಮೇರುಪರ್ವತವೆಂಬ ಶ್ರೇಷ್ಠ ಗಿರಿಯನ್ನೇ ಬಿಲ್ಲಾಗಿ ಹಿಡಿದಿರುವ ಕರಕಮಲವುಳ್ಳವನಿಗೆ ನಮಸ್ಕಾರ.

ಶಿಂಜನೀಭೂತಭುಜಗನಾಯಕಾಯ ನಮೋ ನಮಃ ।
ಶಿಲಾಕಠಿನಪಾಪೌಘಭಿದುರಾಯ ನಮೋ ನಮಃ ॥ ೩೭ ॥

೩೭. ನಾಗರಾಜನನ್ನು ಧನುಸ್ಸಿನ ಹಗ್ಗವಾಗಿ ಮಾಡಿಕೊಂಡಿರುವವನಿಗೆ ನಮಸ್ಕಾರ. ಕಲ್ಲಿನಂತೆ ಒರಟಾದ ಪಾಪಗಳ ಸಮೂಹವನ್ನೆಲ್ಲ ಸೀಳುವ ವಜ್ರಾಯುಧದಂತಿರುವವನಿಗೆ ನಮಸ್ಕಾರ.

## 'ವ' ಕಾರಪೂರ್ವಕವಾದ ನಾಮಗಳು

ವಾಸುದೇವೈಕವೇದ್ಯಾಂಘ್ರಿವೈಭವಾಯ ನಮೋ ನಮಃ ।
ವಾಣೀಶೈಕಜ್ಞೇಯಮೂರ್ಧಮಾಹಾತ್ಮ್ಯಾಯ ನಮೋ ನಮಃ ॥ ೩೮ ॥

೩೮. ವಾಸುದೇವನಾದ (ವಿಷ್ಣು)ವಿನಿಂದ ಮಾತ್ರವೇ ತಿಳಿಯಲ್ಪಟ್ಟ ಪಾದ ಮಹಿಮೆಯುಳ್ಳವನಿಗೆ ನಮಸ್ಕಾರ. ಸರಸ್ವತೀಪತಿಯಾದ ಬ್ರಹ್ಮನಿಂದ ಮಾತ್ರವೇ ತಿಳಿಯಲ್ಪಟ್ಟ ತಲೆಯ (ತುದಿಯ) ಮಾಹಾತ್ಮ್ಯವುಳ್ಳವನಿಗೆ ನಮಸ್ಕಾರ.

ವಾಸವಾದಿಸುರಶ್ರೇಷ್ಠವಂದಿತಾಯ ನಮೋ ನಮಃ ।
ವಾಮದೇವಾದಿಸಿದ್ಧೌಘಸಂವೃತಾಯ ನಮೋ ನಮಃ ॥ ೩೯ ॥

೩೯. ದೇವೇಂದ್ರನೇ ಮುಂತಾದ ಶ್ರೇಷ್ಠದೇವತೆಗಳಿಂದ ನಮಸ್ಕರಿಸಲ್ಪಟ್ಟವನಿಗೆ ವಂದನೆಗಳು. ವಾಮದೇವನೇ ಮುಂತಾದ ಸಿದ್ಧ(ಪುರುಷ) ಸಮೂಹದಿಂದ ಸುತ್ತುವರೆಯಲ್ಪಟ್ಟವನಿಗೆ ನಮಸ್ಕಾರ.

**ವಾಲಖಿಲ್ಯಾದಿಯೋಗೀಂದ್ರಭಾವಿತಾಯ ನಮೋ ನಮಃ ।**
**ವಾಸಿಷ್ಠಾದಿಪುರಾಣೋಕ್ತಪ್ರಾಭವಾಯ ನಮೋ ನಮಃ ॥ ೪೦ ॥**

**೪೦.** ವಾಲಖಿಲ್ಯರೇ ಮುಂತಾದ ಯೋಗಿಶ್ರೇಷ್ಠರಿಂದ ಧ್ಯಾನಿಸಲ್ಪಟ್ಟವನಿಗೆ ನಮಸ್ಕಾರ. ಯೋಗವಾಸಿಷ್ಠವೇ ಮುಂತಾದ ಪುರಾಣಗಳಲ್ಲಿ ಹೇಳಿರುವ ಮಹಿಮೆಯುಳ್ಳವನಿಗೆ ನಮಸ್ಕಾರ.

**ವಾಮಾದಿವಿಷಯಾಸಕ್ತದುಷ್ಪ್ರಾಪಾಯ ನಮೋ ನಮಃ ।**
**ವಾಜಪೇಯಾದಿಸವನಫಲದಾಯ ನಮೋ ನಮಃ ॥ ೪೧ ॥**

**೪೧.** ಸ್ತ್ರೀಯೇ ಮುಂತಾದ ವಿಷಯಗಳಲ್ಲಿ ಆಸಕ್ತರಾದವರಿಗೆ ದುಸ್ಸಾಧ್ಯನಾಗಿರುವವನಿಗೆ ನಮಸ್ಕಾರ. ವಾಜಪೇಯವೇ ಮುಂತಾದ ಯಜ್ಞಗಳ ಫಲರೂಪನಾದವನಿಗೆ ನಮಸ್ಕಾರ.

**ವಾರಿತಾಖಿಲಸಂಸಾರಸಂತಾಪಾಯ ನಮೋ ನಮಃ ।**
**ವಾರಣೇಂದ್ರಾಜಿನಶ್ರೇಷ್ಠವಸನಾಯ ನಮೋ ನಮಃ ॥ ೪೨ ॥**

**೪೨.** ಎಲ್ಲಾ ಸಂಸಾರದುಃಖಗಳನ್ನೂ ನಿವಾರಣೆಮಾಡಿದವನಿಗೆ ನಮಸ್ಕಾರ. ಶ್ರೇಷ್ಠವಾದ ಆನೆಯ ಚರ್ಮವನ್ನು ವಸ್ತ್ರವಾಗುಳ್ಳವನಿಗೆ ನಮಸ್ಕಾರ.

**ವಾಙ್ಮೌನಮಾತ್ರಸಂದಿಷ್ಟತತ್ತ್ವಾರ್ಥಾಯ ನಮೋ ನಮಃ ।**
**ವಾತೂಲಾಂತಮಹಾತಂತ್ರದೇಶಿಕಾಯ ನಮೋ ನಮಃ ॥ ೪೩ ॥**

**೪೩.** ಮಾತನ್ನು ನಿಲ್ಲಿಸುವ ರೂಪವಾದ ಮೌನದಿಂದಲೇ ತಿಳಿಸಲ್ಪಟ್ಟ ತತ್ತ್ವಾರ್ಥಸ್ವರೂಪನಿಗೆ ನಮಸ್ಕಾರ. ವಾತೂಲವೆಂಬುದೇ ಕೊನೆಯದಾದ ಮಹಾತಂತ್ರಗಳ ಗುರುವಾದವನಿಗೆ ನಮಸ್ಕಾರ.

**ವಾಲಾಗ್ರಶತಭಾಗಾತಿಸೂಕ್ಷ್ಮಾಂಗಾಯ ನಮೋ ನಮಃ ।**
**ವಾಚಾತೀತಮನೋತೀತಮಾಹಾತ್ಮ್ಯಾಯ ನಮೋ ನಮಃ ॥ ೪೪ ॥**

**೪೪.** ಕೂದಲಿನ ತುದಿಯ ನೂರನೇ ಒಂದು ಭಾಗದಷ್ಟು ಸೂಕ್ಷ್ಮವಾದ ಅವಯವವುಳ್ಳವನಿಗೆ ನಮಸ್ಕಾರ. ಮಾತುಗಳನ್ನೂ ಮನಸ್ಸನ್ನೂ ಮೀರಿದ ಮಹಿಮೆಯುಳ್ಳವನಿಗೆ ನಮಸ್ಕಾರ.

**ವಾಂಛಾನುಕಲಿತಾನೇಕಸ್ವರೂಪಾಯ ನಮೋ ನಮಃ ।**
**ವಾರಾಣಸ್ಯಾದಿಸುಕ್ಷೇತ್ರನಿವಾಸಾಯ ನಮೋ ನಮಃ**
**ವಾಸುಕ್ಯಾದಿ ಮಹಾಸರ್ಪಾಲಂಕೃತಾಯ ನಮೋ ನಮಃ ॥ ೪೫ ॥**

**೪೫.** ತನ್ನ ಇಷ್ಟದಂತೆ ಧರಿಸುವಂಥ ಅನೇಕ ಸ್ವರೂಪವುಳ್ಳವನಿಗೆ ನಮಸ್ಕಾರ. ಕಾಶಿಯೇ ಮುಂತಾದ ಪವಿತ್ರ ಕ್ಷೇತ್ರಗಳಲ್ಲಿ ವಾಸಮಾಡುವವನಿಗೆ ವಂದನೆ. ವಾಸುಕಿಯೇ ಮುಂತಾದ ಮಹಾನಾಗಗಳಿಂದ ಭೂಷಿತನಾದವನಿಗೆ ನಮಸ್ಕಾರ.

## 'ಯ' ಕಾರ ಪೂರ್ವಕನಾಮಗಳು

**ಯಕ್ಷನಾಯಕದುಷ್ಪ್ರಾಪವರದಾಯ ನಮೋ ನಮಃ ।**
**ಯಜುರಾದಿಚತುರ್ವೇದತುರಗಾಯ ನಮೋ ನಮಃ ॥ ೪೬ ॥**

**೪೬.** ಯಕ್ಷರೊಡೆಯನಾದ ಕುಬೇರನಿಗೂ ಪಡೆಯಲಸಾಧ್ಯವಾದಂಥ ವರಗಳನ್ನು (ಭಕ್ತರಿಗೆ) ಕೊಡುವವನಿಗೆ ನಮಸ್ಕಾರ. ಯಜುರ್ವೇದವೇ ಮುಂತಾದ ನಾಲ್ಕು ಕುದುರೆಗಳ (ರಥವುಳ್ಳವನಿಗೆ) ನಮಸ್ಕಾರ.

**ಯಜ್ಞಧರ್ಮತಪೋಯೋಗಪಥಾಪ್ಯಾಯ ನಮೋ ನಮಃ ।**
**ಯಜಮಾನಾದ್ಯಷ್ಟಮೂರ್ತಿವಂದಿತಾಯ ನಮೋ ನಮಃ ॥ ೪೭ ॥**

**೪೭.** ಯಜ್ಞ, ತನ್ನ ವರ್ಣಾಶ್ರಮವಿಹಿತವಾದ ಕರ್ಮ, ತಪಸ್ಸು, ಯಾಗ - ಮುಂತಾದ ದಾರಿಗಳಿಂದ ಪಡೆಯಲ್ಪಡುವವನಿಗೆ ನಮಸ್ಕಾರ. ಯಜಮಾನನೇ ಮುಂತಾದ ಎಂಟು ಮೂರ್ತಿಗಳ ರೂಪದಿಂದ ಪೂಜ್ಯನಾದವನಿಗೆ ನಮಸ್ಕಾರ.

**ಯದೃಚ್ಛಾಲಾಭಸಂತುಷ್ಟಬಾಂಧವಾಯ ನಮೋ ನಮಃ ।**
**ಯಥೇಚ್ಛವಿಷಯಾಸಕ್ತದುಷ್ಪ್ರಾಪಾಯ ನಮೋ ನಮಃ ॥ ೪೮ ॥**

**೪೮.** ತಾನಾಗಿ ದೊರೆತಷ್ಟರಿಂದ ತೃಪ್ತನಾಗಿರುವಂಥ (ಭಕ್ತನಿಗೆ) ಬಂಧುವಾಗಿರುವವನಿಗೆ ನಮಸ್ಕಾರ. ಸ್ವೇಚ್ಛೆಯಿಂದ ವಿಷಯಭೋಗಗಳಲ್ಲಿ ತೊಡಗಿರುವಂಥ ಕಾಮಿಯಾದವನಿಗೆ ಪಡೆಯಲಸಾಧ್ಯನಾಗಿರುವವನಿಗೆ ನಮಸ್ಕಾರ.

**ಯಮಾದ್ಯಷ್ಟಾಂಗಯೋಗಸ್ಥಸುಗಮಾಯ ನಮೋ ನಮಃ ।**
**ಯಂತ್ರರೂಪಪ್ರಪಂಚೈಕಸೂತ್ರಜ್ಞಾಯ ನಮೋ ನಮಃ ॥ ೪೯ ॥**

**೪೯.** ಯಮನಿಯಮವೇ ಮುಂತಾದ ಅಷ್ಟಾಂಗಯೋಗದಲ್ಲಿ ನಿಂತವರಿಗೆ ಸುಲಭನಾಗಿರುವವನಿಗೆ ನಮಸ್ಕಾರ. ಯಂತ್ರದಂತೆ ಇರುವ ಈ ಸೃಷ್ಟಿಯ ರಹಸ್ಯವನ್ನು ಬಲ್ಲ ಸಾರಜ್ಞನಾದವನಿಗೆ ನಮಸ್ಕಾರ.

**ಯಲ್ಲಕಾಯಿತಗಾಂಡೀವಪ್ರಹಾರಾಯ ನಮೋ ನಮಃ ।**
**ಯದುನಾಥಸಖಾವಾಪ್ತನಿಜಾಸ್ತ್ರಾಯ ನಮೋ ನಮಃ ॥ ೫೦ ॥**

**೫೦.** ಗಾಂಡೀವವೆಂಬ ಧನುಸ್ಸಿನ ಹೊಡೆತದಿಂದ ಬಾಸುಂಡೆಯನ್ನು ಹೊಂದಿದ ಶಿರಸ್ಸುಳ್ಳವನಿಗೆ ನಮಸ್ಕಾರ. ಯದುನಾಥನಾದ ಶ್ರೀಕೃಷ್ಣನ ಸ್ನೇಹಿತನಾದ ಅರ್ಜುನನಿಂದ ಪಡೆಯಲ್ಪಟ್ಟ (ಪಾಶುಪತವೆಂಬ) ತನ್ನ ಅಸ್ತ್ರವುಳ್ಳವನಿಗೆ ನಮಸ್ಕಾರ.

**ಯಥಾರುಚಿಜಗದ್ಧ್ಯೇಯವಿಗ್ರಹಾಯ ನಮೋ ನಮಃ ।**
**ಯಜನೋದ್ಯದಸದ್ದಕ್ಷಶಿಕ್ಷಕಾಯ ನಮೋ ನಮಃ ॥ ೫೧ ॥**

೫೧. (ಭಕ್ತರು ತಮ್ಮ) ಮನಸ್ಸಿನ ಅಭಿರುಚಿಗೆ ತಕ್ಕಂತೆ ಧ್ಯಾನಿಸುವಂಥ ಆಕಾರವುಳ್ಳವನಿಗೆ ನಮಸ್ಕಾರ. ಯಜ್ಞ ಮಾಡಲೆಳಸಿ ಅಪಮಾನಮಾಡಿದಂಥ ದಕ್ಷಪ್ರಜಾಪತಿಯನ್ನು ಶಿಕ್ಷಿಸಿದವನಿಗೆ ನಮಸ್ಕಾರ.

**ಯಮುನಾವೀಚಿಕಾನೀಲಭ್ರೂಲತಾಯ ನಮೋ ನಮಃ ।**
**ಯಶ್ಛಂದಸೇತಿಮಂತ್ರೋಕ್ತದೈವತಾಯ ನಮೋ ನಮಃ ॥**
**ಯತೋವಾಚೋಯಜುರ್ಜ್ಞೇಯವಿಷಯಾಯ ನಮೋ ನಮಃ ॥*  ॥ ೫೧ ॥**

೫೨. ಯಮುನಾನದಿಯ ನೀರಿನ ಅಲೆಗಳಂತೆ ಕಪ್ಪಾದ ಹುಬ್ಬುಗಳುಳ್ಳವನಿಗೆ ನಮಸ್ಕಾರ. 'ಯಶ್ಛಂದಸಾಮ್' ಎಂಬ ಮಂತ್ರದಿಂದ ಹೇಳಲ್ಪಟ್ಟ ದೇವತಾಸ್ವರೂಪನಿಗೆ ನಮಸ್ಕಾರ. (ಮತ್ತು) 'ಯತೋ ವಾಚೋ ನಿವರ್ತಂತೇ' ಎಂಬ ಯಜುಸ್ಸಿನಿಂದ ತಿಳಿಯುವಂಥ ವಿಷಯಸ್ವರೂಪನಿಗೆ ನಮಸ್ಕಾರವು.

ಇತಿ ಶ್ರೀ ಶಿವಪಂಚಾಕ್ಷರೀ ಅಷ್ಟೋತ್ತರಶತನಾಮಸ್ತೋತ್ರಮ್

## ೬. ಅರ್ಧನಾರೀಶ್ವರಾಷ್ಟಕಮ್

**ಅಂಭೋಧರಶ್ಯಾಮಲಕುಂತಲಾಯೈ**
**ತಟಿತ್ಪ್ರಭಾತಾಮ್ರಜಟಾಧರಾಯ ।**
**ನಿರೀಶ್ವರಾಯೈ ನಿಖಿಲೇಶ್ವರಾಯ**
**ನಮಶ್ಶಿವಾಯೈ ಚ ನಮಶ್ಶಿವಾಯ  ॥ ೧ ॥**

೧. ಕಪ್ಪಾದ ಮೋಡದಂತೆ ಕಾಂತಿಯುಳ್ಳ ಮುಂಗುರುಳುಳ್ಳ, ತನಗಿಂತ ಮೀರಿದ ಒಡೆಯನಿಲ್ಲದ, ಮಂಗಳಸ್ವರೂಪಳಾದ ಶಿವೆಗೂ, ಮಿಂಚಿನ ಬೆಳಕಿನಂತೆ ಕೆಂಪಾದ ಜಡೆಗಳುಳ್ಳ ಎಲ್ಲಕ್ಕೂ ಒಡೆಯನಾದ ಶಿವನಿಗೂ ನಮಸ್ಕಾರವು.

**ಪ್ರದೀಪ್ತರತ್ನೋಜ್ಜ್ವಲಕುಂಡಲಾಯೈ**
**ಸ್ಫುರನ್ಮಹಾಪನ್ನಗಭೂಷಣಾಯ ।**
**ಶಿವಪ್ರಿಯಾಯೈ ಚ ಶಿವಾಪ್ರಿಯಾಯ**
**ನಮಶ್ಶಿವಾಯೈ ಚ ನಮಶ್ಶಿವಾಯ  ॥ ೨ ॥**

೨. ಚೆನ್ನಾಗಿ ಹೊಳೆಯುತ್ತಿರುವ ರತ್ನಮಯವಾದ, ಎದ್ದುಕಾಣುತ್ತಿರುವ (ಕಿವಿಯ) ಓಲೆಗಳುಳ್ಳ, ಪರಮೇಶ್ವರನಿಗೆ ಇಷ್ಟಳಾದ ಶಿವೆಗೂ, ಚಲಿಸುತ್ತಿರುವ ದೊಡ್ಡ ಹಾವುಗಳೆಂಬ ಒಡವೆಗಳುಳ್ಳ ಮತ್ತು ಪಾರ್ವತೀಪ್ರಿಯನಾದ ಶಿವನಿಗೂ ನಮಸ್ಕಾರ.

೨೦, ೨೮, ೪೫, ೫೨ನೆಯ ಶ್ಲೋಕಗಳಲ್ಲಿ ಹೆಚ್ಚಾಗಿರುವ ಒಂದೊಂದು ನಾಮಗಳನ್ನು ಲೆಕ್ಕಮಾಡಿಕೊಳ್ಳಲಾಗಿ ಒಟ್ಟು ೧೦೮ ನಾಮಗಳಾಗುವವು. ಕೊನೆಯಲ್ಲಿರುವ 'ನಮೋ ನಮಃ' ಎಂಬಿದನ್ನು ಬಿಟ್ಟು ನಾಮಗಳನ್ನೇ ಜೋಡಿಸಿ ರಾಗವಾಗಿ ಹೇಳಿದರೆ 'ಚೂರ್ಣಿಕೆ' ಯಾಗುವದು.

ಮಂದಾರಮಾಲಾಕಲಿತಾಲಕಾಯೈ
ಕಪಾಲಮಾಲಾಂಕಿತಕಂಧರಾಯ ।
ದಿವ್ಯಾಂಬರಾಯೈ ಚ ದಿಗಂಬರಾಯ
ನಮಃಶ್ಶಿವಾಯೈ ಚ ನಮಃಶ್ಶಿವಾಯ ॥ ೩ ॥

೩. ಮಂದಾರದ ಹೂಗಳ ಮಾಲೆಯಿಂದ ಕೂಡಿದ ಜಡೆಯುಳ್ಳ, ಬೆಲೆ ಬಾಳುವ ದಿವ್ಯವಸ್ತ್ರಾಲಂಕೃತಳಾದ ಶಿವೆಗೂ ತಲೆಬುರುಡೆಗಳ ಮಾಲೆಯಿಂದ ಕೂಡಿದ ಕಂಠವುಳ್ಳ, ಹಾಗೂ ದಿಕ್ಕುಗಳನ್ನೇ ಬಟ್ಟೆಯಾಗುಳ್ಳ ಶಿವನಿಗೂ ನಮಸ್ಕಾರವು.

ಕಸ್ತೂರಿಕಾಕುಂಕುಮಲೇಪನಾಯೈ
ಶ್ಮಶಾನಭಸ್ಮಾಂಗವಿಲೇಪನಾಯ ।
ಕೃತಸ್ಮರಾಯೈ ವಿಕೃತಸ್ಮರಾಯ
ನಮಃಶ್ಶಿವಾಯೈ ಚ ನಮಃಶ್ಶಿವಾಯ ॥ ೪ ॥

೪. ಕಸ್ತೂರಿ, ಕುಂಕುಮಗಳನ್ನು ಶರೀರದಲ್ಲಿ ಹಚ್ಚಿಕೊಂಡಿರುವ, ಹಾಗೂ ಮಾಡಿದ ಪುಣ್ಯಕರ್ಮಗಳನ್ನು ಸ್ಮರಿಸಿಕೊಂಡು (ಫಲಗಳನ್ನು ಕೊಡುವ) ಶಿವೆಗೂ, ಶ್ಮಶಾನದ ಬೂದಿಯನ್ನು ಬಳಿದುಕೊಂಡು ಮನ್ಮಥನನ್ನೇ ವಿಕಾರಗೊಳಿಸಿದಂಥ ಶಿವನಿಗೂ ನಮಸ್ಕಾರ.

ಪಾದಾರವಿಂದಾರ್ಪಿತಹಂಸಕಾಯೈ
ಪಾದಾಬ್ಜರಾಜತ್ಫಣಿನೂಪುರಾಯ ।
ಕಲಾಮಯಾಯೈ ವಿಕಲಾಮಯಾಯ
ನಮಃಶ್ಶಿವಾಯೈ ಚ ನಮಃಶ್ಶಿವಾಯ ॥ ೫ ॥

೫. ಪಾದಕಮಲಗಳಲ್ಲಿ ವಾಸಿಸುತ್ತಿರುವ ಹಂಸವುಳ್ಳ ಕಲಾರೂಪಿಣಿಯಾದ ಶಿವೆಗೂ, ಪಾದಗಳೆಂಬ ತಾವರೆಯಲ್ಲಿ ಹೊಳೆಯುತ್ತಿರುವ ರತ್ನಮಯವಾದ ಕಾಲುಬಳೆಗಳುಳ್ಳ, ಕಲಾತೀತನಾದ ಪರಮೇಶ್ವರನಿಗೂ ನಮಸ್ಕಾರ.

ಪ್ರಪಂಚಸೃಷ್ಟ್ಯುನ್ಮುಖಲಾಸ್ಯಕಾಯೈ
ಸಮಸ್ತಸಂಹಾರಕತಾಂಡವಾಯ ।
ಸಮೇಕ್ಷಣಾಯೈ ವಿಷಮೇಕ್ಷಣಾಯ
ನಮಃಶ್ಶಿವಾಯೈ ಚ ನಮಃಶ್ಶಿವಾಯ ॥ ೬ ॥

೬. ಜಗತ್ತನ್ನು ಸೃಷ್ಟಿಸುವದರಲ್ಲಿ ಮುಂದಾದ ಮುಗುಳುನಗೆಯುಳ್ಳ, ಹಾಗೂ ಸಮವಾದ (ಎರಡು) ಕಣ್ಣುಗಳುಳ್ಳ ಶಿವೆಗೂ ಎಲ್ಲಾ (ಬ್ರಹ್ಮಾಂಡ)ವನ್ನೂ ನಾಶಗೊಳಿಸುವ ತಾಂಡವ(ನೃತ್ಯ)ತತ್ಪರನೂ ವಿರೂಪಾಕ್ಷನೂ ಆದ ಪರಮೇಶ್ವರನಿಗೂ ನಮಸ್ಕಾರ.

ಪ್ರಫುಲ್ಲನೀಲೋತ್ಪಲಲೋಚನಾಯೈ
ವಿಕಾಸಪಂಕೇರುಹಲೋಚನಾಯ ।
ಜಗಜ್ಜನನ್ಯೈ ಜಗದೇಕಪಿತ್ರೇ
ನಮಃಶಿವಾಯೈ ಚ ನಮಃಶಿವಾಯ ।೭॥

೭. ಚೆನ್ನಾಗಿ ಅರಳಿದ ನೈದಿಲೆಯಂತೆ (ಕಪ್ಪಾದ) ಕಂಗಳುಳ್ಳ ಹಾಗೂ ಜಗತ್ತಿಗೆಲ್ಲ ತಾಯಿಯಾದ ಶಿವೆಗೂ ಅರಳಿರುವ ತಾವರೆಯಂತೆ ಕೆಂಪಾದ ಕಂಗಳುಳ್ಳ ಹಾಗೂ ಪ್ರಪಂಚಕ್ಕೆಲ್ಲ ತಂದೆಯಾದ ಪರಮೇಶ್ವರನಿಗೂ ನಮಸ್ಕಾರ.

ಅಂತರ್ಬಹಿಶ್ಚೋರ್ಧ್ವಮಧಶ್ಚ ಮಧ್ಯೇ
ಪುರಶ್ಚ ಪಶ್ಚಾಚ್ಚ ವಿದಿಕ್ಷು ದಿಕ್ಷು ।
ಸರ್ವಾಂಗತಾಯೈ ಸಕಲಂಗತಾಯ
ನಮಃಶಿವಾಯೈ ಚ ನಮಃಶಿವಾಯ ॥೮॥
ಉಪಮನ್ಯುಕೃತಂ ಸ್ತೋತ್ರಮರ್ಧನಾರೀಶ್ವರಾಹ್ವಯಮ್ ।
ಯಃ ಪಠೇತ್ ಶೃಣುಯಾದ್ವಾಪಿ ಶಿವಲೋಕೇ ಮಹೀಯತೇ ॥೯॥

೮-೯. ಒಳಗೂ ಹೊರಗೂ ಮೇಲೂ ಕೆಳಗೂ ಮಧ್ಯದಲ್ಲಿಯೂ ಮುಂದುಗಡೆಯೂ ಹಿಂದುಗಡೆಯೂ ದಿಕ್ಕುವಿದಿಕ್ಕುಗಳಲ್ಲಿಯೂ ಎಲ್ಲವನ್ನೂ ವ್ಯಾಪಿಸಿಕೊಂಡಿರುವ, ಸಕಲರನ್ನೂ ಒಳಹೊಕ್ಕಿರುವ ಶಿವೆಗೂ ಶಿವನಿಗೂ ನಮಸ್ಕಾರ. ಉಪಮನ್ಯುವು ಮಾಡಿದ ಈ ಅರ್ಧನಾರೀಶ್ವರಸ್ತೋತ್ರವೆಂಬ ಹೆಸರಿನ ಸ್ತುತಿಯನ್ನು ಯಾವನು ಪಠಿಸುವನೋ ಅಥವಾ ಕೇಳುವನೋ ಆತನು ಶಿವಲೋಕವನ್ನು ಸೇರಿ ಮಹಿಮೆಯನ್ನು ಹೊಂದುವನು.

ಇತಿ ಶ್ರೀ ಅರ್ಧನಾರೀಶ್ವರಾಷ್ಟಕಮ್

## ೭. ಪ್ರದೋಷಾಷ್ಟಕಮ್

ಸತ್ಯಂ ಬ್ರವೀಮಿ ಪರಲೋಕಹಿತಂ ಬ್ರವೀಮಿ
ಸಾರಂ ಬ್ರವೀಮ್ಯುಪನಿಷದ್ಧೃದಯಂ ಬ್ರವೀಮಿ ।
ಸಂಸಾರಸಾಗರಮಸಾರಮವಾಪ್ಯ ಜಂತೋಃ
ಸಾರೋಽಯಮೀಶ್ವರಪದಾಂಬುರುಹಸ್ಯ ಸೇವಾ ॥೧॥

೧. ನಿಜವನ್ನು ಹಾಗೂ ಪರಲೋಕಸುಖಸಾಧನವನ್ನು ಹೇಳುವೆನು. ವೇದಗಳ ಸಾರವಾದ ಉಪನಿಷತ್ತುಗಳ ತಾತ್ಪರ್ಯವನ್ನು ಹೇಳುವೆನು. ಏನೆಂದರೆ: ಅಸಾರವಾದ ಈ ಸಂಸಾರಸಮುದ್ರವನ್ನು ಹೊಂದಿರುವ ಪ್ರಾಣಿಯಾದ (ಮಾನವನಿಗೆ) ಈಶ್ವರನ ಪಾದಾರವಿಂದದ ಸೇವೆಯೊಂದೇ ಸಾರವು.

ಯೇ ನಾರ್ಚಯಂತಿ ಗಿರಿಶಂ ಸಮಯೇ ಪ್ರದೋಷೇ
ಯೇ ನಾರ್ಚಿತಂ ಶಿವಮಪಿ ಪ್ರಣಮನ್ತಿ ಚಾನ್ಯೇ ।
ಏತತ್ಕಥಾಂ ಶ್ರುತಿಪುಟೈರ್ನ ಪಿಬಂತಿ ಮೂಢಾ
ತೇ ಜನ್ಮಜನ್ಮಸು ಭವಂತಿ ನರಾ ದರಿದ್ರಾಃ ॥ ೧ ॥

೧. ಪ್ರದೋಷಕಾಲದಲ್ಲಿ ಯಾರು ಶಿವನನ್ನು ಪೂಜಿಸುವದಿಲ್ಲವೋ, ಪೂಜಿತನಾದ ಶಿವನನ್ನು ನಮಸ್ಕರಿಸುವದೂ ಇಲ್ಲವೋ, ಯಾವ ಮೂಢರು ತಮ್ಮ ಕಿವಿಗಳಿಂದ ಈ ಕಥೆಯನ್ನು ಕೇಳುವದಿಲ್ಲವೋ ಅಂಥವರು ಎಲ್ಲಾ ಜನ್ಮಗಳಲ್ಲಿಯೂ ದರಿದ್ರರಾದ ಮನುಷ್ಯರಾಗಿ ಹುಟ್ಟುವರು.

ಯೇ ವೈ ಪ್ರದೋಷಸಮಯೇ ಪರಮೇಶ್ವರಸ್ಯ
ಕುರ್ವಂತ್ಯನನ್ಯಮನಸೋಽಙ್ಘ್ರಿಸರೋಜಪೂಜಾಮ್ ।
ನಿತ್ಯಂ ಪ್ರವೃದ್ಧಧನಧಾನ್ಯಕಳತ್ರಪುತ್ರ -
ಸೌಭಾಗ್ಯಸಂಪದಧಿಕಾಸ್ತ ಇಹೈವ ಲೋಕೇ ॥ ೨ ॥

೨. ಯಾರು ಪ್ರದೋಷಕಾಲದಲ್ಲಿ ಅನನ್ಯಚಿತ್ತರಾಗಿ ಪರಮೇಶ್ವರನ ಪಾದಕಮಲಗಳನ್ನು ಪೂಜಿಸುವರೋ ಅವರು ಯಾವಾಗಲೂ ಬೆಳೆಯುತ್ತಿರುವ ಹಣ, ದವಸ, ಪತ್ನಿ, ಮಕ್ಕಳು - ಮುಂತಾದ ಸಂಪತ್ಸೌಭಾಗ್ಯಗಳಿಂದ ದೊಡ್ಡವರಾಗಿ ಈ ಲೋಕದಲ್ಲಿಯೇ ಸುಖಿಗಳಾಗುವರು.

ಕೈಲಾಸಶೈಲಭವನೇ ತ್ರಿಜಗಜ್ಜನಿತ್ರೀಂ
ಗೌರೀಂ ನಿವೇಶ್ಯ ಕನಕಾಂಚಿತರತ್ನಪೀಠೇ ।
ನೃತ್ಯಂ ವಿಧಾತುಮಭಿವಾಂಛತಿ ಶೂಲಪಾಣೌ
ದೇವಾಃ ಪ್ರದೋಷಸಮಯೇಽನುಭಜನ್ತಿ ಸರ್ವೇ ॥ ೩ ॥

೩. ಕೈಲಾಸಪರ್ವತದ ಅರಮನೆಯಲ್ಲಿ ಮೂರು ಲೋಕಕ್ಕೂ ತಾಯಿಯಾದ ಗೌರಿಯನ್ನು ಚಿನ್ನದಿಂದ ಅಲಂಕರಿಸಿದ ರತ್ನಪೀಠದಲ್ಲಿ ಕುಳ್ಳಿರಿಸಿ ಶೂಲಪಾಣಿಯಾದ ಶಂಕರನು ನರ್ತನಮಾಡಲು ಅಪೇಕ್ಷಿಸುವ ಆ ಪ್ರದೋಷಕಾಲಕ್ಕೆ ಎಲ್ಲಾ ದೇವತೆಗಳೂ ಅವನನ್ನು ಸೇವಿಸುತ್ತಿರುವರು.

ವಾಗ್ದೇವೀಧೃತವಲ್ಲಕೀ ಶತಮುಖೋ ವೇಣುಂ ದಧತ್ ಪದ್ಮಜಃ
ತಾಲೋನ್ನಿದ್ರಕರೋ ರಮಾ. ಭಗವತೀ ಗೇಯಪ್ರಯೋಗಾನ್ವಿತಾ ।
ವಿಷ್ಣುಸ್ಸಾಂದ್ರಮೃದಂಗವಾದನಪಟುಃ ದೇವಾಸ್ಸಮಂತಾತ್ ಸ್ಥಿತಾಃ
ಸೇವನ್ತೇ ತಮನು ಪ್ರದೋಷಸಮಯೇ ದೇವಂ ಮೃಡಾನೀಪತಿಮ್ ॥ ೪ ॥

೪. ಶಾರದೆಯು ವೀಣೆಯನ್ನೂ ಇಂದ್ರನು ಕೊಳಲನ್ನೂ ಬ್ರಹ್ಮನು ತನ್ಮಯನಾಗಿ ತಾಳವನ್ನೂ ಪೂಜ್ಯಳಾದ ಲಕ್ಷ್ಮಿಯು ಗಾನಕ್ಕೆ ತಕ್ಕಂತೆ ನೃತ್ಯ ಪ್ರಯೋಗವನ್ನೂ ವಿಷ್ಣುವು

ದೃಢವಾದ ತಬಲವನ್ನೂ ಬಾರಿಸುತ್ತಾ ಜಾಣ್ಮೆಯನ್ನು ತೋರಿಸುತ್ತಿರಲು ಸುತ್ತಲೂ ದೇವತೆಗಳು ನಿಂತಿರುವಾಗ ಸರ್ವರೂ ಪ್ರದೋಷಕಾಲದಲ್ಲಿ ಆ ಭವಾನೀಪತಿಯನ್ನು ಸೇವಿಸುತ್ತಿರುವರು.

**ಗಂಧರ್ವಯಕ್ಷಪತಗೋರಗಸಿದ್ಧಸಾಧ್ಯ -**
**ವಿದ್ಯಾಧರಾಮರವರಾಪ್ಸರಸಾಂ ಗಣಾಶ್ಚ ।**
**ಯೇಽನ್ಯೇ ತ್ರಿಲೋಕನಿಲಯಾಸ್ಸಹ ಭೂತವರ್ಗಾಃ**
**ಪ್ರಾಪ್ತೇ ಪ್ರದೋಷಸಮಯೇ ಹರಪಾರ್ಶ್ವಸಂಸ್ಥಾಃ ॥ ೬ ॥**

೬. ಗಂಧರ್ವರು, ಯಕ್ಷರು, ಪಕ್ಷಿಗಳು, ನಾಗಗಳು, ಸಿದ್ಧರು, ಸಾಧ್ಯರು, ವಿದ್ಯಾಧರರೇ - ಮುಂತಾದ ದೇವಗಣಗಳು ಅಪ್ಸರಸ್ತ್ರೀಯರು ಹಾಗೂ ಮೂರು ಲೋಕನಿವಾಸಿಗಳಾದ ಉಳಿದ ಪ್ರಾಣಿವರ್ಗದವರೆಲ್ಲರೂ ಪ್ರದೋಷಕಾಲವು ಬರಲಾಗಿ ಈಶ್ವರನ ಸನ್ನಿಧಿಯಲ್ಲೇ ಇರುವರು.

**ಅತಃ ಪ್ರದೋಷೇ ಶಿವ ಏಕ ಏವ**
**ಪೂಜ್ಯೋಽಥ ನಾನ್ಯೇ ಹರಿಪದ್ಮಜಾದ್ಯಾಃ ।**
**ತಸ್ಮಿನ್ ಮಹೇಶೇ ವಿಧಿನೇಜ್ಯಮಾನೇ**
**ಸರ್ವೇ ಪ್ರಸೀದಂತಿ ಸುರಾಧಿನಾಥಾಃ ॥ ೭ ॥**

೭. ಆದ್ದರಿಂದ ಪ್ರದೋಷಕಾಲದಲ್ಲಿ ಶಿವನೊಬ್ಬನೇ ಪೂಜ್ಯನು. ಇನ್ನು ವಿಷ್ಣು, ಬ್ರಹ್ಮರೇ ಮುಂತಾದವರು ಯಾರೂ ಇಲ್ಲ. ಏಕೆಂದರೆ ಆ ಮಹೇಶ್ವರನನ್ನು ವಿಧಿಪ್ರಕಾರವಾಗಿ ಪೂಜಿಸಲಾಗಿ ಎಲ್ಲಾ ಬ್ರಹ್ಮೇಂದ್ರಾದಿದೇವತೆಗಳೂ ಪ್ರಸನ್ನರಾಗುವರು.

**ಏಷ ತೇ ತನಯಃ ಪೂರ್ವಜನ್ಮನಿ ಬ್ರಾಹ್ಮಣೋತ್ತಮಃ ।**
**ಪ್ರತಿಗ್ರಹೈರ್ವಯೋ ನಿನ್ಯೇ ನ ದಾನಾದ್ಯೈಸ್ಸುಕರ್ಮಭಿಃ ॥ ೮ ॥**
**ಅತೋ ದಾರಿದ್ರ್ಯಮಾಪನ್ನಃ ಪುತ್ರಸ್ತೇ ದ್ವಿಜಭಾಮಿನಿ ।**
**ತದ್ದೋಷಪರಿಹಾರಾರ್ಥಂ ಶರಣಂ ಯಾತು ಶಂಕರಮ್ ॥ ೯ ॥**

**೮-೯**. ಎಲೈ ಬ್ರಾಹ್ಮಣಸ್ತ್ರೀಯೆ, ಈ ನಿನ್ನ ಮಗನು ಹಿಂದಿನ ಜನ್ಮದಲ್ಲಿ ಬ್ರಾಹ್ಮಣೋತ್ತಮನಾಗಿದ್ದು ಪ್ರತಿಗ್ರಹ (ದಾನತೆಗೆದುಕೊಳ್ಳುವದು) ದಿಂದ ಆಯುಸ್ಸನ್ನು ಕಳೆದುಬಿಟ್ಟನು. ದಾನವೇ ಮುಂತಾದ ಸತ್ಕರ್ಮವನ್ನು ಮಾಡಲಿಲ್ಲ. ಆದ್ದರಿಂದ ನಿನ್ನ ಪುತ್ರನು ಈಗ ಬಡತನವನ್ನು ಹೊಂದಿದ್ದಾನೆ. ಇದರ ಪರಿಹಾರಕ್ಕಾಗಿ ಶಂಕರನನ್ನು ಶರಣುಹೋಗಲಿ ।

ಇತಿ ಪ್ರದೋಷಸ್ತೋತ್ರಮ್

# ೮. ಶಿವಸ್ತೋತ್ರಮ್

ಜಯ ಶಂಕರ ಪಾರ್ವತೀಪತೇ
ಮೃಡ ಶಂಭೋ ಶಶಿಖಂಡಮಂಡನ ।
ಮದನಾಂತಕ ಭಕ್ತವತ್ಸಲ
ಪ್ರಿಯಕೈಲಾಸ ದಯಾಸುಧಾಂಬುಧೇ ॥ ೧ ॥

೧. ಪಾರ್ವತೀಪತಿಯೆ, ಸುಖಕರನೆ, ಶಂಭುವೆ, ಚಂದ್ರಕಲೆಯಿಂದ ಅಲಂಕೃತನಾದವನೆ, ಮನ್ಮಥಶತ್ರುವೆ, ಭಕ್ತವತ್ಸಲನೆ, ಕೈಲಾಸ(ವಾಸ) ಪ್ರಿಯನೆ, ಕರುಣಾಸಮುದ್ರನೆ, ಶಂಕರನೆ, ನಿನಗೆ ಜಯವಾಗಲಿ!

ಸದುಪಾಯಕಥಾಸ್ವಪಂಡಿತೋ
ಹೃದಯೇ ದುಃಖಶರೇಣ ಖಂಡಿತಃ ।
ಶಶಿಖಂಡಶಿಖಂಡಮಂಡನಂ
ಶರಣಂ ಯಾಮಿ ಶರಣ್ಯಮೀಶ್ವರಮ್ ॥ ೨ ॥

೨. ಒಳ್ಳೆಯ (ಗತಿಯನ್ನು ಹೊಂದುವದಕ್ಕೆ) ಉಪಾಯವಾದ ವಿಚಾರಗಳಲ್ಲಿ ಜಾಣನಲ್ಲದೆ ಇರುವ, ಮನಸ್ಸಿನಲ್ಲಿ ದುಃಖವೆಂಬ ಬಾಣದಿಂದ ಪೀಡಿತನಾಗಿರುವ ನಾನು, ಚಂದ್ರನ ಕಲೆಯನ್ನು ತಲೆಯಲ್ಲಿ ಧರಿಸಿರುವನಾದ ಶರಣ್ಯನಾದ ಈಶ್ವರನನ್ನು ಶರಣುಹೋಗುವೆನು.

ಮಹತಃ ಪರಿತಃ ಪ್ರಸರ್ಪತಃ
ತಮಸೋ ದರ್ಶನಭೇದಿನೋ ಭಿದೇ ।
ದಿನನಾಥ ಇವ ಸ್ವತೇಜಸಾ
ಹೃದಯವ್ಯೋಮ್ನಿ ಮನಾಗುದೇಹಿ ನಃ ॥ ೩ ॥

೩. ದಟ್ಟವಾದ, ಹಾಗೂ ಸುತ್ತಲೂ ಹರಡಿರುವ, ನೋಡುವದಕ್ಕೆ ಅಡ್ಡಿಯುಂಟುಮಾಡುತ್ತಿರುವ ಕತ್ತಲೆಯನ್ನು ನಾಶಗೊಳಿಸುವದಕ್ಕಾಗಿ ಸೂರ್ಯನಂತೆ (ನಿನ್ನ) ತೇಜಸ್ಸಿನಿಂದ ಕೂಡಿ ನಮ್ಮಗಳ ಹೃದಯವೆಂಬ ಆಕಾಶದಲ್ಲಿ ಸ್ವಲ್ಪ ಸ್ವಲ್ಪವಾಗಿ ಉದಯಿಸುವವನಾಗು.

ನ ವಯಂ ತವ ಚರ್ಮಚಕ್ಷುಷಾ
ಪದವೀಮಪ್ಯುಪವೀಕ್ಷಿತುಂ ಕ್ಷಮಾಃ
ಕೃಪಯಾಽಭಯದೇನ ಚಕ್ಷುಷಾ
ಸಕಲೇನೇಶ ವಿಲೋಕಯಾಶು ನಃ ॥ ೪ ॥

೪. ನಾವು ನಮ್ಮ ಲೌಕಿಕವಾದ ಚರ್ಮಮಯವಾದ ಕಣ್ಣಿನಿಂದ ನಿನ್ನಸ್ಥಾನವನ್ನು ಕೂಡ ನೋಡಲು ಸಮರ್ಥರಾಗಲಾರೆವು. ಆದ್ದರಿಂದ ಕರುಣೆಯಿಂದಲೂ

ಭರವಸೆಯುಂಟುಮಾಡುವಂಥದೂ ಆದ ವ್ಯಾಪಕವಾದ (ಕಣ್ಣಿನಿಂದ) ಜಾಗ್ರತೆಯಾಗಿ ನಮ್ಮನ್ನು ನೋಡುವವನಾಗು.

ತ್ವದನುಸ್ಮೃತಿರೇವ ಪಾವನೀ
ಸ್ತುತಿಯುಕ್ತಾ ನ ಹಿ ವಕ್ತುಮೀಶ ಸಾ ।
ಮಧುರಂ ಹಿ ಪಯಃ ಸ್ವಭಾವತೋ
ನನು ಕೀದೃಕ್ ಸಿತಶರ್ಕರಾನ್ವಿತಮ್ ॥ ೫ ॥

೫. ಎಲೈ ಪರಮೇಶ್ವರನೆ, ನಿನ್ನ ನಾಮಸ್ಮರಣೆಯೇ ಪವಿತ್ರವಾದದ್ದು. ಅದು ಸ್ತೋತ್ರರೂಪವಾಗಿಯೂ ಇದ್ದುದಾದರೆ ಎಷ್ಟು ರುಚಿಕರವೆಂಬುದನ್ನು ಹೇಳುವದಕ್ಕೇ ಆಗಲಾರದು. ಹೇಗೆಂದರೆ: ಹಾಲು ಸ್ವಭಾವದಿಂದಲೇ ಸಿಹಿಯಾಗಿರುವದು. ಬಿಳುಪಾದ ಸಕ್ಕರೆಯೊಡನೆ ಬೆರೆತಾಗ ಅದು ಇನ್ನೂ ಹೇಗಿರಬಹುದು?

ಸವಿಷೋಽಪ್ಯಮೃತಾಯತೇ ಭವಾನ್
ಶವಮುಂಡಾಭರಣೋಽಪಿ ಪಾವನಃ ।
ಭವ ಏವ ಭವಾಂತಕಸ್ಸತಾಂ
ಸಮದೃಷ್ಟಿರ್ವಿಷಮೇಕ್ಷಣೋಽಪಿ ಸನ್ ॥ ೬ ॥

೬. ನೀನು ವಿಷ(ಕಂಠ)ನಾಗಿದ್ದರೂ ಅಮೃತೇಶ್ವರನೇ ಆಗಿರುವೆ. ಕಪಾಲಮಾಲೆಯ ಆಭರಣವುಳ್ಳವನಾದರೂ ಪವಿತ್ರನಾಗಿರುವೆ. ಜಗತ್ ಸೃಷ್ಟಿ ಕರ್ತನಾಗಿದ್ದರೂ ಸಂಸಾರವನ್ನು ಕಳೆಯುವವನಾಗಿರುವೆ. ಮುಕ್ಕಣ್ಣನಾಗಿದ್ದರೂ ಎಲ್ಲರಲ್ಲಿಯೂ ಸಮದೃಷ್ಟಿಯುಳ್ಳವನಾಗಿರುವೆ.

ಅಪಿ ಶೂಲಧರೋ* ನಿರಾಮಯೋ
ದೃಢವೈರಾಗ್ಯರತೋಽಪಿ ರಾಗವಾನ್ ।
ಅಪಿ ಭೈಕ್ಷ್ಯಚರೋ ಮಹೇಶ್ವರಃ
ಚರಿತಂ ಚಿತ್ರಮಿದಂ ಹಿ ತೇ ಪ್ರಭೋ ॥ ೭ ॥

೭. ನೀನು ಶೂಲವೆಂಬ ಆಯುಧವನ್ನು ಹಿಡಿದಿರುವೆಯಾದರೂ ದೋಷರಹಿತನಾಗಿರುವೆ. ಪ್ರಬಲವಾದ ವೈರಾಗ್ಯಯುಕ್ತನಾಗಿದ್ದರೂ ಭಕ್ತರಲ್ಲಿ ಅನುರಾಗವುಳ್ಳವನಾಗಿರುವೆ. ಭಿಕ್ಷೆಯನ್ನು ಬೇಡುವೆಯಾದರೂ ಮಹೇಶ್ವರನೇ ಆಗಿರುವೆ. ಎಲೈ ಪ್ರಭುವೆ, ನಿನ್ನ ಚರಿತ್ರೆಯು ತುಂಬ ವಿಚಿತ್ರವಾಗಿರುವದು.

---

* ಶೂಲಧರನೆಂದರೆ ಹೊಟ್ಟೆಯ ನೋವೆಂಬ ರೋಗವುಳ್ಳವನೆಂಬರ್ಥವೂ ಇದೆ. ಈ ಅಭಿಪ್ರಾಯದಲ್ಲಿ ನೀನು ಆರೋಗ್ಯವಂತನೂ ಆಗಿರುವೆ - ಎಂದು ವಿರೋಧಾಭಾಸಸ್ತುತಿ.

ವಿತರತ್ಯಭಿವಾಂಛಿತಂ ದೃಶಾ
  ಪರಿದೃಷ್ಟಃ ಕಿಲ ಕಲ್ಪಪಾದಪಃ ।
ಹೃದಯೇ ಸ್ಮೃತ ಏವ ಧೀಮತೇ
  ನನು ತೇಽಭೀಷ್ಟಫಲಪ್ರದೋ ಭವಾನ್ ॥ ೮ ॥

೮. ಕಲ್ಪವೃಕ್ಷವು ಯಾರು ತನ್ನನ್ನು ಕಾಣುವರೋ ಅವರಿಗೆ ಬೇಕಾದ ಫಲಗಳನ್ನು ಕೊಡುವದು. ಆದರೆ ನೀನಾದರೊ, ಬುದ್ಧಿವಂತನಾದವನು. ಹೃದಯದಲ್ಲಿ ನೆನೆಸಿಕೊಂಡರೂ ಸಾಕು, ಇಷ್ಟಾರ್ಥಗಳನ್ನು ಕೊಡುವವನಾಗಿರುತ್ತೀಯೆ.

ಸಹಸೈವ ಭುಜಂಗಪಾಶವಾನ್
  ವಿನಿಗೃಹ್ಣಾತಿ ನ ಯಾವದಂತಕಃ ।
ಅಭಯಂ ಕುರು ತಾವದಾಶು ಮೇ
  ಗತಜೀವಸ್ಯ ಪುನಃ ಕಿಮೌಷಧೈಃ ॥ ೯ ॥

೯. ಹಾವು (ಗಳಂತಿರುವ) ಪಾಶವುಳ್ಳ (ಯಮನು) ಇದ್ದಕ್ಕಿದ್ದ ಹಾಗೆಯೇ ನನ್ನನ್ನು ಕಟ್ಟಿಹಾಕುವದರೊಳಗೆ ಜಾಗ್ರತೆಯಾಗಿ ನನಗೆ ಅಭಯವನ್ನುಂಟುಮಾಡು. (ಏಕೆಂದರೆ) ಪ್ರಾಣವು ಹೋದವನಿಗೆ ಔಷಧಗಳಿಂದೇನು ?

ಸವಿಷೈರಿವ ಭೀಮಪನ್ನಗೈ-
  ರ್ವಿಷಯೈರೇಭಿರಲಂ ಪರಿಕ್ಷತಮ್
ಅಮೃತೈರಿವ ಸಂಭ್ರಮೇಣ ಮಾಮ್
  ಅಭಿಷಿಂಚಾಶು ದಯಾವಲೋಕನೈಃ ॥ ೧೦ ॥

೧೦. ವಿಷದಿಂದ ಕೂಡಿದ ಭಯಂಕರವಾದ ಹಾವುಗಳಂತಿರುವ ಈ ವಿಷಯ (ಭೋಗ)ಗಳಿಂದ ಚೆನ್ನಾಗಿ ಕಚ್ಚಲ್ಪಟ್ಟಿರುವ ನನ್ನನ್ನು ಅಮೃತಮಯವಾದ ದಯಾಪೂರ್ಣವಾದ ನೋಟಗಳಿಂದ ಚೆನ್ನಾಗಿ ತೋಯಿಸುವವನಾಗು.

ಮುನಯೋ ಬಹವೋಽದ್ಯ ಧನ್ಯತಾಂ
  ಗಮಿತಾಃ ಸ್ವಾಭಿಮತಾರ್ಥದರ್ಶಿನಃ ।
ಕರುಣಾಕರ ಯೇನ ತೇನ ಮಾಮ್
  ಅವಸನ್ನಂ ನನು ಪಶ್ಯ ಚಕ್ಷುಷಾ ॥ ೧೧ ॥

೧೧. ಎಲೈ ಕರುಣಾಸಾಗರನೆ, ಬಹಳ ಜನ ಋಷಿಗಳು ತಮಗೆ ಇಷ್ಟವಾದ ವಸ್ತುವಾದ (ನಿನ್ನನ್ನು) ಕಂಡವರಾಗಿ ಧನ್ಯರಾದರು. (ಅವರನ್ನು) ಯಾವ ದೃಷ್ಟಿಯಿಂದ (ಅನುಗ್ರಹಿಸಿದೆಯೋ) ಅದರಿಂದ, ಕುಸಿದುಹೋಗಿರುವ ನನ್ನನ್ನೂ ನೋಡಿ ಅನುಗ್ರಹಿಸುವವನಾಗು.

**ಪ್ರಣಮಾಮ್ಯಥ ಯಾಮಿ ಚಾಪರಂ**
**ಶರಣಂ ಕಂ ಕೃಪಣಾಭಯಪ್ರದಮ್ ।**
**ವಿರಹೀವ ವಿಭೋ ಪ್ರಿಯಾಮಯಂ**
**ಪರಿಪಶ್ಯಾಮಿ ಭವನ್ಮಯಂ ಜಗತ್ ॥ ೧೨ ॥**

೧೨. ಕೃಪಣರಿಗೆ ಅಭಯಪ್ರದನಾಗಿರುವ ನಿನ್ನನ್ನು ನಮಸ್ಕರಿಸುತ್ತೇನೆ. ಹಾಗಿಲ್ಲದೆ ಬೇರೆ ಯಾರನ್ನು ಶರಣುಹೋಗಲಿ? ಎಲೈ ವಿಭುವೆ, ವಿರಹಿಯು ಪ್ರಪಂಚವನ್ನೆಲ್ಲ ತನ್ನ ಪ್ರಿಯಳಿಂದಲೇ ತುಂಬಿರುವಂತೆ ಹೇಗೆ ಕಾಣುವನೋ ಹಾಗೆ ಜಗತ್ತೆಲ್ಲವನ್ನೂ ನಿನ್ನ ಸ್ವರೂಪವಾಗಿಯೇ ನೋಡುತ್ತಿರುವೆನು.

**ಬಹವೋ ಭವತಾನುಕಂಪಿತಾಃ**
**ಕಿಮಿತೀಶಾನ ನ ಮಾನುಕಂಪಸೇ ।**
**ದಧತಾ ಕಿಮು ಮಂದರಾಚಲಂ**
**ಪರಮಾಣುಃ ಕಮಠೇನ ದುರ್ಧರಃ ॥ ೧೩ ॥**

೧೩. ಎಲೈ ಪರಮೇಶ್ವರನೆ, ಬಹಳ ಜನರು ನಿನ್ನಿಂದ ಕೃಪೆಮಾಡಲ್ಪಟ್ಟರು. ಆದರೆ ಏತಕ್ಕಾಗಿ ನನಗೆ ಇನ್ನೂ ದಯೆ ತೋರದೆ ಇರುವೆ? ಆಮೆಯ ರೂಪದಿಂದ ಮಂದರಪರ್ವತವನ್ನೇ ಧರಿಸಿರುವ ನಿನಗೆ ಒಂದು ಕಣವು ಭಾರವಾಗಲಾರದಲ್ಲವೆ?

**ಅಶುಚಿಂ ಯದಿ ಮಾನುಮನ್ಯಸೇ**
**ಕಿಮಿದಂ ಮೂರ್ಧ್ನಿ ಕಪಾಲದಾಮ ತೇ ।**
**ಉತ ಶಾಠ್ಯಮಸಾಧುಸಂಗಿನಂ**
**ವಿಷಲಕ್ಷ್ಮಾಸಿ ನ ಕಿಂ ದ್ವಿಜಿಹ್ವಧೃಕ್ ॥ ೧೪ ॥**

೧೪. ನಾನು ಮೈಲಿಗೆಯೆಂದು ಭಾವಿಸುವೆಯಾದರೆ ತಲೆಬುರುಡೆಗಳ ಮಾಲೆಯನ್ನೇಕೆ ಧರಿಸಿರುವೆ? ನಾನು ಶಠ (ಮೂರ್ಖ)ನೆಂದೂ ಕೆಟ್ಟವರ ಸಹವಾಸವುಳ್ಳವನೆಂದೂ ಭಾವಿಸುವೆಯಾದರೆ ವಿಷದ ಗುರುತನ್ನೂ ಹಾವುಗಳನ್ನೂ ನೀನೇಕೆ ಹೊಂದಿರುವೆ?

**ಕ್ವ ದೃಶಂ ವಿದಧಾಮಿ ಕಿಂಕರೋ-**
**ಮ್ಯನುತಿಷ್ಠಾಮಿ ಕಥಂ ಭಯಾಕುಲಃ ।**
**ಕ್ವ ನು ತಿಷ್ಠಸಿ ರಕ್ಷ ರಕ್ಷ ಮಾಂ**
**ಅಯಿ ಶಂಭೋ ಶರಣಾಗತೋಽಸ್ಮಿ ತೇ ॥ ೧೫ ॥**

೧೫. ಭಯದಿಂದ ಕೂಡಿರುವ ನಾನು ಎಲ್ಲಿ ದೃಷ್ಟಿಯಿಡಲಿ? ಏನು ಮಾಡಲಿ? ಹೇಗೆ ನಡೆದುಕೊಳ್ಳಲಿ? ಎಲೈ ಶಂಭುವೆ, ಎಲ್ಲಿರುವೆ? ಕಾಪಾಡು, ಕಾಪಾಡು. ನಿನಗೆ ನಾನು ಶರಣಾಗತನಾಗಿರುವೆನು.

ವಿಲುಠಾಮ್ಯವನೌ ಕಿಮಾಕುಲಃ
ಕಿಮುರೋ ಹನ್ಮಿ ಶಿರಶ್ಛಿನದ್ಮಿ ವಾ ।
ಕಿಮು ರೋದಿಮಿ ರಾರಟೀಮಿ ಕಿಂ
ಕೃಪಣಂ ಮಾಂ ನ ಯದೀಕ್ಷಸೇ ಪ್ರಭೋ ॥ ೧೬ ॥

೧೬. ಎಲೈ ಪ್ರಭುವೆ, ಕೃಪಣನಾದ ನನ್ನನ್ನು ನೀನು (ಕೃಪೆಯಿಟ್ಟು) ನೋಡದೆ ಹೋದರೆ ನೆಲದಲ್ಲಿ ಬಿದ್ದು ದುಃಖದಿಂದ ಹೊರಳಾಡಲೆ? ಎದೆಯನ್ನು ಬಡಿದುಕೊಳ್ಳಲೆ ? ತಲೆಯನ್ನು ಕತ್ತರಿಸಿಕೊಳ್ಳಲೆ? ಅತ್ತುಬಿಡಲೆ? ಕಿರುಚಿ ಕೊಳ್ಳಲೆ ? ಏನು ಮಾಡಲಿ ?

ಶಿವ ಸರ್ವಗ ಶರ್ವ ಶರ್ಮದ
ಪ್ರಣತೋ ದೇವ ದಯಾಂ ಕುರುಷ್ವ ಮೇ ।
ನಮ ಈಶ್ವರ ನಾಥ ದಿಕ್ಪತೇ
ಪುನರೇವೇಶ ನಮೋ ನಮೋಽಸ್ತು ತೇ ೧೭ ॥

೧೭. ಎಲೈ ಶಿವನೆ, ಸರ್ವಗತನೆ, (ಪ್ರಲಯಕಾಲದಲ್ಲಿ ಪ್ರಾಣಿಗಳನ್ನು) ಹಿಂಸಿಸುವವನೆ, ಸುಖವನ್ನು ಕೊಡುವವನೆ, ದೇವನೆ ನಮಸ್ಕರಿಸುವೆನು. ನನ್ನ ಮೇಲೆ ದಯೆಯನ್ನು ತೋರುವವನಾಗು. ಎಲೈ ಈಶ್ವರನೆ, ಒಡೆಯನೆ, ದಿಕ್ಕುಗಳಿಗೆ ಒಡೆಯನೆ, ಈಶನೆ, ಮತ್ತೆ ಮತ್ತೆ ನಿನಗೆ ನಮಸ್ಕಾರ!

ಶರಣಂ ತರುಣೇಂದುಶೇಖರಃ
ಶರಣಂ ಮೇ ಗಿರಿರಾಜಕನ್ಯಕಾ ।
ಶರಣಂ ಪುನರೇವ ತಾವುಭೌ
ಶರಣಂ ನಾನ್ಯದುಪೈಮಿ ದೈವತಮ್ ॥ ೧೮ ॥

೧೮. ಬಾಲಚಂದ್ರನನ್ನು ಜಡೆಯಲ್ಲಿ ಧರಿಸಿರುವವನೇ ನನಗೆ ಗತಿಯು. ಗಿರಿರಾಜನ ಪುತ್ರಿಯಾದ ಪಾರ್ವತಿಯೇ ಗತಿಯು. ಅವರಿಬ್ಬರೇ ಗತಿಯೆಂದು ಮತ್ತೊಮ್ಮೆ (ಬೇಡುವೆನು.) ಬೇರೊಬ್ಬ ದೇವನನ್ನು ನಾನು ಶರಣುಹೋಗುವದಿಲ್ಲ.

ಉಪಮನ್ಯುಕೃತಂ ಸ್ತವೋತ್ತಮಂ
ಪ್ರಜಪೇದ್ಯಸ್ತು ಶಿವಸ್ಯ ಸಂನಿಧೌ ।
ಶಿವಲೋಕಮವಾಪ್ಯ ಸೋಽಚಿರಾತ್
ಸಹ ತೇನೈವ ಶಿವೇನ ಮೋದತೇ ॥ ೧೯ ॥

೧೯. ಉಪಮನ್ಯುವು ರಚಿಸಿರುವ ಈ ಉತ್ತಮಸ್ತೋತ್ರವನ್ನು ಯಾವನು ಈಶ್ವರನ ಸನ್ನಿಧಿಯಲ್ಲಿ ಪಠನಮಾಡುವನೋ ಅವನು ತಡವಿಲ್ಲದೆ ಶಿವಲೋಕವನ್ನು ಪಡೆದು ಶಿವನೊಡನೆ ಸೇರಿ ಆನಂದವನ್ನು ಹೊಂದುತ್ತಾನೆ.

# ೯. ಶಿವಭುಜಂಗ ಸ್ತೋತ್ರಮ್

ಗಲದ್ದಾನಗಂಡಂ ಮಿಲದ್ ಭೃಂಗಷಂಡಂ
ಚಲಚ್ಚಾರುಶುಂಡಂ ಜಗತ್ತ್ರಾಣಶೌಂಡಮ್ ।
ಲಸದ್ದಂತಕಾಂಡಂ ವಿಪದ್ಭಂಗಚಂಡಂ
ಶಿವಪ್ರೇಮಪಿಂಡಂ ಭಜೇ ವಕ್ರತುಂಡಮ್ ॥ ೧ ॥

೧. ಕಪೋಲಸ್ಥಳಗಳಿಂದ ಮದೋದಕವನ್ನು ಸುರಿಸುತ್ತಿರುವ, ಮುತ್ತಿಕೊಂಡಿರುವ ಭ್ರಮರಗಳ ಗುಂಪುಳ್ಳ, ಅಲ್ಲಾಡಿಸುತ್ತಿರುವ ಸುಂದರವಾದ ಸೊಂಡಿಲುಳ್ಳ; ಪ್ರಪಂಚವನ್ನು ಕಾಪಾಡುವದರಲ್ಲಿ ಸಮರ್ಥನಾದ, ಹೊಳೆಯುತ್ತಿರುವ ಕೋರೆದಾಡೆಯುಳ್ಳ, ದುಃಖಗಳನ್ನು ನಾಶಗೊಳಿಸುವದರಲ್ಲಿ ಶೂರನಾದ, ಈಶ್ವರನ ಪ್ರಿಯಪುತ್ರನಾದ ವಕ್ರತುಂಡನನ್ನು ಭಜಿಸುವೆನು.

ಅನಾದ್ಯಂತಮಾದ್ಯಂ ಪರಂ ತತ್ತ್ವಮರ್ಥಂ
ಚಿದಾಕಾರಮೇಕಂ ತುರೀಯಂ ತ್ವಮೇಯಮ್ ।
ಹರಿಬ್ರಹ್ಮಮೃಗ್ಯಂ ಪರಬ್ರಹ್ಮರೂಪಂ
ಮನೋವಾಗತೀತಂ ಮಹಃಶೈವಮೀಡೇ ॥ ೨ ॥

೨. ಮೊದಲುಕೊನೆಗಳಿಲ್ಲದ, (ಆದರೆ) ಜಗದಾದಿಯಾದ, ಪರಮವಾದ ತತ್ತ್ವರೂಪನಾದ, ಚೈತನ್ಯಾಕಾರನೂ ಏಕನೂ, ಪ್ರಮೇಯನಲ್ಲದವನೂ ತುರೀಯನೂ ಆಗಿರುವ, ವಿಷ್ಣು, ಬ್ರಹ್ಮರುಗಳಿಂದ ಹುಡುಕಲ್ಪಡುತ್ತಿರುವ ಪರಬ್ರಹ್ಮರೂಪನಾದ, ಮಾತು, ಮನಸ್ಸುಗಳನ್ನು ಮೀರಿದ ಶಿವನೆಂಬ ತೇಜಸ್ಸನ್ನು ಸ್ತುತಿಸುವೆನು.

ಸ್ವಶಕ್ತ್ಯಾದಿಶಕ್ತ್ಯಂತಸಿಂಹಾಸನಸ್ಥಂ
ಮನೋಹಾರಿಸರ್ವಾಂಗರತ್ನೋರು ಭೂಷಮ್ ।
ಜಟಾಹೀಂದು ಗಂಗಾಸ್ಥಿ ಶಮ್ಯಾಕಮೌಲಿಂ
ಪರಾಶಕ್ತಿಮಿತ್ರಂ ನುಮಃ ಪಂಚವಕ್ತ್ರಮ್ ॥ ೩ ॥

೩. ತನ್ನದೇ ಆದ ಶಕ್ತಿಯೇ ಮೊದಲೂ ಕೊನೆಗೂ ವ್ಯಾಪಿಸಿರುವಂಥ ಸಿಂಹಾಸನದಲ್ಲಿ ಕುಳಿತಿರುವ, ಮನೋಹರವಾದ ರತ್ನಮಯವಾದ ಒಡವೆಗಳಿಂದ ಎಲ್ಲಾ ಅವಯವಗಳಲ್ಲಿಯೂ ಅಲಂಕೃತನಾಗಿರುವ, ಜಟೆ, ಹಾವು, ಚಂದ್ರ, ಗಂಗೆ, ಮೂಳೆಗಳ (ಮಾಲೆ)ಯನ್ನು ಧರಿಸಿ, ಕಕ್ಕೆ ಹೂವನ್ನು ಮುಡಿದಿರುವ, ಪರಾಶಕ್ತಿಗೆ ಮಿತ್ರನಾದ ಪಂಚವಕ್ತ್ರನಾದ ಈಶ್ವರನನ್ನು ನಮಸ್ಕರಿಸುವೆವು.

ಶಿವೇಶಾನತತ್ಪೂರುಷಾಘೋರವಾಮಾ-
ದಿಭಿಃ ಪಂಚಭಿರ್ಹೃನ್ಮುಖೈಃ ಷಡ್ಭಿರಂಗೈಃ ।

ಅನೌಪಮ್ಯಷಟ್‌ತ್ರಿಂಶತಂ ತತ್ತ್ವವಿದ್ಯಾ –
ಮತೀತಂ ಪರಂ ತ್ವಾಂ ಕಥಂ ವೇತ್ತಿ ಕೋ ವಾ . ॥ ೪ ॥

೪. ಶಿವ(ಸದ್ಯೋಜಾತ) ಈಶಾನ, ತತ್ಪುರುಷ, ಅಘೋರ, ವಾಮದೇವನೇ ಮುಂತಾದ ಐದು ಮುಖಗಳಿಂದಲೂ ಷಡಂಗಗಳಿಂದಲೂ ಕೂಡಿರುವ ಉಪಮಾರಹಿತನಾದವನೆ, ತತ್ತ್ವವಿದ್ಯೆಯನ್ನೂ ಮೀರಿರುವ, ಮೂವತ್ತಾರನೆಯ ತತ್ತ್ವನೆನಿಸಿರುವ ನಿನ್ನನ್ನು ಯಾವನುತಾನೆ ಹೇಗೆ ತಾನೆ ಕಂಡುಕೊಂಡಾನು ?

ಪ್ರವಾಲಪ್ರವಾಹಪ್ರಭಾಶೋಣಮರ್ಧಂ
ಮರುತ್ವನ್ಮಣಿಶ್ರೀಮಹಃಶ್ಯಾಮಮರ್ಧಮ್ ।
ಗುಣಸ್ಯೂತಮೇತದ್ವಪುಃ ಶೈವಮನ್ತಃ
ಸ್ಮರಾಮಿ ಸ್ಮರಾಪತ್ತಿಸಂಪತ್ತಿಹೇತೋಃ ॥ ೫ ॥

೫. ಹವಳದ ಕಾಂತಿಯ ಪ್ರವಾಹದಂತೆ ಕೆಂಪಾದ ಅರ್ಧಭಾಗವುಳ್ಳ, ಮರಕತರತ್ನದ ಕಾಂತಿಯಂತೆ ನೀಲವಾದ (ಉಳಿದ) ಅರ್ಧಶರೀರಭಾಗವುಳ್ಳ ಈ ಶಿವನ ಸಂಬಂಧವಾದ ಶರೀರವು ತ್ರಿಗುಣಗಳಿಂದ ಹೆಣೆಯಲ್ಪಟ್ಟುದಾಗಿ (ಮನೋಗೋಚರವಾಗಿರುತ್ತದೆ.) ಇದನ್ನು ಕಾಮನ ಸಂಹಾರವೆಂಬ ಐಶ್ವರ್ಯ ಪ್ರಾಪ್ತಿಗಾಗಿ ಸ್ಮರಿಸುವೆನು.

ಸ್ವಸೇವಾಸಮಾಯಾತದೇವಾಸುರೇಂದ್ರಾ –
ನಮನ್ಮೌಳಿಮಂದಾರಮಾಲಾಭಿಷಕ್ತಮ್ ।
ನಮಸ್ಯಾಮಿ ಶಂಭೋ ಪದಾಂಭೋರುಹಂ ತೇ
ಭವಾಂಬೋಧಿಪೋತಂ ಭವಾನೀವಿಭಾವ್ಯಮ್ ॥ ೬ ॥

೬. ಎಲೈ ಪರಮೇಶ್ವರನೆ, ನಿನ್ನ ಸೇವೆಗಾಗಿ ಹತ್ತಿರಕ್ಕೆ ಬಂದಿರುವ ದೇವತೆಗಳು ರಾಕ್ಷಸರೇ ಮುಂತಾದ ಭಕ್ತರುಗಳು ತಲೆಯಲ್ಲಿ ಮುಡಿದಿರುವ ಮಂದಾರ ಕುಸುಮಗಳು ನಮಸ್ಕಾರಮಾಡುವಾಗ ಯಾವ ಪಾದಗಳನ್ನು ಸ್ಪರ್ಶಿಸುತ್ತವೆಯೋ ಅಂಥ ನಿನ್ನ ಚರಣಕಮಲಗಳನ್ನು ನಮಸ್ಕರಿಸುವೆನು. ಪಾರ್ವತೀದೇವಿಯಿಂದ ಸೇವಿಸಲ್ಪಡುವ ಅವು ಸಂಸಾರವನ್ನು ದಾಟಿಸುವ ಹಡಗಿನಂತಿರುವುವು.

ಜಗನ್ನಾಥ ಮನ್ನಾಥ ಗೌರೀಸನಾಥ
ಪ್ರಪನ್ನಾನುಕಂಪಿನ್ ವಿಪನ್ನಾರ್ತಿಹಾರಿನ್ ।
ಮಹಃಸ್ತೋಮಮೂರ್ತೇ ಸಮಸ್ತೈಕಬಂಧೋ
ನಮಸ್ತೇ ನಮಸ್ತೇ ಪುನಸ್ತೇ ನಮೋಽಸ್ತು ॥ ೭ ॥

೭. ಎಲೈ ಜಗತ್ಪತಿಯೆ, ನನ್ನೊಡೆಯನೆ, ಗೌರೀದೇವಿಯೊಡನೆ ಕೂಡಿರುವವನೆ, ಶರಣಾಗತರಿಗೆ ದಯೆತೋರುವವನೆ, ಸಂಕಟಗಳನ್ನು ಪರಿಹರಿಸುವವನೆ, ಸ್ತುತ್ಯವಾದ ತೇಜೋರೂಪಿಯಾದವನೆ, ಸಮಸ್ತರಿಗೂ ಬಂಧುವೆ, ನಿನಗೆ ಮತ್ತೆ ಮತ್ತೆ ನಮಸ್ಕಾರವು.

ವಿರೂಪಾಕ್ಷ ವಿಶ್ವೇಶ ವಿಶ್ವಾದಿದೇವ
ತ್ರಯೀಮೂಲ ಶಂಭೋ ಶಿವ ತ್ರ್ಯಂಬಕ ತ್ವಮ್ ।
ಪ್ರಸೀದ ಸ್ಮರ ತ್ರಾಹಿ ಪಶ್ಯಾವಮುಕ್ತ್ಯೈ
ಕ್ಷಮಾಂ ಪ್ರಾಪ್ನುಹಿ ತ್ರ್ಯಕ್ಷ ಮಾಂ ರಕ್ಷ ಮೋದಾತ್ ॥ ೮ ॥

೮. ವಿರೂಪಾಕ್ಷನೆ, ವಿಶ್ವೇಶ್ವರನೆ, ಜಗತ್ತಿಗೆಲ್ಲ ಆದಿದೇವನೆ, ವೇದಮೂಲನೆ, ಶಂಭುವೆ, ಶಿವನೆ, ಮುಕ್ಕಣ್ಣನೆ, ನೀನು ಪ್ರಸನ್ನನಾಗು; (ಭಕ್ತರನ್ನು) ನೆನೆಸಿಕೊ ; ಮುಕ್ತಿಯನ್ನು ಹೊಂದಲು ಕಾಪಾಡು ; (ಅವರನ್ನು) ನೋಡು ; ಸಲಹು ; (ಅವರ ವಿಷಯಕ್ಕೆ) ಕ್ಷಮೆಮಾಡುವವನಾಗು ; ಎಲೈ ಮೂರುಕಣ್ಣುವುಳ್ಳವನೆ, ನನ್ನನ್ನು ಆನಂದದಿಂದ ಕಾಪಾಡು.

ಮಹಾದೇವ ದೇವೇಶ ದೇವಾದಿದೇವ
ಸ್ಮರಾರೇ ಪುರಾರೇ ಯಮಾರೇ ಹರೇತಿ ।
ಬ್ರುವಾಣಃ ಸ್ಮರಿಷ್ಯಾಮಿ ಭಕ್ತ್ಯಾ ಭವಂತಂ
ತತೋ ಮೇ ದಯಾಶೀಲ ದೇವ ಪ್ರಸೀದ ॥ ೯ ॥

೯. ಎಲೈ ಮಹಾದೇವನೆ, ದೇವೇಶನೆ, ದೇವಾದಿದೇವನೆ, ಮನ್ಮಥವೈರಿಯೆ, ಪುರಹರನೆ, ಯಮನ ಶತ್ರುವೆ, (ಪಾಪ) ಹರನೆ - ಹೀಗೆಂದು ಭಕ್ತಿಯಿಂದ ನಿನ್ನನ್ನು ಕರೆಯುತ್ತಾ ಸ್ಮರಿಸುವೆನು. ದಯಾಮಯನಾದ ದೇವನೆ, ಇನ್ನು ನನಗೆ ಪ್ರಸನ್ನನಾಗು.

ತ್ವದನ್ಯಃ ಶರಣ್ಯಃ ಪ್ರಪನ್ನಸ್ಯ ನೇತಿ
ಪ್ರಸೀದ ಸ್ಮರನ್ನೇವ ಹನ್ಯಾಸ್ತು ದೈನ್ಯಮ್ ।
ನ ಚೇತ್ ತೇ ಭವೇದ್ಭಕ್ತವಾತ್ಸಲ್ಯಹಾನಿಃ
ತತೋ ಮೇ ದಯಾಲೋ ಸದಾ ಸಂನಿಧೇಹಿ ॥ ೧೦ ॥

೧೦. ಶರಣಾಗತನಾದವನಿಗೆ ನಿನ್ನ ಹೊರತು ಬೇರೆಯ ಗತಿಯಿಲ್ಲವೆಂದು ತಿಳಿದು (ಮೊರೆಹೊಕ್ಕಿರುವೆನು). ಸ್ಮರಣಮಾತ್ರದಿಂದ ನೀನು ಪ್ರಸನ್ನನಾಗಿ ನನ್ನ ದೈನ್ಯವನ್ನು ನಾಶಗೊಳಿಸಬೇಕು. ಹಾಗಿಲ್ಲದಿದ್ದರೆ ನೀನು ಭಕ್ತವತ್ಸಲನೆಂಬ (ಬಿರುದು) ಹಾಳಾದೀತು. ಆದ್ದರಿಂದ ದಯಾಳುವೆ, ಯಾವಾಗಲೂ ನನಗೆ ಸಮೀಪದಲ್ಲಿ ತೋರಿಕೊಳ್ಳುವವನಾಗು.

ಅಯಂ ದಾನಕಾಲಸ್ತ್ವಹಂ ದಾನಪಾತ್ರಂ
ಭವಾನೇವ ದಾತಾ ತ್ವದನ್ಯಂ ನ ಯಾಚೇ ।
ಭವದ್ಭಕ್ತಿಮೇವ ಸ್ಥಿರಾಂ ದೇಹಿ ಮಹ್ಯಂ
ಕೃಪಾಶೀಲ ಶಂಭೋ ಕೃತಾರ್ಥೋಽಸ್ಮಿ ತಸ್ಮಾತ್ ॥ ೧೧ ॥

೧೧. ಇದೇ ದಾನಕ್ಕೆ ತಕ್ಕ ಸಮಯವು. ನಾನೇ ದಾನಕ್ಕೆ ಅರ್ಹನು. ಕೊಡುವವನು ನೀನೊಬ್ಬನೇ. ನಿನ್ನ ಹೊರತು ಬೇರೆ ಯಾರನ್ನೂ ನಾನು ಬೇಡಲಾರೆನು. ಕೃಪಾಕರನಾದ ಶಂಭುವೆ, ನನಗೆ ನಿನ್ನ ಸ್ಥಿರವಾದ ಭಕ್ತಿಯನ್ನೇ ಕೊಡುವನಾಗು. ಅದರಿಂದ ನಾನು ಕೃತಕೃತ್ಯನಾಗುವೆನು.

**ಪಶುಂ ವೇತ್ಸಿ ಚೇನ್ಮಾಂ ತಮೇವಾಧಿರೂಢಃ**
**ಕಲಂಕೀತಿ ವಾ ಮೂರ್ಧ್ನಿ ಧತ್ಸೇ ತಮೇವ ।**
**ದ್ವಿಜಿಹ್ವಃ ಪುನಃ ಸೋಽಪಿ ತೇ ಕಂಠಭೂಷಾ**
**ತ್ವದಂಗೀಕೃತಾಃ ಶರ್ವ ಸರ್ವೇಽಪಿ ಧನ್ಯಾಃ ॥ ೧೨ ॥**

೧೨. ನಾನೊಬ್ಬ ಪಶುವೆಂದು ಭಾವಿಸುವೆಯಾದರೆ ಅದನ್ನೇ (ವೃಷಭವನ್ನೇ) ನೀನು ಸವಾರಿಮಾಡಿರುತ್ತೀಯೆ. ನಾನು ದೋಷವುಳ್ಳವನೆಂದು ತಿಳಿಯುವೆಯಾದರೆ ಕಲಂಕವುಳ್ಳ ಆ (ಚಂದ್ರನನ್ನೇ) ತಲೆಯಲ್ಲಿ ಧರಿಸಿದ್ದೀಯೆ. ಮತ್ತು ನಾನು ಎರಡು ನಾಲಗೆಯವನು (ಅನೃತವಾದಿ) ಎಂದು ಭಾವಿಸುವೆಯಾದರೆ, ಆ (ದ್ವಿಜಿಹ್ವನಾದ ನಾಗರಾಜನೇ) ನಿನ್ನ ಕಂಠಾಭರಣನಾಗಿರುವನು. ಎಲೈ ಮಹಾದೇವನೆ, ನಿನ್ನಿಂದ ಸ್ವೀಕರಿಸಲ್ಪಟ್ಟ ಎಲ್ಲರೂ ಧನ್ಯರೇ ಆಗಿರುವರು.

**ನ ಶಕ್ನೋಮಿ ಕರ್ತುಂ ಪರದ್ರೋಹಲೇಶಂ**
**ಕಥಂ ಪ್ರೀಯಸೇ ತ್ವಂ ನ ಜಾನೇ ಗಿರೀಶ ।**
**ತಥಾ ಹಿ ಪ್ರಸನ್ನೋಽಸಿ ಕಸ್ಯಾಪಿ ಕಾಂತಾ -**
**ಸುತದ್ರೋಹಿಣೋ ವಾ ಪಿತೃದ್ರೋಹಿಣೋ ವಾ ॥ ೧೩ ॥**

೧೩. ಎಲೈ ಗಿರೀಶನೆ, ಮತ್ತೊಬ್ಬರಿಗೆ ದ್ರೋಹಮಾಡುವದನ್ನು ಸ್ವಲ್ಪವೂ ನಾನು ಮಾಡಲಾರದವನಾಗಿರುವೆನು. ಆದ್ದರಿಂದ ನೀನು ನನಗೆ ಹೇಗೆ ಪ್ರಸನ್ನನಾದೀಯೋ ಕಾಣೆನು. ಏಕೆಂದರೆ ನೀನು ಯಾರೋ ಕೆಲವರು ಹೆಂಡತಿ, ಮಗ, ತಂದೆ - ಮುಂತಾದವರಿಗೆ ದ್ರೋಹಮಾಡಿರುವಂಥವರಿಗೆಲ್ಲ ಪ್ರಸನ್ನನಾಗಿರುವೆ. [1]

**ಸ್ತುತಿಂ ಧ್ಯಾನಮರ್ಚಾಂ ಯಥಾವದ್ವಿಧಾತುಂ**
**ಭಜನ್ನಪ್ಯಜಾನನ್ ಮಹೇಶಾವಲಂಬೇ ।**
**ತ್ರಸಂತಂ ಸುತಂ ತ್ರಾತುಮಗ್ರೇ ಮೃಕಂಡೋ -**
**ರ್ಯಮಪ್ರಾಣನಿರ್ವಾಪಣಂ ತ್ವತ್ಪದಾಬ್ಜಮ್ ॥ ೧೪ ॥**

1. ಸುತದ್ರೋಹಿಯಾದ ಹಿರಣ್ಯಕಶಿಪು ಮುಂತಾದವರಿಗೆ ನೀನು ಪ್ರಸನ್ನನಾಗಿರುವೆ - ಎಂದಭಿಪ್ರಾಯ.

೧೪. ಎಲೈ ಮಹೇಶ್ವರನೆ, ಸ್ತೋತ್ರ, ಧ್ಯಾನ, ಪೂಜೆ ಮುಂತಾದವನ್ನು ಶಾಸ್ತ್ರೋಕ್ತವಾಗಿ ಮಾಡುವದಕ್ಕೆ ಅರಿಯದೆ ನಾನು ನಿನ್ನ ಪಾದಾರವಿಂದಗಳನ್ನು ಆಶ್ರಯಿಸಿರುವೆನು. (ಏಕೆಂದರೆ) ನಿನ್ನ ಪಾದಾರವಿಂದಗಳು (ಮೃತ್ಯುವಿಗೆ) ಬೆದರಿದ ಮೃಕಂಡುಪುತ್ರನನ್ನು ಕಾಪಾಡುವದರಲ್ಲಿ ಮುಂದಾಗಿದ್ದು ಯಮನ ಪ್ರಾಣಗಳನ್ನೇ ನಾಶಮಾಡಿದಂಥವುಗಳಾಗಿವೆ.

**ಶಿರೋದೃಷ್ಟಿಹೃದ್ರೋಗಶೂಲಪ್ರಮೇಹ**
**ಜ್ವರಾರ್ಶೋಽಜರಾಯಕ್ಷ್ಮಹಿಕ್ಕಾವಿಷಾರ್ತಾನ್ ।**
**ತ್ವಮಾದ್ಯೋ ಭಿಷಗ್ ಭೇಷಜಂ ಭಸ್ಮ ಶಂಭೋ**
**ತ್ವಮುಲ್ಲಾಘಯಾಸ್ಮಾನ್ ವಪುರ್ಲಾಘವಾಯ ॥ ೧೫ ॥**

೧೫. ತಲೆನೋವು, ದೃಷ್ಟಿಮಾಂದ್ಯ, ಹೃದಯರೋಗ, ಹೊಟ್ಟೆಶೂಲೆ, ಗುಹ್ಯರೋಗ, ಜ್ವರ, ಮೂಲವ್ಯಾಧಿ, ಮುಪ್ಪು, ಕ್ಷಯ, ವಿಷಪ್ರಯೋಗಾದಿಗಳಿಂದ ಬಳಲಿದ ರೋಗಿಗಳಿಗೆ ನೀನೊಬ್ಬನೇ ಶ್ರೇಷ್ಠನಾದ ವೈದ್ಯನು. ಭಸ್ಮವೇ ಔಷಧಿಯು. ಶಂಭುವೆ, ನಮ್ಮನ್ನು ಶರೀರವು ಹಗುರವಾಗುವದಕ್ಕಾಗಿ ಚೆನ್ನಾಗಿ ಎತ್ತಿ ತೂಗಾಡಿಸುವವನಾಗು.

**ದರಿದ್ರೋಽಸ್ಮ್ಯಭದ್ರೋಽಸ್ಮಿ ಭಗ್ನೋಽಸ್ಮಿ ದೂಯೇ**
**ವಿಷಣ್ಣೋಽಸ್ಮಿ ಸನ್ನೋಽಸ್ಮಿ ಖಿನ್ನೋಽಸ್ಮಿ ಚಾಹಮ್ ।**
**ಭವಾನ್ ಪ್ರಾಣಿನಾಮಂತರಾತ್ಮಾಸಿ ಶಂಭೋ**
**ಮಮಾಧಿಂ ನ ವೇತ್ಸಿ ಪ್ರಭೋ ರಕ್ಷ ಮಾಂ ತ್ವಮ್ ॥ ೧೬ ॥**

೧೬. ನಾನು ದರಿದ್ರನು. ನಿರ್ಬಲನು - (ಸಂಸಾರದುಃಖದಿಂದ) ತೊಳಲುತ್ತಿರುವವನು ; ಬಳಲಿರುವೆನು. ವಿಷಾದವನ್ನು ಹೊಂದಿರುವೆನು. ಕುಸಿದಿರುವೆನು ; ದುಃಖಿತನಾಗಿರುವೆನು. ನೀನು ಪ್ರಾಣಿಗಳ ಅಂತರಾತ್ಮನಾಗಿರುವೆ. ಎಲೈ ಶಂಭುವೆ, ನನ್ನ ಮನೋರೋಗವನ್ನು ಅರಿಯಲಾರೆಯ ? ಪ್ರಭುವೆ, ನೀನು ನನ್ನನ್ನು ಕಾಪಾಡುವವನಾಗು.

**ತ್ವದಕ್ಷ್ಣೋಃ ಕಟಾಕ್ಷಃ ಪತೇತ್ ತ್ರ್ಯಕ್ಷ ಯತ್ರ**
**ಕ್ಷಣಂ ಕ್ಷ್ಮಾ ಚ ಲಕ್ಷ್ಮೀಃ ಸ್ವಯಂ ತಂ ವೃಣಾತೇ ।**
**ಕಿರೀಟಸ್ಫುರಚ್ಚಾಮರಚ್ಛತ್ರಮಾಲಾ -**
**ಕಲಾಚೀಗಜಕ್ಷೌಮಭೂಷಾವಿಶೇಷೈಃ ॥ ೧೭ ॥**

೧೭. ಎಲೈ ಮುಕ್ಕಣ್ಣನೆ, ನಿನ್ನ ಕಣ್ಣುಗಳ ಕುಡಿನೋಟವು ಕ್ಷಣಕಾಲ ಎಲ್ಲಿ ಬೀಳುವದೋ ಅಂಥವನನ್ನು ಕಿರೀಟ, ಹೊಳೆಯುವ ಚಾಮರ, ಛತ್ರಿ, ತೋರಣ, ಆನೆ, ರೇಷ್ಮೆವಸ್ತ್ರಗಳೇ ಮೊದಲಾದ ಅಲಂಕಾರಗಳೊಡನೆ ಭೂದೇವಿಯೂ, ಲಕ್ಷ್ಮಿಯೂ ತಾವಾಗಿಯೇ ವರಿಸುವರು.

ಭವಾನ್ಯೈ ಭವಾಯಾಪಿ ಮಾತ್ರೇ ಚ ಪಿತ್ರೇ
ಮೃಡಾನ್ಯೈ ಮೃಡಾಯಾಪ್ಯಘಘ್ನ್ಯೈ ಮಖಘ್ನೇ ।
ಶಿವಾಂಗ್ಯೈ ಶಿವಾಂಗಾಯ ಕುರ್ಮಃ ಶಿವಾಯೈ
ಶಿವಾಯಾಂಬಿಕಾಯೈ ನಮಸ್ತ್ರ್ಯಂಬಕಾಯ ॥ ೧೮ ॥

೧೮. ತಂದೆಯಾದ ಭವನಿಗೂ ತಾಯಿಯಾದ ಭವಾನಿಗೂ ಯಜ್ಞಧ್ವಂಸಕನಾದ ಮೃಡನಿಗೂ ಪಾಪಧ್ವಂಸಕಳಾದ ಮೃಡಾಣಿಗೂ ಮಂಗಳಕರವಾದ ಅವಯವಗಳುಳ್ಳ ಶಿವಶಿವೆಯರಿಗೂ ತ್ರ್ಯಂಬಕನಾದ ಮುಕ್ಕಣ್ಣನಿಗೂ ಅಂಬಿಕೆಗೂ ನಮಸ್ಕರಿಸುವೆವು,

ಭವದ್ಗೌರವಂ ಮಲ್ಲಘುತ್ವಂ ವಿದಿತ್ವಾ
ಪ್ರಭೋ ರಕ್ಷ ಕಾರುಣ್ಯದೃಷ್ಟ್ಯಾನುಗಂ ಮಾಮ್ ।
ಶಿವಾತ್ಮಾನುಭಾವಸ್ತುತಾವಕ್ಷಮೋಽಹಂ
ಸ್ವಶಕ್ತ್ಯಾ ಕೃತಂ ಮೇಽಪರಾಧಂ ಕ್ಷಮಸ್ವ ॥ ೧೯ ॥

೧೯. ಎಲೈ ಪ್ರಭುವೆ, ನಿನ್ನ ಗೌರವವನ್ನೂ ನನ್ನ ಲಾಘವ (ದೈನ್ಯ) ವನ್ನೂ ಅರಿತು ಕರುಣಾಮಯವಾದ ದೃಷ್ಟಿಯಿಂದ ನನ್ನನ್ನು ಕಾಪಾಡುವನಾಗು. ಎಲೈ ಶಿವನೆ, ನಿನ್ನ ಸ್ವರೂಪಾನುಭವವನ್ನು ಹೊಂದಿ ಸ್ತೋತ್ರಮಾಡಲು ಅಸಮರ್ಥನಾಗಿರುವೆನು. ಆದರೆ ನನಗೆ ಯೋಗ್ಯತೆಯಿದ್ದಷ್ಟು ಸ್ತೋತ್ರವಮಾಡಿರುವೆನು. ಈ ನನ್ನ ತಪ್ಪನ್ನು ಮನ್ನಿಸುವನಾಗು.

ಯದಾ ಕರ್ಣರಂಧ್ರಂ ವ್ರಜೇತ್ ಕಾಲವಾಹ-
ದ್ವಿಷತ್ ಕಂಠಘಂಟಾಘಣಾತ್ಕಾರನಾದಃ ।
ವೃಷಾಧೀಶಮಾರುಹ್ಯ ದೇವೌಪವಾಹ್ಯಂ
ತದಾ ವತ್ಸ ಮಾ ಭೀರಿತಿ ಪ್ರೀಣಯ ತ್ವಮ್ ॥ ೨೦ ॥

೨೦. ಎಲೈ ದೇವನೆ, ಯಾವಾಗ ನನಗೆ (ಮೃತ್ಯುವೆಂಬ) ಶತ್ರುವನ್ನು ಹೊತ್ತ ವಾಹನವಾದ (ಕೋಣನ) ಕುತ್ತಿಗೆಯಲ್ಲಿರುವ ಘಂಟೆಯ ಶಬ್ದವು ಕೇಳಬರುವದೋ ಆಗ ನೀನು ವೃಷಭಶ್ರೇಷ್ಠನನ್ನು ಏರಿ ಬಂದು 'ಮಗು, ಹೆದರಬೇಡ' ಎಂದು ಅಭಯಪ್ರದಾನಮಾಡಿ ಸಂತೋಷಗೊಳಿಸುವನಾಗು.

ಯದಾ ದಾರುಣಾ ಭಾಷಣಾ ಭೀಷಣಾ ಮೇ
ಭವಿಷ್ಯನ್ತ್ಯುಪಾನ್ತೇ ಕೃತಾನ್ತಸ್ಯ ದೂತಾಃ ।
ತದಾ ಮನ್ಮನಸ್ತ್ವತ್ಪದಾಂಭೋರುಹಸ್ಥಂ
ಕಥಂ ನಿಶ್ಚಲಂ ಸ್ಯಾನ್ನಮಸ್ತೇಽಸ್ತು ಶಂಭೋ ॥ ೨೧ ॥

೨೧. ಎಲೈ ಶಂಭುವೆ, ಭಯಂಕರರಾದ ಯಮದೂತರು ಕ್ರೂರವಾದ ಮಾತುಗಳುಳ್ಳವರಾಗಿ ನನ್ನ ಸಮೀಪಕ್ಕೆ ಬರುವರಾದರೆ, ಆಗ ನಿನ್ನ ಪಾದಾರವಿಂದದಲ್ಲಿ

ನನ್ನ ಮನಸ್ಸು ಹೇಗೆ ತಾನೆ ಚಂಚಲವಾಗದೆ ನಿಂತೀತು ? ಆದ್ದರಿಂದ ಎಲೈ ಶಂಭುವೆ, ಈಗಲೇ ನಿನಗೆ ನಮಸ್ಕಾರ.

**ಯದಾ ದುರ್ನಿವಾರವ್ಯಥೋಽಹಂ ಶಯಾನೋ**
**ಲುಠನ್ನಿಃಶ್ವಸನ್ ನಿಸ್ಸೃತಾವ್ಯಕ್ತವಾಣಿಃ ।**
**ತದಾ ಜಹ್ನುಕನ್ಯಾ ಜಲಾಲಂಕೃತಂ ತೇ**
**ಜಟಾಮಂಡಲಂ ಮನ್ಮನೋಮಂದಿರಂ ಸ್ಯಾತ್ ॥ ೧೧ ॥**

**೧೧.** ಯಾವಾಗ ನಾನು ತಡೆಯಲಾರದ ದುಃಖದಿಂದ ಬಿದ್ದು ಹೊರಳುತ್ತಾ ನಿಟ್ಟುಸಿರುಬಿಡುತ್ತಾ ಅಸ್ಫುಟವಾದ ಮಾತನ್ನು ಆಡುತ್ತಾ (ಪರಿತಪಿಸುವೆನೋ) ಆಗ ಗಂಗೆಯ ಜಲದಿಂದ ಭೂಷಿತನಾದ ನಿನ್ನ ಜಟಾಮಂಡಲವೇ ನನ್ನ ಮನಸ್ಸಿಗೆ ಮಂದಿರವಾಗಿರಲಿ.

**ಯದಾ ಪುತ್ರಮಿತ್ರಾದಯೋ ಮತ್ಸಕಾಶೇ**
**ರುದಂತ್ಯಸ್ಯ ಹಾ ಕೀದೃಶೀಯಂ ದಶೇತಿ ।**
**ತದಾ ದೇವದೇವೇಶ ಗೌರೀಶ ಶಂಭೋ**
**ನಮಸ್ತೇ ಶಿವಾಯೇತ್ಯಜಸ್ರಂ ಬ್ರವಾಣಿ ॥ ೧೨ ॥**

**೧೨.** ಯಾವಾಗ ಮಕ್ಕಳು ಸ್ನೇಹಿತರೇ ಮುಂತಾದವರು ನನ್ನ ಸಮೀಪದಲ್ಲಿದ್ದುಕೊಂಡು 'ಅಯ್ಯೋ, ಇವನಿಗೆ ಇಂಥ ಗತಿಯು ಬಂತೆ ?' ಎಂದು ಅಳುವರೋ ಆಗ ಎಲೈ ದೇವದೇವನೆ, ಗೌರೀಪತಿಯೆ, ಶಂಭುವೆ, ಶಿವನಾದ ನಿನಗೆ ನಮಸ್ಕಾರ - ಎಂದು ಬಾರಿಬಾರಿಗೂ ಹೇಳುವೆನು.

**ಯದಾ ಪಶ್ಯತಾಂ ಮಾಮಸೌ ವೇತ್ತಿ ನಾಸ್ಮಾ -**
**ನಯಂ ಶ್ವಾಸ ಏವೇತಿ ವಾಚೋ ಭವೇಯುಃ ।**
**ತದಾ ಭೂತಿಭೂಷಂ ಭುಜಂಗಾವನದ್ಧಂ**
**ಪುರಾರೇ ಭವಂತಂ ಸ್ಫುಟಂ ಭಾವಯೇಯಮ್ ॥ ೧೩ ॥**

**೧೩.** ಯಾವಾಗ ನನ್ನನ್ನು ನೋಡುತ್ತಿರುವವರು 'ಇವನು ನಮ್ಮಗಳನ್ನು ಅರಿಯುತ್ತಿಲ್ಲ ? (ಉತ್ಕ್ರಮಣಾವಸ್ಥೆಯಲ್ಲಿದ್ದಾನೆ,) 'ಇದು ಪ್ರಾಣವಾಯುವೇ' ಮುಂತಾದ ಮಾತುಗಳನ್ನಾಡಿಕೊಳ್ಳುವರೋ ಆಗ ವಿಭೂತಿಯಿಂದ ಅಲಂಕೃತನಾದ ಹಾವುಗಳಿಂದ ಸುತ್ತಲ್ಪಟ್ಟ ಎಲೈ ಪುರಾರಿಯೆ, ನಿನ್ನನ್ನೇ ಚೆನ್ನಾಗಿ ಚಿಂತಿಸುವೆನು.

ಯದಾ ಯಾತನಾದೇಹಸಂದೇಹವಾಹೀ
ಭವೇದಾತ್ಮದೇಹೇ ನ ಮೋಹೋ ಮಹಾನ್ ಮೇ ।
ತದಾ ಕಾಶಶೀತಾಂಶುಸಂಕಾಶಮೀಶ
ಸ್ಮರಾರೇ ವಪುಸ್ತೇ ನಮಸ್ತೇ ಸ್ಮರಾಮಿ ॥ ೧೪ ॥

**೧೫.** ಯಾವಾಗ ನನ್ನ ಶರೀರದಲ್ಲಿ ಯಾತನಾದೇಹದ ಸಂದೇಹವುಂಟು ಮಾಡುವ ಹೆಚ್ಚಿನ ಮೋಹವು ಉಂಟಾಗುವದಿಲ್ಲವೋ ಆಗ - ಎಂದರೆ ಹಾಗಾಗುವದರೊಳಗೆ ಎಲೈ ಮನ್ಮಥಶತ್ರುವೆ, ನಿನ್ನ ಪ್ರಕಾಶವಾದ, ಚಂದ್ರನಿಗೆ ಸಮವಾದ (ತಂಪುಳ್ಳ) ಶರೀರವನ್ನು ಸ್ಮರಿಸುವೆನು. ನಿನಗೆ ನಮಸ್ಕಾರವು.

**ಯದಾಪಾರಮಚ್ಛಾಯಮಸ್ಥಾನಮದ್ಭಿ-**
**ರ್ಜನೈರ್ವಾ ವಿಹೀನಂ ಗಮಿಷ್ಯಾಮಿ ಮಾರ್ಗಮ್ ।**
**ತದಾ ತಂ ನಿರುಂಧನ್ ಕೃತಾಂತಸ್ಯ ಮಾರ್ಗಂ**
**ಮಹಾದೇವ ಮಹ್ಯಂ ಮನೋಜ್ಞಂ ಪ್ರಯಚ್ಛ ॥ ೧೬ ॥**

**೧೬.** ಯಾವಾಗ ನಾನು ತುದಿಗಾಣದ, ನೆರಳಿಲ್ಲದ, ವಾಸಕ್ಕೆ ಅಯೋಗ್ಯವಾದ, ನೀರಾಗಲಿ, ಜನರಾಗಲಿ, ಇಲ್ಲದ (ನರಕ) ಮಾರ್ಗವನ್ನು ಹೊಂದುವೆನೋ ಆಗ ಆ ಯಮನ ಮಾರ್ಗವನ್ನು ತಡೆದು ಎಲೈ ಮಹಾದೇವನೆ, ನನಗೆ ಮನಸ್ಸಿಗೆ ಹಿತವಾದ ಸನ್ಮಾರ್ಗವನ್ನು ಅನುಗ್ರಹಿಸುವನಾಗು.

**ಯದಾ ರೌರವಾದಿ ಸ್ಮರನ್ನೇವ ಭೀತ್ಯಾ**
**ವ್ರಜಾಮ್ಯತ್ರ ಮೋಹಂ ಮಹಾದೇವ ಘೋರಮ್ ।**
**ತದಾ ಮಾಮಹೋ ನಾಥ ಕಸ್ತಾರಯಿಷ್ಯ-**
**ತ್ಯನಾಥಂ ಪರಾಧೀನಮರ್ಧೇಂದುಮೌಲೇ ॥ ೧೭ ॥**

**೧೭.** ಎಲೈ ಮಹಾದೇವನೆ, ಚಂದ್ರಾರ್ಧಮೌಳಿಯೆ, ನಾಥನೆ, ಯಾವಾಗ ನಾನು ಇಲ್ಲಿಯೇ (ಬದುಕಿರುವಾಗಲೇ) ರೌರವವೇ ಮುಂತಾದ ನರಕಗಳನ್ನು ನೆನೆಸಿಕೊಂಡು ಭಯದಿಂದ ದಾರುಣವಾದ ಮೋಹಪರವಶನಾಗಿ ಬಿಡುವೆನೋ ಆಗ ಪರಾಧೀನನಾದ ಅನಾಥನಾದ ನನ್ನನ್ನು ಉದ್ಧರಿಸುವವರಾರು ?

**ಯದಾ ಶ್ವೇತಪತ್ರಾಯತಾಲಂಘ್ಯಶಕ್ತೇಃ**
**ಕೃತಾಂತಾದ್ಭಯಂ ಭಕ್ತವಾತ್ಸಲ್ಯಭಾವಾತ್ ।**
**ತದಾ ಪಾಹಿ ಮಾಂ ಪಾರ್ವತೀವಲ್ಲಭಾನ್ಯಂ**
**ನ ಪಶ್ಯಾಮಿ ಪಾತಾರಮೇತಾದೃಶಂ ಮೇ ॥ ೧೮ ॥**

**೧೮.** ಯಾವಾಗ ಬಿಳುಪಾದ ಛತ್ರಿಯಿಂದಲಂಕೃತನಾದ ಅಸಾಧಾರಣ ಸಾಮರ್ಥ್ಯವುಳ್ಳ ಮೃತ್ಯುವಿನ ದೆಸೆಯಿಂದ ನನಗೆ ಭಯವುಂಟಾಗುವದೋ, ಆಗ ಎಲೈ ಪಾರ್ವತೀವಲ್ಲಭನೆ, ನನ್ನನ್ನು ಕಾಪಾಡು. ನಿನ್ನಂಥ ರಕ್ಷಕನನ್ನು ನಾನು ಎಲ್ಲಿಯೂ ಕಾಣೆನು.

**ಇದಾನೀಮಿದಾನೀಂ ಮೃತಿರ್ಮೇ ಭವಿತ್ರೀ-**
**ತ್ಯಹೋ ಸಂತತಂ ಚಿಂತಯಾ ಪೀಡಿತೋಽಸ್ಮಿ ।**

ಕಥಂ ನಾಮ ಮಾ ಭೂನ್ಮೃತೌ ಭೀತಿರೇಷಾ
ನಮಸ್ತೇ ಗತೀನಾಂ ಗತೇ ನೀಲಕಂಠ ॥ ೧೯ ॥

೧೯. ನನಗೆ ಇದೊ ಈಗ, ಇದೊ ಈಗ - ಮರಣವುಂಟಾಗಲಿದೆ - ಎಂಬ ಚಿಂತೆಯಿಂದ ಯಾವಾಗಲೂ ಪೀಡಿತನಾಗಿರುವೆನು. ಹೀಗೆ ಸಾಯುವದರ ವಿಷಯಕ್ಕೆ ಇರುವ ಭೀತಿಯು ಹೇಗಾದರೆ ನಿವಾರಣೆಯಾದೀತು ? (ಅನುಗ್ರಹಿಸು) ಎಲ್ಲೈ ನೀಲಕಂಠನೆ, ಎಲ್ಲಾ ಗತಿಗಳಿಗೂ ಗತಿಯಾಗಿರುವ ನಿನಗೆ ನಮಸ್ಕಾರ.

ಅಮರ್ಯಾದಮೇವಾಹಮಾಬಾಲವೃದ್ಧಂ
ಹರಂತಂ ಕೃತಾಂತಂ ಸಮೀಕ್ಷ್ಯಾಸ್ಮಿ ಭೀತಃ ।
ಮೃತೌ ತಾವಕಾಂಘ್ರ್ಯಬ್ಜದಿವ್ಯಪ್ರಸಾದಾ -
ದ್ಭವಾನೀಪತೇ ನಿರ್ಭಯೋಽಹಂ ಭವಾನಿ ॥ ೨೦ ॥

೨೦. ಮೃತ್ಯುವು ಯಾವದೇ ನಿರ್ಬಂಧವಿಲ್ಲದೆ ಬಾಲಕರಿಂದ ಮುದುಕರವರೆಗಿನವರೆಲ್ಲರನ್ನೂ ಹಿಡಿದುಕೊಂಡು ಹೋಗುವದನ್ನು ಕಂಡು ನಾನು ಹೆದರಿದ್ದೇನೆ. ಆದರೂ ದೇಹವನ್ನು ಬಿಟ್ಟಾಗ ನಿನ್ನ ಪಾದಾರವಿಂದಗಳ ದಿವ್ಯಾನುಗ್ರಹದಿಂದ ಎಲ್ಲೈ ಪಾರ್ವತೀಪತಿಯೆ, ನಾನು ನಿರ್ಭಯನಾಗಿರುವೆನು.

ಜರಾಜನ್ಮಗರ್ಭಾಧಿವಾಸಾದಿದುಃಖಾ -
ನ್ಯಸಹ್ಯಾನಿ ಜಹ್ಯಾಂ ಜಗನ್ನಾಥ ದೇವ ।
ಭವಂತಂ ವಿನಾ ಮೇ ಗತಿರ್ನೈವ ಶಂಭೋ
ದಯಾಲೋ ನ ಜಾಗರ್ತಿ ಕಿಂ ವಾ ದಯಾ ತೇ ॥ ೨೧ ॥

೨೧. ಎಲ್ಲೈ ಜಗತ್ಪತಿಯಾದ ದೇವನೆ, ಮುಪ್ಪು, ಹುಟ್ಟು, ಗರ್ಭವಾಸವೇ ಮುಂತಾದ ಸಹಿಸಲಸಾಧ್ಯವಾದ ದುಃಖಗಳನ್ನು ನಾನು ಹೇಗೆ ಕಳೆದುಕೊಂಡೇನು ? ಎಲ್ಲೈ ಶಂಭುವೆ, ನಿನ್ನನ್ನು ಹೊರತು ನನಗೆ ಬೇರೆ ಗತಿಯಿಲ್ಲ. ಎಲ್ಲೈ ದಯಾಳುವೆ, ನಿನ್ನ ಕೃಪೆಯು ನನ್ನ ವಿಷಯಕ್ಕೆ ಎಚ್ಚರವಾಗಿಲ್ಲವೆ ?

ಶಿವಾಯೇತಿ ಶಬ್ದೋ ನಮಃಪೂರ್ವ ಏಷಃ
ಸ್ಮರನ್ ಮುಕ್ತಿಕೃನ್ಮೃತ್ಯುಹಾ ತತ್ತ್ವವಾಚೀ ।
ಮಹೇಶಾನ ಮಾ ಗಾನ್ಮನಸ್ತೋ ವಚಸ್ತಃ
ಸದಾ ಮಹ್ಯಮೇತತ್ಪ್ರದಾನಂ ಪ್ರಯಚ್ಛ ॥ ೨೨ ॥

೨೨. ನಮಃ ಎಂಬ ಶಬ್ದಸಹಿತವಾದ ಶಿವಾಯ - ಎಂಬ ಭಗವತ್ತತ್ತ್ವವಾಚಕವಾದ (ಮಂತ್ರ)ವು ಸ್ಮರಿಸುವವರಿಗೆ ಮುಕ್ತಿಯನ್ನುಂಟುಮಾಡಿ ಮೃತ್ಯು (ಭಯ)ವನ್ನು ನಾಶಗೊಳಿಸುತ್ತದೆ. ಎಲ್ಲೈ ಮಹೇಶ್ವರನೆ, (ಆ ಮಂತ್ರವು) ನನ್ನ ಮನಸ್ಸಿನಿಂದಲಾಗಲಿ, ಮಾತಿನಿಂದಲಾಗಲಿ ಬಿಟ್ಟುಹೋಗದೆ ಇರಲಿ! ನನಗೆ ಯಾವಾಗಲೂ ಈ ವರವನ್ನು ಕೊಡುವವನಾಗು.

**ತ್ವಮಪ್ಯಂಬ ಮಾಂ ಪಶ್ಯ ಶೀತಾಂಶುಮೌಲಿ -**
**ಪ್ರಿಯೇ ಭೇಷಜಂ ತ್ವಂ ಭವವ್ಯಾಧಿಶಾಂತೌ ।**
**ಬಹುಕ್ಲೇಶಭಾಜಂ ಪದಾಂಭೋಜಪೋತೇ**
**ಭವಾಬ್ಧೌ ನಿಮಗ್ನಂ ನಯಸ್ವಾದ್ಯ ಪಾರಮ್ ॥ ೨೩ ॥**

**೨೩.** ಎಲೌ ತಾಯಿಯೆ, ನೀನೂ ಕೂಡ ನನ್ನನ್ನು ನೋಡುವವಳಾಗು ; ಚಂದ್ರಮೌಳಿಯ ಪ್ರಿಯಳೆ, ಸಂಸಾರವೆಂಬ ರೋಗಪರಿಹಾರಕ್ಕಾಗಿ ಔಷಧಿಯನ್ನು ಕೊಡುವವಳಾಗು. ಅನೇಕದುಃಖಗಳಿಂದ ಕೂಡಿದ, ನಿನ್ನ ಪಾದಾರವಿಂದಗಳೆಂಬ ಹಡಗುಳ್ಳ ಸಂಸಾರದಲ್ಲಿ ಮುಳುಗಿರುವ, ನನ್ನನ್ನು ದಡಕ್ಕೆ ಒಯ್ಯುವವಳಾಗು.

**ಅನುದ್ಯಲ್ಲಲಾಟಾಕ್ಷವಹ್ನಿಪ್ರರೋಹೈ -**
**ರವಾಮಸ್ಫುರಚ್ಚಾರುವಾಮೋರುಶೋಭೈಃ ।**
**ಅನಂಗಭ್ರಮದ್ ಭೋಗಿಭೂಷಾವಿಶೇಷೈಃ**
**ಅಚಂದ್ರಾರ್ಧಚೂಡೈರಲಂ ದೈವತೈರ್ನಃ ॥ ೨೪ ॥**

**೨೪.** ಹಣೆಗಣ್ಣಿನಲ್ಲಿ ಎದ್ದಿರುವ ಅಗ್ನಿಯ ಗುರುತಿಲ್ಲದ, ಎಡಭಾಗದಲ್ಲಿ ಅಲಂಕೃತಳಾಗಿರುವ (ಪಾರ್ವತಿ)ಯೆಂಬ ಸ್ತ್ರೀಯು ಇಲ್ಲದ, ಶರೀರದಲ್ಲಿ ಭೂಷಣವಾಗಿರುವ ಹಾವುಗಳ ಒಡವೆಗಳಿಲ್ಲದ, ಜಟಾಜೂಟದಲ್ಲಿರುವ ಚಂದ್ರನ ಸನ್ನಿಧಿಯಿಲ್ಲದ ದೇವತೆಗಳು ಇನ್ನು ನಮಗೆ ಸಾಕು - (ಬೇಡ).

**ಅಕಂಠೇ ಕಲಂಕಾದನಂಗೇ ಭುಜಂಗಾ -**
**ದಪಾಣೌ ಕಪಾಲಾದಫಾಲೇನಲಾಕ್ಷಾತ್ ।**
**ಅಮೌಳೌ ಶಶಾಂಕಾದವಾಮೇ ಕಲತ್ರಾ -**
**ದಹಂ ದೇವಮನ್ಯಂ ನ ಮನ್ಯೇ ನ ಮನ್ಯೇ ॥ ೨೫ ॥**

**೨೫.** ಕಂಠದಲ್ಲಿ ವಿಷದ ಚಿಹ್ನೆಯಿಲ್ಲದೆ ಇರುವ, ಶರೀರದಲ್ಲಿ ಹಾವುಗಳಿಲ್ಲದಿರುವ, ಕೈಯಲ್ಲಿ (ಬ್ರಹ್ಮ) ಕಪಾಲವಿಲ್ಲದ, ಹಣೆಗಣ್ಣಿನಲ್ಲಿ ಫಾಲಾಗ್ನಿಯಿಲ್ಲದ, ಜಟಾಜೂಟದಲ್ಲಿ ಚಂದ್ರನಿಲ್ಲದ ಎಡಭಾಗದಲ್ಲಿ ಪತ್ನಿಯಿಲ್ಲದ ಮತ್ತೊಬ್ಬ ದೇವನನ್ನು ನಾನು ಕಾಣೆನು- ತಿಳಿಯೆನು.

**ಮಹಾದೇವ ಶಂಭೋ ಗಿರೀಶ ತ್ರಿಶೂಲಿನ್**
**ತ್ವಯೀದಂ ಸಮಸ್ತಂ ವಿಭಾತೀತಿ ಯಸ್ಮಾತ್ ।**
**ಶಿವಾದನ್ಯಥಾ ದೈವತಂ ನಾಭಿಜಾನೇ**
**ಶಿವೋಽಹಂ ಶಿವೋಽಹಂ ಶಿವೋಽಹಂ ಶಿವೋಽಹಮ್ ॥ ೨೬ ॥**

**೨೬.** ಎಲೈ ಮಹಾದೇವನೆ, ಶಂಭುವೆ, ಗಿರೀಶನೆ, ತ್ರಿಶೂಲಧಾರಿಯೆ, ಈ ಸಮಸ್ತ (ಜಗತ್ತೆಲ್ಲವೂ) ನಿನ್ನಲ್ಲಿ ತೋರುತ್ತಿರುವದರಿಂದ ಶಿವನಿಗಿಂತ ಬೇರೊಂದು

ದೇವತೆಯನ್ನು ನಾನು ತಿಳಿಯೆನು. ನಾನು ಶಿವನು ; ನಾನು ಶಿವನು ; ನಾನು ಶಿವನು ; ನಾನು ಶಿವನು.

**ಯತೋಽಜಾಯತೇದಂ ಪ್ರಪಂಚಂ ವಿಚಿತ್ರಂ**
**ಸ್ಥಿತಿಂ ಯಾತಿ ಯಸ್ಮಿನ್ ಯದೇಕಾನ್ತಮನ್ತೇ ।**
**ಸ ಕರ್ಮಾದಿಹೀನಃ ಸ್ವಯಂಜ್ಯೋತಿರಾತ್ಮಾ**
**ಶಿವೋಽಹಂ ಶಿವೋಽಹಂ ಶಿವೋಽಹಂ ಶಿವೋಽಹಮ್ ॥ ೨೭ ॥**

**೨೭.** ಈ ವಿಚಿತ್ರವಾದ ಪ್ರಪಂಚವು ಯಾವನಿಂದುಂಟಾಯಿತೋ ಯಾವನಲ್ಲೇ ಇದ್ದುಕೊಂಡಿರುವದೋ ನಿಶ್ಚಯವಾಗಿಯೂ ಯಾವನಲ್ಲಿ ಕೊನೆಗೊಳ್ಳುವದೋ ಆ ಸ್ವಯಂಜ್ಯೋತಿಯಾದ ಕರ್ಮವೇ ಮುಂತಾದವುಗಳ ಸೋಂಕಿಲ್ಲದ ಆತ್ಮನೇ ಆದ ಶಿವನು ನಾನು, ಶಿವನು ನಾನು, ಶಿವನು ನಾನು, ಶಿವನು ನಾನು.

**ಕಿರೀಟೇ ನಿಶೇಶೋ ಲಲಾಟೇ ಹುತಾಶೋ**
**ಭುಜೇ ಭೋಗಿರಾಜೋ ಗಲೇ ಕಾಲಿಮಾ ಚ ।**
**ತನೌ ಕಾಮಿನೀ ಯಸ್ಯ ತತ್ತುಲ್ಯದೇವಂ**
**ನ ಜಾನೇ ನ ಜಾನೇ ನ ಜಾನೇ ನ ಜಾನೇ ॥ ೨೮ ॥**

**೨೮.** ಕಿರೀಟದಲ್ಲಿ ಚಂದ್ರನೂ ಹಣೆಯಲ್ಲಿ ಅಗ್ನಿಯೂ ತೋಳಿನಲ್ಲಿ ಸರ್ಪರಾಜನೂ ಕಂಠದಲ್ಲಿ ಕಪ್ಪೂ, ಶರೀರದಲ್ಲೇ ಪ್ರಿಯಳಾದ (ಪಾರ್ವತಿ) ಯೂ ಯಾವನಿಗೆ ಇರುವಳೋ ಅವನಿಗೆ ಸಮಾನನಾದ ದೇವನನ್ನು ನಾನು ಕಾಣೆನು, ಅರಿಯೆನು, ತಿಳಿಯೆನು, ಕಾಣೆನು.

**ಅನೇನ ಸ್ತವೇನಾದರಾದಂಬಿಕೇಶಂ**
**ಪರಾಂ ಭಕ್ತಿಮಾಸಾದ್ಯ ಯಂ ಯೇ ನಮನ್ತಿ ।**
**ಮೃತೌ ನಿರ್ಭಯಾಸ್ತೇ ಜನಾಸ್ತಂ ಭಜನ್ತೇ**
**ಹೃದಂಭೋಜಮಧ್ಯೇ ಸದಾಸೀನಮೀಶಮ್ ॥ ೨೯ ॥**

**೨೯.** ಯಾರು ಈ ಸ್ತೋತ್ರದಿಂದ ಶ್ರದ್ಧಾಪೂರ್ವಕವಾಗಿ ಅಂಬಿಕಾಪತಿಯಾದ ಶಿವನನ್ನು ಪರಮಭಕ್ತಿಯಿಂದ ಕೂಡಿ (ಭಜಿಸಿ) ನಮಿಸುವರೋ ಅವರು ಮರಣಕಾಲದಲ್ಲಿ ಭಯವಿಲ್ಲದವರಾಗಿ ಹೃದಯಕಮಲದ ಮಧ್ಯದಲ್ಲಿ ಯಾವಾಗಲೂ ಕುಳಿತಿರುವ ಈಶ್ವರನನ್ನು ಭಜಿಸುವವರಾಗುವರು.

**ಭುಜಂಗಪ್ರಿಯಾಕಲ್ಪ ಶಂಭೋ ಮಯೈವಂ**
**ಭುಜಂಗಪ್ರಯಾತೇನ ವೃತ್ತೇನ ಕ್ಲೃಪ್ತಮ್ ।**

ನರಃ ಸ್ತೋತ್ರಮೇತತ್ ಪಠಿತ್ವೋರು ಭಕ್ತ್ಯಾ
ಸುಪುತ್ರಾಯುರಾರೋಗ್ಯಮೈಶ್ವರ್ಯಮೇತಿ ॥ ೪೦ ॥

೪೦. ಹಾವುಗಳಿಗೆ ಪ್ರಿಯನಾದ, ವಿಕಲ್ಪರಹಿತನಾದ ಶಂಭುವೆ, ಭುಜಂಗ ಪ್ರಯಾತವೆಂಬ ವೃತ್ತದಿಂದ ಹೇಳಲ್ಪಟ್ಟ ಈ ಸ್ತೋತ್ರವನ್ನು ಮಾನವನು ಹೆಚ್ಚಿನ ಭಕ್ತಿಯಿಂದ ಪಠಿಸಿದವನಾದರೆ ಸುಪುತ್ರರು, ಆಯುಸ್ಸು, ಆರೋಗ್ಯ, ಐಶ್ವರ್ಯಗಳನ್ನು ಪಡೆದು ಸುಖಿಯಾಗುವನು.

ಇತಿ ಶ್ರೀ ಶಂಕರಾಚಾರ್ಯವಿರಚಿತಂ ಶಿವಭುಜಂಗಂಸ್ತೋತ್ರಂ ಸಂಪೂರ್ಣಮ್

## ೧೦. ವೇದಸಾರಶಿವಸ್ತೋತ್ರಮ್

ಪಶೂನಾಂ ಪತಿಂ ಪಾಪನಾಶಂ ಪರೇಶಂ
ಗಜೇಂದ್ರಸ್ಯ ಕೃತ್ತಿಂ ವಸಾನಂ ವರೇಣ್ಯಮ್ ।
ಜಟಾಜೂಟಮಧ್ಯೇ ಸ್ಫುರದ್ ಗಾಂಗವಾರಿಂ
ಮಹಾದೇವಮೇಕಂ ಸ್ಮರಾಮಿ ಸ್ಮರಾರಿಮ್ ॥ ೧ ॥

೧. ಪಶುಪತಿಯೂ ಪಾಪನಾಶಕನೂ ಪರಮೇಶ್ವರನೂ ಆನೆಯ ಚರ್ಮವನ್ನು ಧರಿಸಿರುವವನೂ, ಪೂಜ್ಯನೂ, ಜಟಾಜೂಟದ ನಡುವೆ ಗಂಗಾಜಲದಿಂದ ಹೊಳೆಯುವವನೂ ಕಾಮಶತ್ರುವೂ ಆದ ಮಹಾದೇವನೊಬ್ಬನನ್ನೇ ಸ್ಮರಿಸುವೆನು.

ಮಹೇಶಂ ಸುರೇಶಂ ಸುರಾರಾತಿನಾಶಂ
ವಿಭುಂ ವಿಶ್ವನಾಥಂ ವಿಭೂತ್ಯಂಗಭೂಷಮ್ ।
ವಿರೂಪಾಕ್ಷಮಿಂದ್ವರ್ಕವಹ್ನಿತ್ರಿನೇತ್ರಂ
ಸದಾನಂದಮೀಡೇ ಪ್ರಭುಂ ಪಂಚವಕ್ತ್ರಮ್ ॥ ೨ ॥

೨. ಮಹೇಶ್ವರನೂ ದೇವತೆಗಳೊಡೆಯನೂ ದೇವತೆಗಳ ಶತ್ರುಗಳನ್ನು ನಾಶಗೊಳಿಸುವವನೂ ಸರ್ವವ್ಯಾಪಕನೂ ಜಗದೊಡೆಯನೂ ವಿಭೂತಿಯಿಂದ ಅಲಂಕೃತನಾದವನೂ ಮುಕ್ಕಣ್ಣನೂ ಚಂದ್ರ, ಸೂರ್ಯ, ಅಗ್ನಿಗಳೆಂಬ ಕಣ್ಣುಗಳುಳ್ಳವನೂ ಆದ ಸದಾನಂದಸ್ವರೂಪನಾದ ಐದು ಮುಖಗಳ ಪ್ರಭುವನ್ನು ಸ್ತೋತ್ರಮಾಡುವೆನು.

ಗಿರೀಶಂ ಗಣೇಶಂ ಗಲೇ ನೀಲವರ್ಣಂ
ಗವೇಂದ್ರಾಧಿರೂಢಂ ಗುಣಾತೀತರೂಪಮ್
ಭವಂ ಭಾಸ್ವರಂ ಭಸ್ಮನಾ ಭೂಷಿತಾಂಗಂ
ಭವಾನೀಕಲತ್ರಂ ಭಜೇ ಪಂಚವಕ್ತ್ರಮ್ ॥ ೩

೩. ಗಿರೀಶನೂ ಗಣಗಳೊಡೆಯನೂ ಕತ್ತಿನಲ್ಲಿ ಕಪ್ಪುಳ್ಳವನೂ ಶ್ರೇಷ್ಠವಾದ ವೃಷಭವನ್ನೇರಿರುವವನೂ ಗುಣಾತೀತಸ್ವರೂಪನೂ ಜಗತ್ ಸೃಷ್ಟಿಕರ್ತನೂ ಪ್ರಕಾಶಸ್ವರೂಪನೂ ಭಸ್ಮಾಲಂಕೃತಶರೀರನೂ ಪಾರ್ವತಿಯನ್ನು ಪತ್ನಿಯಾಗಿ ಉಳ್ಳವನೂ ಆದ ಐದು ಮುಖಗಳುಳ್ಳ (ಶಿವನನ್ನು) ಭಜಿಸುವೆನು.

ಶಿವಾಕಾಂತ ಶಂಭೋ ಶಶಾಂಕಾರ್ಧಮೌಳೇ
ಮಹೇಶಾನ ಶೂಲಿನ್ ಜಟಾಜೂಟಧಾರಿನ್ ।
ತ್ವಮೇಕೋ ಜಗದ್ವ್ಯಾಪಕೋ ವಿಶ್ವರೂಪಃ
ಪ್ರಸೀದ ಪ್ರಸೀದ ಪ್ರಭೋ ಪೂರ್ಣರೂಪ ॥ ೪ ॥

೪. ಎಲೈ ಪಾರ್ವತೀಪತಿಯೆ, ಶಂಭುವೆ, ಚಂದ್ರಾರ್ಧಮೌಳಿಯೆ, ಮಹೇಶ್ವರನೆ, ಶೂಲಾಯುಧಧಾರಿಯೆ, ಜಟಾಜೂಟಧರನೆ, ವಿಶ್ವರೂಪನಾದ ನೀನೊಬ್ಬನೇ ಜಗತ್ತೆಲ್ಲವನ್ನೂ ವ್ಯಾಪಿಸಿರುವವನು. ಪೂರ್ಣಸ್ವರೂಪನಾದ ಪ್ರಭುವೆ, ಪ್ರಸನ್ನನಾಗು.

ಪರಾತ್ಮಾನಮೇಕಂ ಜಗದ್ಬೀಜಮಾದ್ಯಂ
ನಿರೀಹಂ ನಿರಾಕಾರಮೋಂಕಾರವೇದ್ಯಮ್ ।
ಯತೋ ಜಾಯತೇ ಪಾಲ್ಯತೇ ಯೇನ ವಿಶ್ವಂ
ತಮೀಶಂ ಭಜೇ ಲೀಯತೇ ಯತ್ರ ವಿಶ್ವಮ್ ॥ ೫ ॥

೫. ಪರಮಾತ್ಮನೂ ಏಕನೂ ಜಗತ್ತಿಗೆ ಕಾರಣನೂ ಆದ್ಯನೂ ಕಾಮರಹಿತನೂ ನಿರಾಕಾರನೂ ಓಂಕಾರದಿಂದ ತಿಳಿಯಲ್ಪಡುವವನೂ ಆಗಿರುವ ವಿಶ್ವವೆಲ್ಲವೂ ಯಾವನಿಂದ ಹುಟ್ಟುವದೋ, ಯಾವನಿಂದ ಕಾಪಾಡಲ್ಪಡುವದೋ ಯಾವನಲ್ಲಿಯೇ ಲಯವಾಗುವದೋ ಆ ಈಶ್ವರನನ್ನು ಭಜಿಸುವೆನು.

ನ ಭೂಮಿರ್ನ ಚಾಪೋ ನ ವಹ್ನಿರ್ನ ವಾಯು
ರ್ನ ಚಾಕಾಶಮಾಸ್ತೇ ನ ತಂದ್ರಾ ನ ನಿದ್ರಾ ।
ನ ಚೋಷ್ಣಂ ನ ಶೀತಂ ನ ದೇಶೋ ನ ವೇಷೋ
ನ ಯಸ್ಯಾಸ್ತಿ ಮೂರ್ತಿಸ್ತ್ರಿಮೂರ್ತಿಂ ತಮೀಡೇ ॥ ೬ ॥

೬. ಭೂಮಿಯಲ್ಲ, ಜಲವಲ್ಲ, ಬೆಂಕಿಯಲ್ಲ; ಗಾಳಿಯಲ್ಲ ಆಕಾಶವೂ ಅಲ್ಲ, ಆಲಸ್ಯವು ಅಲ್ಲ, ನಿದ್ರೆಯಲ್ಲ; ಉಷ್ಣವಲ್ಲ; ಶೀತವಲ್ಲ; ದೇಶವಲ್ಲ; ವೇಷವಲ್ಲ; ಇಂಥವನಾದ ಆಕಾರವಿಲ್ಲದ, ಆದರೆ ತ್ರಿಮೂರ್ತಿಯೂ ಆಗಿರುವ ಅವನನ್ನು ಭಜಿಸುವೆನು.

ಅಜಂ ಶಾಶ್ವತಂ ಕಾರಣಂ ಕಾರಣಾನಾಂ
ಶಿವಂ ಕೇವಲಂ ಭಾಸಕಂ ಭಾಸಕಾನಾಮ್ ।

ತುರೀಯಂ ತಮಃಪಾರಮಾದ್ಯಂತಹೀನಂ
ಪ್ರಪದ್ಯೇ ಪರಂ ಪಾವನಂ ದ್ವೈತಹೀನಮ್ ॥ ೭ ॥

೭. ಅಜನೂ ಶಾಶ್ವತನೂ ಕಾರಣಗಳಿಗೆಲ್ಲ ಕಾರಣನೂ ಮಂಗಳಸ್ವರೂಪನೂ ಕೇವಲನೂ ಹೊಳೆಯುವ ವಸ್ತುಗಳಿಗೆಲ್ಲ ಹೊಳಪನ್ನುಂಟುಮಾಡುವವನೂ ತುರೀಯನೂ ಕತ್ತಲೆಯ ಆಚೆ ಇರುವವನೂ ಮೊದಲುಕೊನೆಗಳಿಲ್ಲದವನೂ ಪರಮಪಾವನನೂ ಎರಡನೆಯದಿಲ್ಲದವನೂ ಆದ ಶಿವನನ್ನು ಶರಣು ಹೊಗುವೆನು.

ನಮಸ್ತೇ ನಮಸ್ತೇ ವಿಭೋ ವಿಶ್ವಮೂರ್ತೇ
ನಮಸ್ತೇ ನಮಸ್ತೇ ಚಿದಾನಂದಮೂರ್ತೇ ।
ನಮಸ್ತೇ ನಮಸ್ತೇ ತಪೋಯೋಗಗಮ್ಯ
ನಮಸ್ತೇ ನಮಸ್ತೇ ಶ್ರುತಿಜ್ಞಾನಗಮ್ಯ ॥ ೮ ॥

೮. ವ್ಯಾಪಕನೆ, ವಿಶ್ವಮೂರ್ತಿಯೆ, ನಿನಗೆ ನಮಸ್ಕಾರ. ಚಿದಾನಂದಮೂರ್ತಿಯೆ, ನಿನಗೆ ನಮಸ್ಕಾರ. ತಪಸ್ಸು, ಯೋಗಗಳಿಂದ ಕಾಣುವದಕ್ಕೆ ಸಾಧ್ಯನಾದವನೆ, ನಮಸ್ಕಾರ. ವೇದೋಕ್ತಜ್ಞಾನದಿಂದ ತಿಳಿಯಲ್ಪಡುವವನೆ, ನಮಸ್ಕಾರ.

ಪ್ರಭೋ ಶೂಲಪಾಣೇ ವಿಭೋ ವಿಶ್ವನಾಥ
ಮಹಾದೇವ ಶಂಭೋ ಮಹೇಶ ತ್ರಿನೇತ್ರ ।
ಶಿವಾಕಾಂತ ಶಾಂತ ಸ್ಮರಾರೇ ಪುರಾರೇ
ತ್ವದನ್ಯೋ ವರೇಣ್ಯೋ ನ ಮಾನ್ಯೋ ನ ಗಣ್ಯಃ ॥ ೯ ॥

೯. ಪ್ರಭುವೆ, ಶೂಲಾಯುಧಧಾರಿಯೆ, ವ್ಯಾಪಕನೆ, ವಿಶ್ವಕ್ಕೆಲ್ಲ ಒಡೆಯನೆ, ಮಹಾದೇವನೆ, ಶಂಭುವೆ, ಮಹೇಶ್ವರನೆ, ಮುಕ್ಕಣ್ಣನೆ, ಪಾರ್ವತೀ ಪತಿಯೆ, ಶಾಂತನೆ, ಕಾಮವೈರಿಯೆ ಪುರಹರನೆ, ನಿನಗಿಂತ ಬೇರೊಬ್ಬ ಶ್ರೇಷ್ಠನಾಗಲಿ, ಪೂಜ್ಯನಾಗಲಿ, ಗಣ್ಯನಾಗಲಿ ಇರುವದಿಲ್ಲ.

ಶಂಭೋ ಮಹೇಶ ಕರುಣಾಮಯ ಶೂಲಪಾಣೇ
ಗೌರೀಪತೇ ಪಶುಪತೇ ಪಶುಪಾಶನಾಶಿನ್ ।
ಕಾಶೀಪತೇ ಕರುಣಯಾ ಜಗದೇತದೇಕ –
ಸ್ತ್ವಂ ಹಂಸಿ ಪಾಸಿ ವಿದಧಾಸಿ ಮಹೇಶ್ವರೋಽಸಿ ॥ ೧೦ ॥

೧೦. ಎಲೈ ಶಂಭುವೆ, ಮಹೇಶನೆ, ಕರುಣಾಮಯನೆ, ಶೂಲಧಾರಿಯೆ, ಗೌರೀಪತಿಯೆ, ಪಶುಪತಿಯೆ, ಪಶುಗಳ ಪಾಶವನ್ನು ಕಳೆಯುವವನೆ, ಕಾಶೀಪಟ್ಟಣದ ದೊರೆಯೆ, ನೀನು ಮಹೇಶ್ವರನಾಗಿರುವೆ. ನೀನೊಬ್ಬನೇ ಕರುಣೆಯಿಂದ ಜಗತ್ತನ್ನು ಸೃಷ್ಟಿಸುತ್ತೀಯೆ, ಕಾಪಾಡುವೆ ; ನಾಶಮಾಡುವೆ.

ತ್ವತ್ತೋ ಜಗದ್ಭವತಿ ದೇವ ಭವ ಸ್ಮರಾರೇ
ತ್ವಯ್ಯೇವ ತಿಷ್ಠತಿ ಜಗನ್ಮೃಡ ವಿಶ್ವನಾಥ ।
ತ್ವಯ್ಯೇವ ಗಚ್ಛತಿ ಲಯಂ ಜಗದೇತದೀಶ
ಲಿಂಗಾತ್ಮಕೇ ಹರ ಚರಾಚರವಿಶ್ವರೂಪಿನ್ ॥ ೧೧ ॥

೧೧. ಎಲೈ ದೇವನೆ, ಕಾಮಹರನೆ, ಜಗತ್ತೆಲ್ಲವೂ ನಿನ್ನಿಂದ ಉಂಟಾಗಿದೆ. ನಿನ್ನಲ್ಲೇ ಇದೆ. ಎಲೈ ವಿಶ್ವನಾಥನೆ, ಈಶನೆ, ಹರನೆ, ಲಿಂಗಾತ್ಮಕನಾದ ಚರಾಚರ ಪ್ರಪಂಚರೂಪನಾದ ನಿನ್ನಲ್ಲಿಯೇ ಈ ಜಗತ್ತು ಲಯವಾಗುವದು.

ಇತಿ ಶ್ರೀ ಶಂಕರಾಚಾರ್ಯವಿರಚಿತಂ ವೇದಸಾರಶಿವಸ್ತೋತ್ರಮ್

## ೧೧. ದ್ವಾದಶಜ್ಯೋತಿರ್ಲಿಂಗಸ್ತೋತ್ರಮ್

ಸೌರಾಷ್ಟ್ರೇ ಸೋಮನಾಥಂ ಚ ಶ್ರೀಶೈಲೇ ಮಲ್ಲಿಕಾರ್ಜುನಮ್ ।
ಉಜ್ಜಯಿನ್ಯಾಂ ಮಹಾಕಾಲಮೋಂಕಾರಮಮಲೇಶ್ವರಮ್ ॥ ೧ ॥

ಪರಲ್ಯಾಂ ವೈದ್ಯನಾಥಂ ಚ ಡಾಕಿನ್ಯಾಂ ಭೀಮಶಂಕರಮ್ ।
ಸೇತುಬಂಧೇ ತು ರಾಮೇಶಂ ನಾಗೇಶಂ ದಾರುಕಾವನೇ ॥ ೨ ॥

ವಾರಾಣಸ್ಯಾಂ ತು ವಿಶ್ವೇಶಂ ತ್ರ್ಯಂಬಕಂ ಗೌತಮೀತಟೇ ।
ಹಿಮಾಲಯೇ ತು ಕೇದಾರಂ ಘೃಷ್ಣೇಶಂ ಚ ಶಿವಾಲಯೇ ॥ ೩ ॥

ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ ।
ಸಪ್ತ ಜನ್ಮಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥ ೪ ॥

ಭಾವಾರ್ಥ : (1) ಸೌರಾಷ್ಟ್ರದಲ್ಲಿ ಸೋಮನಾಥ (2) ಶ್ರೀಶೈಲದಲ್ಲಿ ಮಲ್ಲಿಕಾರ್ಜುನ (3) ಉಜ್ಜಯಿನಿಯಲ್ಲಿ ಮಹಾಕಾಲ (4) ಓಂಕಾರದಲ್ಲಿ ಮ(ಅ) ಮಲೇಶ್ವರ (5) ಪರಲಿಯಲ್ಲಿ ವೈದ್ಯನಾಥ (6) ಡಾಕಿನಿಯಲ್ಲಿ ಭೀಮಶಂಕರ (7) ಸೇತುಬಂಧದಲ್ಲಿ ರಾಮೇಶ್ವರ (8) ದಾರುಕಾವನದಲ್ಲಿ ನಾಗೇಶ್ವರ (9) ಕಾಶಿಯಲ್ಲಿ ವಿಶ್ವೇಶ್ವರ (10) ಗೌತಮೀತೀರದಲ್ಲಿ ತ್ರ್ಯಂಬಕೇಶ್ವರ (11) ಹಿಮಾಲಯದಲ್ಲಿ ಕೇದಾರೇಶ್ವರ (12) ಶಿವಾಲಯದಲ್ಲಿ ಘೃಷ್ಣೇಶ್ವರ - ಈ ಹನ್ನೆರಡು ಜ್ಯೋತಿರ್ಲಿಂಗಗಳನ್ನು ಹಗಲುರಾತ್ರಿಯಲ್ಲಿ ಸ್ಮರಿಸಿದವರಿಗೆ ಏಳು ಜನ್ಮಗಳ ಪಾಪಗಳು ನಾಶವಾಗುವವು.

# ವಿಷ್ಣು ಸ್ತೋತ್ರಗಳು

## ೧. ಷೋಡಶನಾಮಸ್ತೋತ್ರಮ್

**ಔಷಧೇ ಚಿಂತಯೇದ್ವಿಷ್ಣುಂ ಭೋಜನೇ ಚ ಜನಾರ್ದನಮ್ ।**
**ಶಯನೇ ಪದ್ಮನಾಭಂ ಚ ವಿವಾಹೇ ಚ ಪ್ರಜಾಪತಿಮ್ ॥ ೧ ॥**

೧. ಔಷಧವನ್ನು ಸೇವಿಸುವಾಗ ವಿಷ್ಣುವನ್ನೂ ಊಟಮಾಡುವಾಗ ಜನಾರ್ದನನನ್ನೂ ಮಲಗುವಾಗ ಪದ್ಮನಾಭನನ್ನೂ ಮದುವೆಯ ಕಾಲದಲ್ಲಿ ಪ್ರಜಾಪತಿಯನ್ನೂ (ಹೀಗೆ ಬೇರೆಬೇರೆಯ ನಾಮಗಳಿಂದ ಒಪ್ಪುತ್ತಿರುವ ವಿಷ್ಣುವನ್ನು) ಸ್ಮರಿಸಬೇಕು.

**ಯುದ್ಧೇ ಚಕ್ರಧರಂ ದೇವಂ ಪ್ರವಾಸೇ ಚ ತ್ರಿವಿಕ್ರಮಮ್ ।**
**ನಾರಾಯಣಂ ತನುತ್ಯಾಗೇ ಶ್ರೀಧರಂ ಪ್ರಿಯಸಂಗಮೇ ॥ ೨ ॥**

೨. ಯುದ್ಧಮಾಡುವಾಗ ದೇವನಾದ ಚಕ್ರಪಾಣಿಯನ್ನೂ ದೇಶಸಂಚಾರ ಮಾಡುವಾಗ ತ್ರಿವಿಕ್ರಮನನ್ನೂ ಶರೀರವನ್ನು ಬಿಟ್ಟು ಹೊರಡುವಾಗ ನಾರಾಯಣನನ್ನೂ ಪ್ರಿಯವಾದ ವಸ್ತುವನ್ನು ಪಡೆದುಕೊಂಡಾಗ ಶ್ರೀಧರನನ್ನೂ (ಸ್ಮರಿಸಬೇಕು).

**ದುಃಸ್ವಪ್ನೇ ಸ್ಮರ ಗೋವಿಂದಂ ಸಂಕಟೇ ಮಧುಸೂದನಮ್ ।**
**ಕಾನನೇ ನಾರಸಿಂಹಂ ಚ ಪಾವಕೇ ಜಲಶಾಯಿನಮ್ ॥ ೩ ॥**

೩. ಕೆಟ್ಟ ಕನಸನ್ನು ಕಂಡಾಗ ಗೋವಿಂದನನ್ನು ನೆನೆಯುವನಾಗು. ಕಷ್ಟ ಬಂದಾಗ ಮಧುಸೂದನನನ್ನೂ ಕಾಡಿನಲ್ಲಿರುವಾಗ ನರಸಿಂಹನನ್ನೂ ಬೆಂಕಿಯ ಹತ್ತಿರವಿರುವಾಗ ಜಲಶಾಯಿಯಾದ (ನಾರಾಯಣನನ್ನೂ) ಸ್ಮರಿಸಬೇಕು.

**ಜಲಮಧ್ಯೇ ವರಾಹಂ ಚ ಪರ್ವತೇ ರಘುನಂದನಮ್ ।**
**ಗಮನೇ ವಾಮನಂ ಚೈವ ಸರ್ವಕಾಲೇಷು ಮಾಧವಮ್ ॥ ೪ ॥**

೪. ನೀರಿನ ನಡುವೆ ಇರುವಾಗ ವಾರಾಹನನ್ನೂ ಪರ್ವತದಲ್ಲಿರುವಾಗ ರಘುನಂದನ(ರಾಮ)ನನ್ನೂ ಓಡಾಡುವಾಗ ವಾಮನನನ್ನೂ ಎಲ್ಲಾ ಕಾಲದಲ್ಲಿಯೂ ಮಾಧವನನ್ನೂ ನೆನೆಯಬೇಕು.

**ಷೋಡಶೈತಾನಿ ನಾಮಾನಿ ಪ್ರಾತರುತ್ಥಾಯ ಯಃ ಪಠೇತ್ ।**
**ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥ ೫ ॥**

೫. ಈ ಹದಿನಾರು ನಾಮಗಳನ್ನೂ ಬೆಳಗ್ಗೆ ಎದ್ದ ಕೂಡಲೆ ಯಾವನು ಪಠಿಸುವನೋ ಅವನು ಎಲ್ಲಾ ಪಾಪಗಳಿಂದಲೂ ಬಿಡಲ್ಪಟ್ಟವನಾಗಿ ವಿಷ್ಣುಲೋಕದಲ್ಲಿ ಮಹಿಮೆ (ಐಶ್ವರ್ಯ)ವನ್ನೂ ಹೊಂದಿ ಸುಖಿಸುವನು.

# ೨. ಪಾಂಡವಗೀತಾ

ಪಾಂಡವ ಉವಾಚ:

ಪ್ರಹ್ಲಾದನಾರದಪರಾಶರಪುಂಡರೀಕ-
ವ್ಯಾಸಾಂಬರೀಷಶುಕಶೌನಕಭೀಷ್ಮದಾಲ್ಭ್ಯಾನ್ ।
ರುಕ್ಮಾಂಗದಾರ್ಜುನವಸಿಷ್ಠವಿಭೀಷಣಾದೀನ್
ಪುಣ್ಯಾನಿಮಾನ್ ಪರಮಭಾಗವತಾನ್ ಸ್ಮರಾಮಿ ॥ ೧ ॥

೧. ಪಾಂಡವನಿಂತೆಂದನು: ಪ್ರಹ್ಲಾದ, ನಾರದ, ಪರಾಶರ, ಪುಂಡರೀಕ, ವ್ಯಾಸ, ಅಂಬರೀಷ, ಶುಕ, ಶೌನಕ, ಭೀಷ್ಮ, ದಾಲ್ಭ್ಯ, ರುಕ್ಮಾಂಗದ, ಅರ್ಜುನ, ವಸಿಷ್ಠ, ವಿಭೀಷಣನೇ ಮೊದಲಾದ ಪುಣ್ಯವಂತರಾದ ಈ ಪರಮಭಾಗವತರನ್ನು ಸ್ಮರಿಸುವೆನು.

ಲೋಮಹರ್ಷಣ ಉವಾಚ:

ಧರ್ಮೋ ವಿವರ್ಧತಿ ಯುಧಿಷ್ಠಿರಕೀರ್ತನೇನ
ಪಾಪಂ ಪ್ರಣಶ್ಯತಿ ವೃಕೋದರಕೀರ್ತನೇನ ।
ಶತ್ರುರ್ವಿನಶ್ಯತಿ ಧನಂಜಯಕೀರ್ತನೇನ
ಮಾದ್ರೀಸುತೌ ಕಥಯತಾಂ ನ ಭವನ್ತಿ ರೋಗಾಃ ॥ ೨ ॥

೨. ಲೋಮಹರ್ಷಣನಿಂತೆಂದನು : ಧರ್ಮರಾಜನನ್ನು ಸ್ತುತಿಸುವದರಿಂದ ಧರ್ಮವು ಬೆಳೆಯುವದು. ಭೀಮಸೇನನನ್ನು ಹೊಗಳುವದರಿಂದ ಪಾಪವು ಪರಿಹಾರವಾಗುವದು. ಅರ್ಜುನನನ್ನು ಪ್ರಶಂಸೆಮಾಡುವದರಿಂದ ಶತ್ರುನಾಶವಾಗುವದು. ಮಾದ್ರೀಪುತ್ರರಾದ ನಕುಲಸಹದೇವರುಗಳನ್ನು ಸ್ತುತಿಸುವದರಿಂದ ರೋಗಗಳು ಇಲ್ಲವಾಗುವವು.

ಬ್ರಹ್ಮೋವಾಚ:

ಯೇ ಮಾನವಾ ವಿಗತರಾಗಪರಾವರಜ್ಞಾಃ
ನಾರಾಯಣಂ ಸುರಗುರುಂ ಸತತಂ ಸ್ಮರನ್ತಿ ।
ಧ್ಯಾನೇನ ತೇನ ಹತಕಿಲ್ಬಿಷಚೇತನಾಸ್ತೇ
ಮಾತುಃ ಪಯೋಧರರಸಂ ನ ಪುನಃ ಪಿಬನ್ತಿ ॥ ೩ ॥

೩. ಬ್ರಹ್ಮನಿಂತೆಂದನು : ವೈರಾಗ್ಯಶಾಲಿಗಳೂ ಬ್ರಹ್ಮವಿದರೂ ಆದ ಯಾವ ಮನುಷ್ಯರು ದೇವತೆಗಳಿಗೂ ಪೂಜ್ಯನಾದ ನಾರಾಯಣನನ್ನು ಯಾವಾಗಲೂ ನೆನೆಯುತ್ತಿರುವರೋ ಅವರು ಆ ಧ್ಯಾನದಿಂದ ಪಾಪವಿಮುಕ್ತವಾದ ಚಿತ್ತವುಳ್ಳವರಾಗಿ ತಾಯಿಯ ಮೊಲೆಯ ಹಾಲನ್ನು ಮತ್ತೊಮ್ಮೆ ಕುಡಿಯದವರಾಗಿ ಮುಕ್ತರಾಗಿಬಿಡುವರು.

ಇಂದ್ರ ಉವಾಚ:

ನಾರಾಯಣೋ ನಾಮ ನರೋ ನರಾಣಾಂ
ಪ್ರಸಿದ್ಧಚೋರಃ ಕಥಿತಃ ಪೃಥಿವ್ಯಾಮ್ ।
ಅನೇಕಜನ್ಮಾರ್ಜಿತಪಾಪಸಂಚಯಂ
ಹರತ್ಯಶೇಷಂ ಸ್ಮರತಾಂ ಸದೈವ ॥೪॥

೪. ಇಂದ್ರನಿಂತೆಂದನು : ಭೂಮಿಯೊಳಗೆ ಮನುಷ್ಯರ (ಪಾಪಗಳನ್ನು) ಕದಿಯುವ ನಾರಾಯಣನೆಂಬ ಒಬ್ಬ ಪ್ರಸಿದ್ಧನಾದ ಕಳ್ಳನಿರುವನು. ಅವನು ಯಾವಾಗಲೂ ತನ್ನನ್ನು ನೆನೆಯುವವರ, ಅನೇಕ ಜನ್ಮಗಳಲ್ಲಿ ಸಂಪಾದಿಸಿ ಕೂಡಿ ಹಾಕಿದ ಪಾಪಗಳ ಗಂಟೆಲ್ಲವನ್ನೂ ಸ್ವಲ್ಪವೂ ಬಿಡದಂತೆ ಕದಿಯುವನು.

ಯುಧಿಷ್ಠಿರ ಉವಾಚ:

ಮೇಘಶ್ಯಾಮಂ ಪೀತಕೌಶೇಯವಾಸಂ
ಶ್ರೀವತ್ಸಾಂಕಂ ಕೌಸ್ತುಭೋದ್ಭಾಸಿತಾಂಗಮ್
ಪುಣ್ಯೋಪೇತಂ ಪುಂಡರೀಕಾಯತಾಕ್ಷಂ
ವಿಷ್ಣುಂ ವಂದೇ ಸರ್ವಲೋಕೈಕನಾಥಮ್ ॥೫॥

೫. ಯುಧಿಷ್ಠಿರನಿಂತೆಂದನು : ಮೋಡದಂತೆ ನೀಲವರ್ಣನೂ ಹಳದಿಯ ರೇಷ್ಮೆವಸ್ತ್ರವನ್ನುಟ್ಟಿರುವವನೂ ಶ್ರೀವತ್ಸವೆಂಬ ಗುರುತುಳ್ಳವನೂ 'ಕೌಸ್ತುಭ'ವೆಂಬ ರತ್ನದಿಂದ ಹೊಳೆಯುವ ಶರೀರವುಳ್ಳವನೂ ಪುಣ್ಯಶಾಲಿಯೂ ಕಮಲದಂತೆ ವಿಶಾಲವಾದ ಕಂಗಳುಳ್ಳವನೂ ಎಲ್ಲಾ ಲೋಕಗಳಿಗೂ ಒಬ್ಬನೇ ಒಡೆಯನೂ ಆದ ವಿಷ್ಣುವನ್ನು ನಮಸ್ಕರಿಸುವೆನು.

ಭೀಮಸೇನ ಉವಾಚ:

ಜಲೌಘಮಗ್ನಾ ಸಚರಾಚರಾ ಧರಾ
ವಿಷಾಣಕೋಟ್ಯಾಽಖಿಲವಿಶ್ವಮೂರ್ತಿನಾ ।
ಸಮುದ್ಧೃತಾ ಯೇನ ವರಾಹರೂಪಿಣಾ
ಸ ಮೇ ಸ್ವಯಂಭೂರ್ಭಗವಾನ್ ಪ್ರಸೀದತಾಮ್ ॥೬॥

೬. ಭೀಮಸೇನನಿಂತೆಂದನು ನೀರಿನಲ್ಲಿ ಮುಳುಗಿಹೋಗಿದ್ದ, ಚರಾಚರ ಪ್ರಾಣಿಗಳಿಂದ ಕೂಡಿದ ಭೂಮಿಯು, ಇಡಿಯ ಜಗತ್ತನ್ನೇ ಶರೀರವಾಗಿ ಉಳ್ಳ ವರಾಹರೂಪಿಯಾದ ಯಾವನ ಕೋರೆದಾಡೆಯ ತುದಿಯಿಂದ ಎತ್ತಲ್ಪಟ್ಟಿತೋ ಆ ಪೂಜ್ಯನಾದ ಸ್ವಯಂಭುವು ನನಗೆ ಪ್ರಸನ್ನನಾಗಲಿ!

ಅರ್ಜುನ ಉವಾಚ:

ಅಚಿಂತ್ಯಮವ್ಯಕ್ತಮನಂತಮವ್ಯಯಂ
ವಿಭುಂ ಪ್ರಭುಂ ಭಾವಿತವಿಶ್ವಭಾವನಮ್ ।

ತ್ರೈಲೋಕ್ಯವಿಸ್ತಾರವಿಚಾರಕಾರಕಂ
ಹರಿಂ ಪ್ರಪನ್ನೋಽಸ್ಮಿ ಗತಿಂ ಮಹಾತ್ಮನಾಮ್ ॥ ೭ ॥

೭. ಅರ್ಜುನನಿಂತೆಂದನು : ಅಂಚಿತ್ಯನೂ ಇಂದ್ರಿಯಗಳಿಗೆ ಗೋಚರನಲ್ಲದವನೂ ಅನಂತನೂ ಅವ್ಯಯನೂ ವ್ಯಾಪಕನೂ ಒಡೆಯನೂ ಪ್ರಪಂಚವನ್ನೆಲ್ಲ ತನ್ನ ಮಹಿಮೆಯಿಂದ ಆಕ್ರಮಿಸಿದವನೂ ಮೂರು ಲೋಕಗಳಲ್ಲಿಯೂ ಹರಡಿರುವ ವಿಚಾರಕರ್ತನೂ ಆದ ಶ್ರೀಹರಿಯನ್ನು ಶರಣುಹೊಂದಿರುವೆನು. ಆತನೇ ಮಹಾತ್ಮರುಗಳಿಗೆ ಗತಿಯು.

ನಕುಲ ಉವಾಚ :

ಯದಿ ಗಮನಮ ಧಸ್ತಾತ್ಕಾಲಪಾಶಾನುಬದ್ಧೋ
ಯದಿ ಚ ಕುಲವಿಹೀನೇ ಜಾಯತೇ ಪಕ್ಷಿಕೀಟೇ ।
ಕ್ರಿಮಿಶತಮಪಿ ಗತ್ವಾ ಜಾಯತೇ ಚಾಂತರಾತ್ಮಾ
ಮಮ ಭವತು ಹೃದಿಸ್ಥೇ ಕೇಶವೇ ಭಕ್ತಿರೇಕಾ ॥ ೮ ॥

೮. ನಕುಲನಿಂತೆಂದನು : ಮೃತ್ಯುವಿನ ಪಾಶಕ್ಕೆ ವಶನಾಗಿ ಒಂದು ವೇಳೆ ಅಧೋಗತಿಗೆ ಬಿದ್ದರೂ ಅಥವಾ ಹೀನಕುಲದ ಹಕ್ಕಿಹುಳುಗಳ ಜನ್ಮದಲ್ಲಿ ಹುಟ್ಟಿದರೂ, ಈ ಅಂತರಾತ್ಮನು ಹೀಗೆ ನೂರಾರು ಕೀಟಜನ್ಮಗಳನ್ನು ಹೊಂದಿ ಮತ್ತೆ ಮತ್ತೆ ಜನಿಸಿದರೂ ನನಗೆ ಹೃದಯದಲ್ಲೇ ನೆಲಸಿರುವ ಕೇಶವನಲ್ಲಿ ಭಕ್ತಿಯೊಂದೇ ಇರಲಿ.

ಸಹದೇವ ಉವಾಚ :

ತಸ್ಯ ಯಜ್ಞವರಾಹಸ್ಯ ವಿಷ್ಣೋರತುಲತೇಜಸಃ ।
ಪ್ರಣಾಮಂ ಯೇ ಪ್ರಕುರ್ವನ್ತಿ ತೇಷಾಮಪಿ ನಮೋ ನಮಃ ॥ ೯ ॥

೯. ಸಹದೇವನಿಂತೆಂದನು : ಯಜ್ಞವರಾಹರೂಪಿಯಾದ ಅಪ್ರತಿಮ ತೇಜಸ್ವಿಯಾದ ವಿಷ್ಣುವಿಗೆ ಯಾರು ನಮಸ್ಕಾರಮಾಡುವರೋ ಅವರಿಗೂ (ನನ್ನ) ನಮಸ್ಕಾರಗಳು.

ಕುಂತ್ಯುವಾಚ :

ಸ್ವಕರ್ಮಫಲನಿರ್ದಿಷ್ಟಾಂ ಯಾಂ ಯಾಂ ಯೋನಿಂ ವ್ರಜಾಮ್ಯಹಮ್ ।
ತಸ್ಯಾಂ ತಸ್ಯಾಂ ಹೃಷೀಕೇಶ ತ್ವಯಿ ಭಕ್ತಿರ್ದೃಢಾಸ್ತು ಮೇ ॥ ೧೦ ॥

೧೦. ಕುಂತಿಯಿಂತೆಂದಳು : ತನ್ನ ತನ್ನ ಕರ್ಮಕ್ಕೆ ತಕ್ಕಂತೆ ಗೊತ್ತುಪಡಿಸಲ್ಪಟ್ಟ ಯಾವ ಯಾವ ಜನ್ಮವನ್ನು ನಾನು ಪಡೆದರೂ ಆಯಾ ಜನ್ಮದಲ್ಲಿ ಎಲೈ ಹೃಷೀಕೇಶನೆ, ನಿನ್ನಲ್ಲಿ ದೃಢವಾದ ಭಕ್ತಿಯು ನನಗಿರಲಿ !

ಮಾದ್ರ್ಯುವಾಚ:

ಕೃಷ್ಣೇ ರತಾಃ ಕೃಷ್ಣಮನುಸ್ಮರನ್ತಿ
ರಾತ್ರೌ ಚ ಕೃಷ್ಣಂ ಪುನರುತ್ಥಿತಾ ಯೇ ।
ತೇ ಭಿನ್ನ ದೇಹಾ ಪ್ರವಿಶನ್ತಿ ಕೃಷ್ಣಂ
ಹವಿರ್ಯಥಾ ಮಂತ್ರಹುತಂ ಹುತಾಶೇ ॥ ೧೧ ॥

೧೧. ಮಾದ್ರಿಯಿಂತೆಂದಳು : ಕೃಷ್ಣನಲ್ಲಿಯೇ ಅನುರಕ್ತರಾಗಿ (ಹಗಲೂ) ರಾತ್ರೆಯೂ ಕೃಷ್ಣನನ್ನು ಸ್ಮರಿಸುತ್ತಿರುವ ಮತ್ತು ಎದ್ದ ಅನಂತರವೂ ಕೃಷ್ಣನನ್ನೇ ನೆನೆಯುತ್ತಿರುವವರು ದೇಹವು ನಾಶವಾಗಲು - ಮಂತ್ರಪೂರ್ವಕವಾಗಿ ಹೋಮ ಮಾಡಲ್ಪಟ್ಟ ಆಹುತಿಯು ಹೇಗೆ ಯಜ್ಞೇಶ್ವರನನ್ನೇ ಸೇರುವದೋ ಹಾಗೆ - ಕೃಷ್ಣನನ್ನೇ ಪ್ರವೇಶಿಸುವರು.

ದ್ರುಪದ ಉವಾಚ:

ಕೀಟೇಷು ಪಕ್ಷಿಷು ಮೃಗೇಷು ಸರೀಸೃಪೇಷು
ರಕ್ಷಃಪಿಶಾಚಮನುಜೇಷ್ವಪಿ ಯತ್ರ ಯತ್ರ
ಜಾತಸ್ಯ ಮೇ ಭವತು ಕೇಶವ ತ್ವತ್ಪ್ರಸಾದಾತ್
ತ್ವಯ್ಯೇವ ಭಕ್ತಿರಚಲಾಽವ್ಯಭಿಚಾರಿಣೀ ಚ ॥ ೧೨ ॥

೧೨. ದ್ರುಪದನಿಂತೆಂದನು : ಹುಳುಗಳು, ಹಕ್ಕಿಗಳು, ಮೃಗಗಳು, ಹಾವುಗಳು, ರಾಕ್ಷಸರು, ಪಿಶಾಚಿಗಳು, ಮನುಷ್ಯರು - ಮುಂತಾದ ಯಾವ ಯಾವ (ಜಾತಿ) ಯಲ್ಲಿ ಹುಟ್ಟಿದ್ದರೂ ಎಲೈ ಕೇಶವನೆ, ನಿನ್ನ ದಯೆಯಿಂದ ನನಗೆ ನಿನ್ನಲ್ಲಿಯೇ ಏಕನಿಷ್ಠೆಯಿಂದ ಕೂಡಿದ ಭಕ್ತಿಯು ಉಂಟಾಗಲಿ!

ಸುಭದ್ರೋವಾಚ:

ಏಕೋಽಪಿ ಕೃಷ್ಣಸ್ಯ ಕೃತಃ ಪ್ರಣಾಮೋ
ದಶಾಶ್ವಮೇಧಾವಭೃಥೇನ ತುಲ್ಯಃ ।
ದಶಾಶ್ವಮೇಧೀ ಪುನರೇತಿ ಜನ್ಮ
ಕೃಷ್ಣಪ್ರಣಾಮೀ ನ ಪುನರ್ಭವಾಯ ॥ ೧೩ ॥

೧೩. ಸುಭದ್ರೆಯಿಂತೆಂದಳು ಕೃಷ್ಣನಿಗೆ ಮಾಡಿದ ಒಂದೇ ನಮಸ್ಕಾರವೂ ಹತ್ತು ಅಶ್ವಮೇಧಯಜ್ಞಗಳಿಗೆ ಸಮಾನವು. (ಅಥವಾ ನಮಸ್ಕಾರವೇ ಹೆಚ್ಚಿನದು ಏಕೆಂದರೆ) ಹತ್ತು ಅಶ್ವಮೇಧಗಳನ್ನು ಮಾಡಿದವನು ಮತ್ತೆ ಜನ್ಮವನ್ನು ಹೊಂದುವನು. ಕೃಷ್ಣನನ್ನು ನಮಸ್ಕರಿಸಿದವನು ಮತ್ತೆಂದೂ ಹುಟ್ಟುವದಿಲ್ಲ.

ಅಭಿಮನ್ಯುರುವಾಚ:

ಗೋವಿಂದ ಗೋವಿಂದ ಹರೇ ಮುರಾರೇ
ಗೋವಿಂದ ಗೋವಿಂದ ಮುಕುಂದ ಕೃಷ್ಣ ।

ಗೋವಿಂದ ಗೋವಿಂದ ರಥಾಂಗಪಾಣೇ
ಗೋವಿಂದ ಗೋವಿಂದ ಸದಾ ನಮಸ್ತೇ ॥ ೧೪ ॥

೧೪. ಅಭಿಮನ್ಯುವಿಂತೆಂದನು : ಎಲೈ ಗೋವಿಂದನೆ, ಹರಿಯೆ, ಮುರನೆಂಬ ದೈತ್ಯನನ್ನು ಸಂಹಾರಮಾಡಿದವನೆ, ಮುಕುಂದನೆ, ಕೃಷ್ಣನೆ, ಚಕ್ರವನ್ನು ಕೈಯಲ್ಲಿ ಹಿಡಿದಿರುವವನೆ, ನಿನಗೆ ಯಾವಾಗಲೂ ನಮಸ್ಕಾರವು.

ಧೃಷ್ಟದ್ಯುಮ್ನ ಉವಾಚ:
ಶ್ರೀರಾಮ ನಾರಾಯಣ ವಾಸುದೇವ
ಗೋವಿಂದ ವೈಕುಂಠ ಮುಕುಂದ ಕೃಷ್ಣ ।
ಶ್ರೀ ಕೇಶವಾನಂತ ನೃಸಿಂಹ ವಿಷ್ಣೋ
ಮಾಂ ತ್ರಾಹಿ ಸಂಸಾರಭುಜಂಗದಷ್ಟಮ್ ॥ ೧೫ ॥

೧೫. ಧೃಷ್ಟದ್ಯುಮ್ನನಿಂತೆಂದನು : ಶ್ರೀರಾಮನೆ, ನಾರಾಯಣನೆ, ವಾಸುದೇವನೆ, ಗೋವಿಂದನೆ, ವೈಕುಂಠವಾಸಿಯೆ, ಮುಕುಂದನೆ, ಕೃಷ್ಣನೆ, ಕೇಶವನೆ, ಅನಂತನೆ, ನರಸಿಂಹನೆ, ವಿಷ್ಣುವೆ, ಸಂಸಾರವೆಂಬ ಹಾವಿನಿಂದ ಕಡಿಯಲ್ಪಟ್ಟಿರುವ ನನ್ನನ್ನು ಕಾಪಾಡು !

ಸಾತ್ಯಕಿರುವಾಚ:
ಅಪ್ರಮೇಯ ಹರೇ ವಿಷ್ಣೋ ಕೃಷ್ಣ ದಾಮೋದರಾಚ್ಯುತ ।
ಗೋವಿಂದಾನಂತ ಸರ್ವೇಶ ವಾಸುದೇವ ನಮೋಽಸ್ತು ತೇ ॥ ೧೬ ॥

೧೬. ಸಾತ್ಯಕಿಯಿಂತೆಂದನು : ಪ್ರಮಾಣಗಳಿಗೆ ನಿಲುಕದವನೆ, ಹರಿಯೆ, ವಿಷ್ಣುವೆ, ಕೃಷ್ಣನೆ, ದಾಮೋದರನೆ, ಅಚ್ಯುತನೆ, ಗೋವಿಂದನೆ, ಅನಂತನೆ, ಸರ್ವೇಶನೆ, ವಾಸುದೇವನೆ, ನಿನಗೆ ನಮಸ್ಕಾರವು.

ಉದ್ಧವ ಉವಾಚ:
ವಾಸುದೇವಂ ಪರಿತ್ಯಜ್ಯ ಯೋಽನ್ಯಂ ದೇವಮುಪಾಸತೇ ।
ತೃಷಿತೋ ಜಾಹ್ನವೀತೀರೇ ಕೂಪಂ ಖನತಿ ದುರ್ಮತಿಃ ॥ ೧೭ ॥

೧೭. ಉದ್ಧವನಿಂತೆಂದನು : ಯಾವನು ವಾಸುದೇವನನ್ನು ಬಿಟ್ಟು ಬೇರೊಬ್ಬ ದೇವನನ್ನು ಉಪಾಸನೆಮಾಡುವನೋ ಅವನು - ಗಂಗಾತೀರದಲ್ಲಿಯೇ ಇದ್ದುಕೊಂಡು ನೀರಿಗಾಗಿ ಬಾವಿಯನ್ನು ಅಗೆಯುವ ಬಾಯಾರಿದ ದುರ್ಬುದ್ಧಿಯವನಂತೆ - ಆಗುವನು.

ಧೌಮ್ಯ ಉವಾಚ:
ಅಪಾಂ ಸಮೀಪೇ ಶಯನಾಸನಸ್ಥಂ
ದಿವಾ ಚ ರಾತ್ರೌ ಚ ಯಥಾಧಿಗಚ್ಛತಾಮ್ ।

**ಯದ್ಯಸ್ತಿ ಕಿಂಚಿತ್ ಸುಕೃತಂ ಕೃತಂ ಮಯಾ**
**ಜನಾರ್ದನಸ್ತೇನ ಕೃತೇನ ತುಷ್ಯತು** **|| ೧೮ ||**

೧೮. ಧೌಮ್ಯನಿಂತೆಂದನು: ನೀರಿನೊಳಗೆ (ಶೇಷ) ಶಾಯಿಯಾಗಿ ನೆಲಸಿರುವ, ಹಾಗೂ ಹಗಲೂ ರಾತ್ರಿಯೂ ಎಡೆಬಿಡದೆ ಚಿಂತಿಸುವವರಿಗೆ (ದಿಕ್ಕಾದ) ಜನಾರ್ದನನು ನಾನೇನಾದರೂ ಪುಣ್ಯವನ್ನು ಮಾಡಿದ್ದೇನಾದರೆ ಅದರಿಂದ ಸಂತುಷ್ಟನಾಗಲಿ.

**ಸಂಜಯ ಉವಾಚ:**

**ಆರ್ತಾ ವಿಷಣ್ಣಾಃ ಶಿಥಿಲಾಶ್ಚ ಭೀತಾ**
**ಘೋರೇಷು ಚ ವ್ಯಾಧಿಷು ವರ್ತಮಾನಾಃ ।**
**ಸಂಕೀರ್ತ್ಯ ನಾರಾಯಣಶಬ್ದಮಾತ್ರಂ**
**ವಿಮುಕ್ತದುಃಖಾಃ ಸುಖಿನೋ ಭವನ್ತಿ** **|| ೧೯ ||**

೧೯. ಸಂಜಯನಿಂತೆಂದನು: ಬಳಲಿದವರು, ಕುಸಿದವರು, ಸೊರಗಿದವರು, ಹೆದರಿದವರು, ಮತ್ತು ಭಯಂಕರವಾದ ಖಾಯಿಲೆಯಿಂದ ನರಳುತ್ತಿರುವವರು ಯಾರೇ ಆಗಿರಲಿ, ನಾರಾಯಣ - ಎಂಬ ಒಂದು ನಾಮಮಾತ್ರವನ್ನು ಕೀರ್ತನೆ ಮಾಡಿದ್ದೇ ಆದರೆ ದುಃಖದಿಂದ ಬಿಡಲ್ಪಟ್ಟವರಾಗಿ ಸುಖಿಗಳಾಗುವರು.

**ಅಕ್ರೂರ ಉವಾಚ:**

**ಅಹಂ ತು ನಾರಾಯಣದಾಸದಾಸಃ**
**ದಾಸಸ್ಯ ದಾಸಸ್ಯ ಚ ದಾಸದಾಸಃ ।**
**ಅನ್ಯೇಭ್ಯ ಈಶೋ ಜಗತಾಂ ನರಾಣಾಂ**
**ತಸ್ಮಾದಹಂ ಚಾನ್ಯತರೋಽಸ್ಮಿ ಲೋಕೇ** **|| ೨೦ ||**

೨೦. ಅಕ್ರೂರನಿಂತೆಂದನು: ನಾನಾದರೊ, ನಾರಾಯಣನ ದಾಸನ ದಾಸನು. ಮತ್ತು (ನಾರಾಯಣನ) ಸೇವಕನ ಸೇವಕನು ; ಸೇವಕನ ಸೇವಕನೂ ಆಗಿರುವೆನು. ಆದರೆ ಪ್ರಪಂಚದಲ್ಲಿರುವ ಉಳಿದ ಎಲ್ಲ ಮನುಷ್ಯರಿಗೂ ಒಡೆಯನು. ಆದ್ದರಿಂದ ಲೋಕದಲ್ಲಿ ನಾನು ಬೇರೊಬ್ಬನೇ ಆಗಿರುವೆನು.

**ವಿದುರ ಉವಾಚ:**

**ವಾಸುದೇವಸ್ಯ ಯೇ ಭಕ್ತಾಃ ಶಾಂತಾಸ್ತದ್ಗತಮಾನಸಾಃ ।**
**ತೇಷಾಂ ದಾಸಸ್ಯ ದಾಸೋಽಹಂ ಭವೇ ಜನ್ಮನಿ ಜನ್ಮನಿ** **|| ೨೦ ||**

೨೧. ವಿದುರನಿಂತೆಂದನು: ಯಾರು ಶಾಂತರಾಗಿದ್ದುಕೊಂಡು ವಾಸುದೇವನ ಭಕ್ತರಾಗಿ ಆತನಲ್ಲಿಯೇ ಮನಸ್ಸನ್ನು ಇಟ್ಟುಕೊಂಡಿರುವರೋ ಅಂಥವರ ದಾಸರ ದಾಸನಾಗಲು ನಾನು ಜನ್ಮಜನ್ಮದಲ್ಲಿಯೂ ಇಚ್ಛಿಸುವೆನು.

ಭೀಷ್ಮ ಉವಾಚ:
ವಿಪರೀತೇಷು ಕಾಲೇಷು ಪರಿಕ್ಷೀಣೇಷು ಬಂಧುಷು ।
ತ್ರಾಹಿ ಮಾಂ ಕೃಪಯಾ ಕೃಷ್ಣ ಶರಣಾಗತವತ್ಸಲ ॥ ೨೨ ॥

೨೨. ಭೀಷ್ಮನಿಂತೆಂದನು : ಕಾಲವು ಪ್ರತಿಕೂಲವಾಗಿರಲು, ಬಂಧುಗಳೂ ಕ್ಷೀಣರಾಗಿರಲು ಎಲೈ ಶರಣಾಗತರನ್ನು ಪ್ರೀತಿಸುವ ಕೃಷ್ಣನೆ, ನನ್ನನ್ನು ದಯೆಯಿಟ್ಟು ಕಾಪಾಡು.

ದ್ರೋಣಾಚಾರ್ಯ ಉವಾಚ:
ಯೇ ಯೇ ಹತಾಶ್ಚಕ್ರಧರೇಣ ರಾಜನ್
ತ್ರೈಲೋಕ್ಯನಾಥೇನ ಜನಾರ್ದನೇನ ।
ತೇ ತೇ ಗತಾ ವಿಷ್ಣುಪುರೀಂ ಪ್ರಯಾತಾಃ
ಕ್ರೋಧೋಽಪಿ ದೇವಸ್ಯ ವರೇಣ ತುಲ್ಯಃ ॥ ೨೩ ॥

೨೩. ದ್ರೋಣನಿಂತೆಂದನು : ಎಲೈ ರಾಜನೆ, ಮೂರು ಲೋಕಗಳಿಗೆ ಒಡೆಯನೂ ಜನಾರ್ದನನೂ ಆದ ಚಕ್ರಪಾಣಿಯಾದ ಕೃಷ್ಣನಿಂದ ಯಾರು ಯಾರು ಹತರಾದರೋ ಅವರುಗಳು ವೈಕುಂಠನಗರಿಯನ್ನೇ ಕುರಿತು ಹೊರಟುಹೋದರು. ದೇವನ ಕೋಪವೂ ಸಹ ವರಕ್ಕೆ ಸಮಾನವಾಗಿದೆ.

ಕೃಪಾಚಾರ್ಯ ಉವಾಚ:
ಮಜ್ಜನ್ಮನಃ ಫಲಮಿದಂ ಮಧುಕೈಟಭಾರೇ
ತ್ವತ್ಪ್ರಾರ್ಥನೀಯಮದನುಗ್ರಹ ಏಷ ಏವ ।
ತ್ವದ್‌ಭೃತ್ಯ ಭೃತ್ಯ ಪರಿಚಾರಕ ಭೃತ್ಯ ಭೃತ್ಯ -
ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ ॥ ೨೪ ॥

೨೪. ಕೃಪಾಚಾರ್ಯನಿಂತೆಂದನು: ಎಲೈ ಮಧುಕೈಟಭರನ್ನು ಸಂಹರಿಸಿದವನೆ, ನನ್ನ ಹುಟ್ಟಿಗೆ ಇದೇ ಫಲವು. (ಮತ್ತು) ನಿನ್ನನ್ನು ಬೇಡಿಕೊಳ್ಳುವ ನನಗೆ ಅನುಗ್ರಹಮಾಡಬೇಕಾದದ್ದೂ ಇಷ್ಟೇ. (ಏನೆಂದರೆ) ಎಲೈ ಲೋಕನಾಥನೆ, ನೀನು ನಿನ್ನ ಸೇವಕನ, ಸೇವಕನ ಪರಿಚಾರಕನ, ಸೇವಕನ ಸೇವಕನ ಸೇವಕನ ಸೇವಕನು ನಾನು ಎಂದಿಷ್ಟು ನನ್ನನ್ನು ಜ್ಞಾಪಿಸಿಕೊಳ್ಳುವವನಾಗು.

ಅಶ್ವತ್ಥಾಮೋವಾಚ:
ಗೋವಿಂದ ಕೇಶವ ಜನಾರ್ದನ ವಾಸುದೇವ
ವಿಶ್ವೇಶ ವಿಶ್ವ ಮಧುಸೂದನ ವಿಶ್ವನಾಥ ।
ಶ್ರೀ ಪದ್ಮನಾಭ ಪುರುಷೋತ್ತಮ ಪುಷ್ಕರಾಕ್ಷ
ನಾರಾಯಣಾಚ್ಯುತ ನೃಸಿಂಹ ನಮೋ ನಮಸ್ತೇ ॥ ೨೫ ॥

೧೫. ಅಶ್ವತ್ಥಾಮನಿಂತೆಂದನು: ಎಲೈ ಗೋವಿಂದನೆ, ಕೇಶವನೆ, ಜನಾರ್ದನನೆ, ವಾಸುದೇವನೆ, ವಿಶ್ವೇಶನೆ, ವಿಶ್ವನೆ, ಮಧುಸೂದನನೆ, ವಿಶ್ವನಾಥನೆ, ಪದ್ಮನಾಭನೆ, ಪುರುಷೋತ್ತಮನೆ, ಕಮಲನಯನನೆ, ನಾರಾಯಣನೆ, ಅಚ್ಯುತನೆ, ನೃಸಿಂಹನೆ, ನಿನಗೆ ನಮಸ್ಕಾರ! ನಮಸ್ಕಾರ!

**ಕರ್ಣ ಉವಾಚ:**

**ನಾನ್ಯಂ ವದಾಮಿ ನ ಶೃಣೋಮಿ ನ ಚಿಂತಯಾಮಿ**
**ನಾನ್ಯಂ ಸ್ಮರಾಮಿ ನ ಭಜಾಮಿ ನ ಚಾಶ್ರಯಾಮಿ ।**
**ಭಕ್ತ್ಯಾತ್ವದೀಯಚರಣಾಂಬುಜಮಂತರೇಣ**
**ಶ್ರೀ ಶ್ರೀನಿವಾಸ ಪುರುಷೋತ್ತಮ ದೇಹಿ ದಾಸ್ಯಮ್ ॥ ೧೬ ॥**

೧೬. ಕರ್ಣನಿಂತೆಂದನು : ಎಲೈ ಶ್ರೀನಿವಾಸನೆ, ಪುರುಷೋತ್ತಮನೆ, ನಿನ್ನ ಪಾದಾರವಿಂದಗಳನ್ನು ಹೊರತಾಗಿ ಮತ್ತೊಂದನ್ನು ನಾನು (ಬಾಯಲ್ಲಿ) ಆಡುವದಿಲ್ಲ, ಕೇಳುವದಿಲ್ಲ, ಚಿಂತಿಸುವದಿಲ್ಲ, ನೆನೆಯುವದಿಲ್ಲ, ಸೇವಿಸುವದಿಲ್ಲ, ಭಕ್ತಿಯಿಂದ ಶರಣುಹೊಗುವದೂ ಇಲ್ಲ. ನಿನ್ನ ದಾಸ್ಯವನ್ನು ನನಗೆ ಅನುಗ್ರಹಿಸುವವನಾಗು.

**ಧೃತರಾಷ್ಟ್ರ ಉವಾಚ:**

**ನಮೋ ನಮಃ ಕಾರಣವಾಮನಾಯ**
**ನಾರಾಯಣಾಯಾಮಿತವಿಕ್ರಮಾಯ ।**
**ಶ್ರೀಶಾರ್ಙ್ಗಚಕ್ರಾಬ್ಜಗದಾಧರಾಯ**
**ನಮೋಽಸ್ತು ತಸ್ಮೈ ಪುರುಷೋತ್ತಮಾಯ ॥ ೧೭ ॥**

೧೭. ಧೃತರಾಷ್ಟ್ರನಿಂತೆಂದನು : ಜಗತ್ಕಾರಣನೂ, ಭಜಿಸಲ್ಪಡುವವನೂ ಆದ ಅಪ್ರತಿಮಶಕ್ತಿವಂತನಾದ ನಾರಾಯಣನಿಗೆ ನಮಸ್ಕಾರ. ಲಕ್ಷ್ಮಿ, ಶಾರ್ಙ್ಗವೆಂಬ ಧನುಸ್ಸು, ಚಕ್ರ, ಪದ್ಮ, ಗದೆಗಳನ್ನು ಧರಿಸಿರುವ ಪುರುಷೋತ್ತಮನಾದ ಆತನಿಗೆ ನಮಸ್ಕಾರವು.

**ಗಾಂಧಾರ್ಯುವಾಚ:**

**ತ್ವಮೇವ ಮಾತಾ ಚ ಪಿತಾ ತ್ವಮೇವ**
**ತ್ವಮೇವ ಬಂಧುಶ್ಚ ಸಖಾ ತ್ವಮೇವ ।**
**ತ್ವಮೇವ ವಿದ್ಯಾ ದ್ರವಿಣಂ ತ್ವಮೇವ**
**ತ್ವಮೇವ ಸರ್ವಂ ಮಮ ದೇವ ದೇವ ॥ ೧೮ ॥**

೧೮. ಗಾಂಧಾರಿಯಿಂತೆಂದಳು : ನೀನೇ ತಂದೆ ತಾಯಿಗಳು, ನೀನೇ ಬಂಧು, ಸ್ನೇಹಿತನೂ ನೀನೇ. ವಿದ್ಯೆಯೂ, ಐಶ್ವರ್ಯವೂ ನೀನೇ. ದೇವದೇವನೆ, ನೀನೇ ನನಗೆ ಎಲ್ಲವೂ ಆಗಿರುವೆ.

**ದ್ರೌಪದ್ಯುವಾಚ:**
**ಯಜ್ಞೇಶಾಚ್ಯುತ ಗೋವಿಂದ ಮಾಧವಾನಂತ ಕೇಶವ ।**
**ಕೃಷ್ಣ ವಿಷ್ಣೋ ಹೃಷೀಕೇಶ ವಾಸುದೇವ ನಮೋಽಸ್ತು ತೇ ॥ ೧೯ ॥**

೧೯. ದ್ರೌಪದಿಯಿಂತೆಂದಳು : ಯಜ್ಞಗಳಿಗೆ ಒಡೆಯನೆ, ಅಚ್ಯುತನೆ, ಗೋವಿಂದನೆ, ಮಾಧವನೆ, ಅನಂತನೆ, ಕೇಶವನೆ, ಕೃಷ್ಣನೆ, ವಿಷ್ಣುವೆ, ಹೃಷೀಕೇಶನೆ, ವಾಸುದೇವನೆ, ನಿನಗೆ ನಮಸ್ಕಾರ.

**ಜಯದ್ರಥ ಉವಾಚ:**
**ನಮಃ ಕೃಷ್ಣಾಯ ದೇವಾಯ ಬ್ರಹ್ಮಣೇಽನಂತಮೂರ್ತಯೇ ।**
**ಯೋಗೇಶ್ವರಾಯ ಯೋಗಾಯ ತ್ವಾಮಹಂ ಶರಣಂ ಗತಃ ॥ ೨೦ ॥**

೨೦. ಜಯದ್ರಥನಿಂತೆಂದನು : ಅನಂತರೂಪನೂ ಬ್ರಹ್ಮನೂ ದೇವನೂ ಯೋಗೇಶ್ವರನೂ ಯೋಗರೂಪನೂ ಆದ ಕೃಷ್ಣನಿಗೆ ನಮಸ್ಕಾರ. (ಎಲೈ ದೇವನೆ,) ನಿನ್ನನ್ನು ನಾನು ಶರಣುಹೊಕ್ಕಿರುವೆನು.

**ವಿಕರ್ಣ ಉವಾಚ:**
**ಕೃಷ್ಣಾಯ ವಾಸುದೇವಾಯ ದೇವಕೀನಂದನಾಯ ಚ ।**
**ನಂದಗೋಪಕುಮಾರಾಯ ಗೋವಿಂದಾಯ ನಮೋ ನಮಃ ॥ ೨೦ ॥**

೨೦. ವಿಕರ್ಣನಿಂತೆಂದನು : ವಸುದೇವನ ಪುತ್ರನೂ ದೇವಕೀನಂದನನೂ ನಂದಗೋಪನ (ಸಾಕು) ಮಗನೂ ಗೋವಿಂದನೂ ಆದ ಕೃಷ್ಣನಿಗೆ ನಮಸ್ಕಾರ.

**ಸೋಮದತ್ತ ಉವಾಚ:**
**ನಮಃ ಪರಮಕಲ್ಯಾಣ ನಮಸ್ತೇ ವಿಶ್ವಭಾವನ ।**
**ವಾಸುದೇವಾಯ ಶಾಂತಾಯ ಯದೂನಾಂ ಪತಯೇ ನಮಃ ॥ ೨೧ ॥**

೨೧. ಸೋಮದತ್ತನಿಂತೆಂದನು : ಪರಮಮಂಗಳಸ್ವರೂಪನೆ, ವಿಶ್ವವನ್ನು ಉಂಟುಮಾಡುವವನೆ, ನಿನಗೆ ನಮಸ್ಕಾರ. ವಾಸುದೇವನೂ ಶಾಂತನೂ ಆದ ಯದುಪತಿಗೆ ನಮಸ್ಕಾರವು.

**ವಿರಾಟ ಉವಾಚ:**
**ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।**
**ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥ ೨೨ ॥**

೨೨. ವೇದಗಳ ಒಡೆಯನೂ ಗೋಬ್ರಾಹ್ಮಣರಿಗೆ ಹಿತವುಂಟು ಮಾಡುವವನೂ ಜಗತ್ತಿಗೇ ಒಳ್ಳೆಯದನ್ನು ಮಾಡುವವನೂ ಆದ ಗೋವಿಂದನಾದ ಕೃಷ್ಣನಿಗೆ ನಮಸ್ಕಾರ.

ಶಲ್ಯ ಉವಾಚ:

ಅತಸೀಪುಷ್ಪಸಂಕಾಶಂ ಪೀತವಾಸಸಮಚ್ಯುತಮ್ ।
ಯೇ ನಮಸ್ಯಂತಿ ಗೋವಿಂದಂ ನ ತೇಷಾಂ ವಿದ್ಯತೇ ಭಯಮ್ ॥ ೩೪ ॥

೩೪. ಶಲ್ಯನಿಂತೆಂದನು : ಅಗಸೆಹೂವಿನಂತೆ ಕಾಂತಿಯುಳ್ಳವನೂ ಪೀತಾಂಬರಧಾರಿಯೂ ಅಚ್ಯುತನೂ ಆಗಿರುವ ಗೋವಿಂದನನ್ನು ಯಾರು ನಮಸ್ಕರಿಸುವರೋ ಅವರಿಗೆ ಭಯವಿರುವದಿಲ್ಲ.

ಬಲಭದ್ರ ಉವಾಚ:

ಕೃಷ್ಣ ಕೃಷ್ಣ ಕೃಪಾಲೋ ತ್ವಮಗತೀನಾಂ ಗತಿರ್ಭವ ।
ಸಂಸಾರಾರ್ಣವಮಗ್ನಾನಾಂ ಪ್ರಸೀದ ಪುರುಷೋತ್ತಮ ॥ ೩೫ ॥

೩೫. ಬಲಭದ್ರತೆಂದನು : ಎಲೈ ಕೃಷ್ಣನೆ, ಕೃಪಾಳುವೆ, ನೀನು ದಿಕ್ಕಿಲ್ಲದವರಿಗೆ ದಿಕ್ಕಾಗಿರುವೆ. ಸಂಸಾರಸಾಗರದಲ್ಲಿ ಮುಳುಗಿರುವವರಿಗೆ ಎಲೈ ಪುರುಷೋತ್ತಮನೆ, ಪ್ರಸನ್ನನಾಗು.

ಶ್ರೀ ಕೃಷ್ಣ ಉವಾಚ:

ಕೃಷ್ಣ ಕೃಷ್ಣೇತಿ ಕೃಷ್ಣೇತಿ ಯೋ ಮಾಂ ಸ್ಮರತಿ ನಿತ್ಯಶಃ ।
ಜಲಂ ಭಿತ್ವಾ ಯಥಾ ಪದ್ಮ ನರಕಾದುದ್ಧರಾಮ್ಯಹಮ್ ॥ ೩೬ ॥

ಸತ್ಯಂ ಬ್ರವೀಮಿ ಮನುಜಾಃ ಸ್ವಯಮೂರ್ಧ್ವಬಾಹು -
ರ್ಯೋ ಮಾಂ ಮುಕುಂದ ನರಸಿಂಹ ಜನಾರ್ದನೇತಿ ।
ಜೀವೋ ಜಪತ್ಯನುದಿನಂ ಮರಣೇ ರಣೇ ವಾ
ಪಾಷಾಣಕಾಷ್ಠಸದೃಶಾಯ ದದಾಮ್ಯಭೀಷ್ಟಮ್ ॥ ೩೭ ॥

೩೬-೩೭. ಶ್ರೀಕೃಷ್ಣನಿಂತೆಂದನು : ಯಾವನು ಕೃಷ್ಣ, ಕೃಷ್ಣ - ಎಂದು ಯಾವಾಗಲೂ ನನ್ನನ್ನು ಸ್ಮರಿಸುವನೋ ಅಂಥವನನ್ನು - ತಾವರೆಯು ನೀರಿನಿಂದ ಮೇಲಕ್ಕೇಳುವಂತೆ - ನರಕದಿಂದ ಮೇಲಕ್ಕೆತ್ತುವೆನು. ಎಲೈ ಮನುಜರೆ, ಕೈಯನ್ನು ಮೇಲಕ್ಕೆತ್ತಿ ನಿಜವನ್ನು ಹೇಳುವೆನು. ಕೇಳಿರಿ : ಯಾವ ಜೀವನು ದಿನವೂ ನನ್ನನ್ನು ಮುಕುಂದ, ನರಸಿಂಹ, ಜನಾರ್ದನ - ಎಂದು ಯುದ್ಧದಲ್ಲಾಗಲಿ ಮರಣದಲ್ಲಾಗಲಿ, ಜಪಿಸುತ್ತಿರುವನೋ, ಕಲ್ಲು, ಮರಗಳಿಗೆ ಸಮಾನನಾದ ಅಂಥವನಿಗೂ (ಅಜ್ಞಾನಿಯಾಗಿದ್ದರೂ) ಇಷ್ಟಾರ್ಥಸಿದ್ಧಿಯನ್ನು ಕೊಡುವೆನು.

ಸೂತ ಉವಾಚ:

ತತ್ರೈವ ಗಂಗಾ ಯಮುನಾ ಚ ವೇಣೀ
ಗೋದಾವರೀ ಸಿಂಧು ಸರಸ್ವತೀ ಚ ।
ಸರ್ವಾಣಿ ತೀರ್ಥಾನಿ ವಸಂತಿ ತತ್ರ
ಯತ್ರಾಚ್ಯುತೋದಾರಕಥಾಪ್ರಸಂಗಃ ॥ ೩೮ ॥

೩೮. ಸೂತನಿಂತೆಂದನು : ಎಲ್ಲಿ ಅಚ್ಯುತನ ಉದಾರವಾದ ಲೀಲಾಕಥನವು ನಡೆಯುತ್ತಿರುವದೋ ಅಲ್ಲಿಯೇ ಗಂಗೆ, ಯಮುನೆ, ಕೃಷ್ಣವೇಣಿ, ಗೋದಾವರೀ, ಸಿಂಧು, ಸರಸ್ವತೀ - ಮುಂತಾದ ಎಲ್ಲಾ ತೀರ್ಥಗಳೂ ನೆಲಸಿರುವವು.

ಯಮ ಉವಾಚ :

ನರಕೇ ಪಚ್ಯಮಾನಂ ತಂ ಯಮೇನ ಪರಿಭಾಷಿತಮ್ ।
ಕಿಂ ತ್ವಯಾ ನಾರ್ಚಿತೋ ದೇವಃ ಕೇಶವಃ ಕ್ಲೇಶನಾಶನಃ ॥ ೩೯ ॥

೩೯. ಯಮನಿಂತೆಂದನು : ನರಕದಲ್ಲಿ ಸಂಕಟಪಡುತ್ತಿರುವವನನ್ನು ಕುರಿತು ಯಮನು ಹೀಗೆ ಕೇಳಿದನು. ಕ್ಲೇಶಗಳನ್ನು ಪರಿಹರಿಸುವ ಕೇಶವನೆಂಬ ದೇವನನ್ನು ನೀನು ಪೂಜಿಸಲಿಲ್ಲವೇನು ?

ನಾರದ ಉವಾಚ :

ಜನ್ಮಾಂತರಸಹಸ್ರೇಣ ತಪೋಧ್ಯಾನಸಮಾದಿಭಿಃ ।
ನರಾಣಾಂ ಕ್ಷೀಣಪಾಪಾನಾಂ ಕೃಷ್ಣೇ ಭಕ್ತಿಃ ಪ್ರಜಾಯತೇ ॥ ೪೦ ॥

೪೦. ನಾರದನಿಂತೆಂದನು : ಸಹಸ್ರಾರುಜನ್ಮಗಳಲ್ಲಿ ಮಾಡಿದ ತಪಸ್ಸು, ಧ್ಯಾನ, ಮನೋಲಯ - ಮುಂತಾದ ಸಾಧನಗಳಿಂದ ಪಾಪಗಳು ಕ್ಷಯವಾಗಿರುವ ಮನುಷ್ಯರಿಗೆ ಕೃಷ್ಣನಲ್ಲಿ ಭಕ್ತಿಯುಂಟಾಗುವದು.

ಪ್ರಹ್ಲಾದ ಉವಾಚ :

ನಾಥ ಯೋನಿ ಸಹಸ್ರೇಷು ಯೇಷು ಯೇಷು ವ್ರಜಾಮ್ಯಹಮ್ ।
ತೇಷು ತೇಷ್ವಚಲಾ ಭಕ್ತಿರಚ್ಯುತಾಽಸ್ತು ಸದಾ ತ್ವಯಿ ॥ ೪೧ ॥
ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।
ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥ ೪೨ ॥

೪೧-೪೨. ಪ್ರಹ್ಲಾದನಿಂತೆಂದನು : ಸ್ವಾಮಿಯೆ, ಯಾವಯಾವ ಸಾವಿರಾರು ಜನ್ಮಗಳಲ್ಲಿ ನಾನು ಹೋಗುವೆನೋ ಅವುಗಳಲ್ಲೆಲ್ಲ ನನಗೆ ಅಚಲವಾದ ನಿನ್ನ ವಿಷಯಕವಾದ ಭಕ್ತಿಯೇ ಇದ್ದುಕೊಂಡಿರಲಿ! ಅವಿವೇಕಿಯಾದ (ವಿಷಯಾಸಕ್ತನಿಗೆ) ವಿಷಯಗಳಲ್ಲಿ ಹೇಗೆ ಅಳ್ಳಾಡದೆ ಇರುವ ಪ್ರೀತಿಯಿರುವದೋ ಆ ಭಕ್ತಿಯು ನಿನ್ನನ್ನು ನೆನೆಯುತ್ತಿರುವ ನನಗೆ ಯಾವಾಗಲೂ ಹೃದಯದಿಂದ ಬಿಟ್ಟುಹೋಗದೆ ಇರಲಿ!

ವಿಶ್ವಾಮಿತ್ರ ಉವಾಚ :

ಕಿಂ ತಸ್ಯ ದಾನೈಃ ಕಿಂ ತೀರ್ಥೈಃ ಕಿಂ ತಪೋಭಿಃ ಕಿಮಧ್ವರೈಃ ।
ಯೋ ನಿತ್ಯಂ ಧ್ಯಾಯತೇ ದೇವಂ ನರಾಣಾಂ ಮನಸಿ ಸ್ಥಿತಮ್ ॥ ೪೩ ॥

**೪೩.** ವಿಶ್ವಾಮಿತ್ರನಿಂತೆಂದನು : ಯಾವನು ಯಾವಾಗಲೂ ಮಾನವನ ಹೃದಯದಲ್ಲಿ ನೆಲಸಿರುವ ದೇವನನ್ನು ಚಿಂತಿಸುತ್ತಿರುವನೋ ಅವನಿಗೆ ದಾನದಿಂದಲಾಗಲಿ, ತೀರ್ಥಸೇವೆಯಿಂದಾಗಲಿ, ತಪಸ್ಸುಗಳಿಂದಲಾಗಲಿ, ಯಜ್ಞಗಳಿಂದಲಾಗಲಿ ಆಗಬೇಕಾದದ್ದೇನಿದೆ ?

ಜಮದಗ್ನಿರುವಾಚ:

**ನಿತ್ಯೋತ್ಸವಸ್ತದಾ ತೇಷಾಂ ನಿತ್ಯಶ್ರೀರ್ನಿತ್ಯಮಂಗಲಮ್ ।**
**ಯೇಷಾಂ ಹೃದಿಸ್ಥೋ ಭಗವಾನ್ ಮಂಗಲಾಯತನೋ ಹರಿಃ ॥ ೪೪ ॥**

**೪೪.** ಜಮದಗ್ನಿಯಿಂತೆಂದನು ಯಾರ ಹೃದಯದಲ್ಲಿ ಮಂಗಳಗಳಿಗೆ ಆಧಾರನಾದ ಭಗವಂತನಾದ ಶ್ರೀಹರಿಯು ಇದ್ದುಕೊಂಡಿರುವನೋ ಅವರಿಗೆ ನಿತ್ಯೋತ್ಸವವೂ ನಿತ್ಯಮಂಗಳವೂ ನಿತ್ಯವಾದ ಸಂಪತ್ತೂ ಒದಗುವವು.

ಭರದ್ವಾಜ ಉವಾಚ:

**ಲಾಭಸ್ತೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಜಯಃ ।**
**ಯೇಷಾಮಿಂದೀವರಶ್ಯಾಮೋ ಹೃದಯಸ್ಥೋ ಜನಾರ್ದನಃ ॥ ೪೫ ॥**

**೪೫.** ಭರದ್ವಾಜನಿಂತೆಂದನು : ಯಾರಿಗೆ ನೈದಿಲೆಯಂತೆ ನೀಲವರ್ಣನಾದ ಜನಾರ್ದನನು ಹೃದಯದಲ್ಲಿಯೇ ನೆಲಸಿರುವನೋ ಅವರಿಗೇ ಲಾಭವೂ ಜಯವೂ ದೊರಕುವವು. ಇನ್ನು ಅಂಥವರಿಗೆ ಪರಾಜಯವೆಂಬುದೆಲ್ಲಿ ಬಂತು ?

ಗೌತಮ ಉವಾಚ:

**ಗೋಕೋಟಿದಾನಂ ಗ್ರಹಣೇಷು ಕಾಶೀ -**
**ಪ್ರಯಾಗಗಂಗಾಽಯುತಕಲ್ಪವಾಸಃ ।**
**ಯಜ್ಞಾಯುತಂ ಮೇರುಸುವರ್ಣದಾನಂ**
**ಗೋವಿಂದನಾಮ್ನಾ ನ ಕದಾಪಿ ತುಲ್ಯಮ್ ॥ ೪೬ ॥**

**೪೬.** ಗೌತಮನಿಂತೆಂದನು : ಗ್ರಹಣಕಾಲದಲ್ಲಿ ಕೋಟಿ ಗೋದಾನಗಳನ್ನು ಮಾಡುವದು, ಕಾಶಿ, ಪ್ರಯಾಗ, ಗಂಗಾತೀರಗಳಲ್ಲಿ ಹತ್ತುಸಾವಿರ ಕಲ್ಪಗಳವರೆಗೂ ವಾಸಮಾಡುವದು. ಹತ್ತುಸಾವಿರ ಯಜ್ಞಗಳನ್ನು ಮಾಡುವದು, ಮೇರುಪರ್ವತದಷ್ಟು ಚಿನ್ನವನ್ನು ದಾನಮಾಡುವದೇ - ಮುಂತಾದ ಯಾವ ಪುಣ್ಯಕರ್ಮಗಳೂ ಗೋವಿಂದನ ನಾಮಕ್ಕೆ ಎಂದಿಗೂ ಸರಿಸಾಟಿಯಾಗಲಾರವು.

ಅತ್ರಿರುವಾಚ:

**ಗೋವಿಂದೇತಿ ಸದಾ ಸ್ನಾನಂ ಗೋವಿಂದೇತಿ ಸದಾ ಜಪಃ ।**
**ಗೋವಿಂದೇತಿ ಸದಾ ಧ್ಯಾನಂ ಸದಾ ಗೋವಿಂದಕೀರ್ತನಮ್ ॥ ೪೭ ॥**

೪೭. ಅತ್ರಿಯಿಂತೆಂದನು : ಗೋವಿಂದನೆಂದು ಉಚ್ಚರಿಸುತ್ತಲೇ ಸ್ನಾನ ಮಾಡುವಿಕೆ, ಗೋವಿಂದನೆಂದೇ ನಾಮಜಪವು. ಗೋವಿಂದನೆಂದೇ ಧ್ಯಾನವು; ಹೀಗೆ ಯಾವಾಗಲೂ ಗೋವಿಂದನ ಕೀರ್ತನೆಯೇ (ಸಜ್ಜನರ ಜೀವನವು).

**ಅಕ್ಷರಂ ಹಿ ಪರಂ ಬ್ರಹ್ಮ ಗೋವಿಂದೇತ್ಯಕ್ಷರತ್ರಯಮ್ ।**
**ತಸ್ಮಾದುಚ್ಚರಿತಂ ಯೇನ ಬ್ರಹ್ಮಭೂಯಾಯ ಕಲ್ಪತೇ ॥ ೪೮ ॥**

**೪೮.** ಅಕ್ಷರವೆಂಬುದೇ ಪರಬ್ರಹ್ಮವು. ಗೋವಿಂದನೆಂಬುವದು ಮೂರು ಅಕ್ಷರದ (ಬ್ರಹ್ಮವು). ಆದ್ದರಿಂದ (ಗೋವಿಂದನಾಮವು) ಯಾವನಿಂದ ಹೇಳಲ್ಪಡುವದೋ ಅವನು ಮೋಕ್ಷಕ್ಕೆ ತಕ್ಕವನಾಗುವನು.

**ಶ್ರೀ ಶುಕ ಉವಾಚ:**
**ಅಚ್ಯುತಃ ಕಲ್ಪವೃಕ್ಷೋಽಸೌ ಅನಂತಃ ಕಾಮಧೇನವಃ ।**
**ಚಿಂತಾಮಣಿಶ್ಚ ಗೋವಿಂದೋ ಹರಿನಾಮ ವಿಚಿಂತಯೇತ್ ॥ ೪೯ ॥**

**೪೯.** ಶ್ರೀ ಶುಕನಿಂತೆಂದನು : ಅಚ್ಯುತನೆಂಬ ಹೆಸರೇ ಕಲ್ಪವೃಕ್ಷವು. ಅನಂತವೆಂಬ ನಾಮವೇ ಕಾಮಧೇನುಗಳು. ಗೋವಿಂದನಾಮವೇ ಚಿಂತಾಮಣಿಯು. ಆದ್ದರಿಂದ ಶ್ರೀಹರಿಯ ನಾಮಗಳನ್ನು ಚಿಂತಿಸಬೇಕು.

**ಹರಿರುವಾಚ:**
**ಜಯತಿ ಜಯತಿ ದೇವೋ ದೇವಕೀನಂದನೋಽಯಂ**
**ಜಯತಿ ಜಯತಿ ಕೃಷ್ಣೋ ವೃಷ್ಣಿವಂಶಪ್ರದೀಪಃ ।**
**ಜಯತಿ ಜಯತಿ ಮೇಘಶ್ಯಾಮಲಃ ಕೋಮಲಾಂಗಃ**
**ಜಯತಿ ಜಯತಿ ಪೃಥ್ವೀಭಾರನಾಶೋ ಮುಕುಂದಃ ॥ ೫೦ ॥**

**೫೦.** ಹರಿಯಿಂತೆಂದನು : ದೇವಕೀಪುತ್ರನಾದ ಈ ಕೃಷ್ಣನು ಜಯಿಸುತ್ತಿರುವನು. ವೃಷ್ಣಿಕುಲಕ್ಕೆ ದೊಡ್ಡ ದೀಪದಂತಿರುವವನಾದ, ನೀಲಮೇಘದಂತೆ ಕಪ್ಪಾಗಿರುವ ಮೃದುವಾದ ಶರೀರವುಳ್ಳ, ಭೂಭಾರವನ್ನು ಕಳೆಯುವವನಾದ ಮುಕ್ತಿಪ್ರದನಾದ ಕೃಷ್ಣನು ಜಯವನ್ನು ಹೊಂದುತ್ತಿರುವನು.

**ಪಿಪ್ಪಲಾಯನ ಉವಾಚ:**
**ಶ್ರೀಮನ್ನೃಸಿಂಹವಿಭವೇ ಗರುಡಧ್ವಜಾಯ**
**ತಾಪತ್ರಯೋಪಶಮನಾಯ ಭವೌಷಧಾಯ ।**
**ಕೃಷ್ಣಾಯ ವೃಶ್ಚಿಕಜಲಾಗ್ನಿಭುಜಂಗರೋಗ-**
**ಕ್ಲೇಶವ್ಯಯಾಯ ಹರಯೇ ಗುರವೇ ನಮಸ್ತೇ ॥ ೫೧ ॥**

೫೧. ಪಿಪ್ಪಲಾಯನನಿಂತೆಂದನು : ಶ್ರೀಯುಕ್ತವಾದ ನೃಸಿಂಹಾವತಾರದ ಮಹಿಮೆಯುಳ್ಳವನೂ ಗರುಡನನ್ನು ಧ್ವಜದಲ್ಲಿ ಧರಿಸಿರುವವನೂ ತಾಪತ್ರಯಗಳನ್ನು

ಶಾಂತಗೊಳಿಸುವವನೂ ಸಂಸಾರವೆಂಬ (ರೋಗಕ್ಕೆ) ಔಷಧದಂತಿರುವವನೂ ಕೃಷ್ಣನೂ ಆದ, (ಮತ್ತು) ಚೇಳು, ನೀರು, ಬೆಂಕಿ, ಹಾವು, ಕಾಯಿಲೆ - ಕಷ್ಟಗಳನ್ನು ಪರಿಹರಿಸುವವನೂ ಆಗಿರುವ ಗುರುವಾದ ಶ್ರೀಹರಿಗೆ ನಮಸ್ಕಾರವು.

ಆವಿಹೋರ್ತ್ರ ಉವಾಚ:

ಕೃಷ್ಣ ತ್ವದೀಯಪದಪಂಕಜಪಂಜರಾಂತೇ
ಅದ್ಯೈವ ಮೇ ವಿಶತು ಮಾನಸರಾಜಹಂಸಃ ।
ಪ್ರಾಣಪ್ರಯಾಣಸಮಯೇ ಕಫವಾತಪಿತ್ತೈಃ
ಕಂಠಾವರೋಧನವಿಧೌ ಸ್ಮರಣಂ ಕುತಸ್ತೇ ॥ ೫೨ ॥

೫೨. ಆವಿಹೋರ್ತ್ರನಿಂತೆಂದನು ಎಲೈ ಕೃಷ್ಣನೆ, ನನ್ನ ಮನಸ್ಸೆಂಬ ರಾಜಹಂಸವು ಈಗಲೆ ನಿನ್ನ ಪಾದಪಂಕಜಗಳೆಂಬ ಪಂಜರದೊಳಕ್ಕೆ ಪ್ರವೇಶಿಸಿ ಬಿಡಲಿ. (ಏಕೆಂದರೆ) ಪ್ರಾಣವು ಹೋಗುವ ಸಮಯದಲ್ಲಿ ಕಫ, ವಾತ, ಪಿತ್ತಗಳಿಂದ ಗಂಟಲುಕಟ್ಟಿರುವ ಸ್ಥಿತಿಯಲ್ಲಿ ನಿನ್ನ ಸ್ಮರಣೆಯಾದರೂ ಎಲ್ಲಿಂದ ಬರಬೇಕು ?

ವಿದುರ ಉವಾಚ:[1]

ಹರೇರ್ನಾಮೈವ ನಾಮೈವ ನಾಮೈವ ಮಮ ಜೀವನಮ್ ।
ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ॥ ೫೩ ॥

೫೩. ವಿದುರನಿಂತೆಂದನು : ಹರಿನಾಮವೊಂದೇ, ನಾಮವೊಂದೇ, ನಾಮವೊಂದೇ ನನ್ನ ಜೀವನವು. ಕಲಿಯುಗದಲ್ಲಿ ಇದನ್ನು ಬಿಟ್ಟು ಬೇರೊಂದು ಗತಿಯು ಇಲ್ಲವೇ ಇಲ್ಲ. ಇಲ್ಲವೇ ಇಲ್ಲ. ಇಲ್ಲವೇ ಇಲ್ಲ.

ವಸಿಷ್ಠ ಉವಾಚ:

ಕೃಷ್ಣೇತಿ ಮಂಗಳಂ ನಾಮ ಯಸ್ಯ ವಾಚಿ ಪ್ರವರ್ತತೇ ।
ಭಸ್ಮೀಭವನ್ತಿ ತಸ್ಯಾಶು ಮಹಾಪಾತಕಕೋಟಯಃ ॥ ೫೪

೫೪. ವಸಿಷ್ಠನಿಂತೆಂದನು : ಕೃಷ್ಣ - ಎಂಬ ಮಂಗಳಕರವಾದ ಹೆಸರು ಯಾವನ ಮಾತಿನಲ್ಲಿ ಹೊರಡುವದೋ ಅವನ ಕೋಟಿಗಟ್ಟಲೆಯ ಮಹಾಪಾಪಗಳು ಕೂಡಲೆ ಸುಟ್ಟುಹೋಗುವವು.

ಅರುಂಧತ್ಯುವಾಚ:

ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಕ್ಲೇಶನಾಶಾಯ ಗೋವಿಂದಾಯ ನಮೋ ನಮಃ ॥ ೫೫ ॥

1. ೨೧ನೆಯ ಪದ್ಯವನ್ನು ನೋಡಿರಿ.

**೫೫**. ಅರುಂಧತಿಯಿಂತೆಂದಳು : ವಾಸುದೇವನೂ, ಶ್ರೀಹರಿಯೂ, ಪರಮಾತ್ಮನೂ, ನಮಸ್ಕರಿಸಿದವರ ಕಷ್ಟಗಳನ್ನು ಪರಿಹರಿಸುವವನೂ ಗೋವಿಂದನೂ ಆದ ಕೃಷ್ಣನಿಗೆ ನಮಸ್ಕಾರ.

**ಕಶ್ಯಪ ಉವಾಚ:**

**ಕೃಷ್ಣಾನುಸ್ಮರಣಾದೇವ ಪಾಪಸಂಘಾತಪಂಜರಃ ।**
**ಶತಧಾ ಭೇದಮಾಪ್ನೋತಿ ಗಿರಿರ್ವಜ್ರಹತೋ ಯಥಾ ॥ ೫೬ ॥**

**೫೬**. ಕಶ್ಯಪನಿಂತೆಂದನು : ಪಾಪಗಳ ಗುಂಪೆಂಬ ಪಂಜರವು ಕೃಷ್ಣನ ಅನುಸ್ಮರಣೆಯಿಂದಲೇ - ವಜ್ರಾಯುಧದಿಂದ ಹೊಡೆಯಲ್ಪಟ್ಟ ಬೆಟ್ಟದಂತೆ - ನೂರಾರು ಚೂರಾಗಿ ಒಡೆದುಹೋಗುವದು.

**ದುರ್ಯೋಧನ ಉವಾಚ:**

**ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ**
**ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ ।**
**ಕೇನಾಪಿ ದೇವೇನ ಹೃದಿ ಸ್ಥಿತೇನ**
**ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ॥ ೫೭ ॥**
**ಯತ್ರ ಸ್ವಗುಣದೋಷೇಣ ಕ್ಷಮ್ಯತಾಂ ಮಧುಸೂದನಃ ।**
**ಅಹಮೇವಮಹಂ ಹಂತುಂ ಮಮ ದೋಷೋ ನ ವಿದ್ಯತೇ ॥ ೫೮ ॥**

**೫೭-೫೮**. ದುರ್ಯೋಧನನಿಂತೆಂದನು : ಧರ್ಮವನ್ನು ಬಲ್ಲೆನು. ಆದರೆ ನನಗೆ ಅದರಲ್ಲಿ ಪ್ರವೃತ್ತಿಯಾಗುತ್ತಿಲ್ಲ. ಅಧರ್ಮವನ್ನೂ ಬಲ್ಲೆನು. ಆದರೆ ಅದರಿಂದ ಹಿಂತಿರುಗಲಾಗುತ್ತಿಲ್ಲ. ನನ್ನ ಹೃದಯದಲ್ಲಿದ್ದುಕೊಂಡು ಪ್ರೇರಿಸುತ್ತಿರುವ ಯಾವನೋ ಒಬ್ಬ ದೇವನಿಂದ ಹೇಗೆ ಅಪ್ಪಣೆಮಾಡಲ್ಪಡುವೆನೋ ಹಾಗೆ ಮಾಡುವೆನು. ಎಲ್ಲಿ ನಾನು ನನ್ನದೇ ಆದ ಗುಣದೋಷಗಳಿಂದ ನಾನೇ ನನ್ನನ್ನು ನಾಶಮಾಡಿಕೊಳ್ಳಲೆಳಸಿದರೆ (ಹೃದಯದಲ್ಲಿರುವ) ಮಧುಸೂದನನು ಕ್ಷಮಿಸಲಿ! ನನ್ನ ತಪ್ಪೇನೂ ಇಲ್ಲ. [1]

**ಭೃಗುರುವಾಚ :**

**ನಾಮ್ನೈವ ತವ ಗೋವಿಂದ ಕಲೌ ತ್ವತ್ತಃ ಶತಾಧಿಕಮ್ ।**
**ದದಾತ್ಯುಚ್ಚಾರಣಾನ್ಮುಕ್ತಿಂ ವಿನಾ ಹ್ಯಷ್ಟಾಂಗಯೋಗತಃ ॥ ೫೯ ॥**

**೫೯**. ಭೃಗುವಿಂತೆಂದನು : ಎಲೈ ಗೋವಿಂದನೆ, ಕಲಿಯುಗದಲ್ಲಿ ನಿನ್ನ ನಾಮವು ನೂರುಸಲಕ್ಕಿಂತ ಹೆಚ್ಚಾಗಿ ಕೀರ್ತನೆ ಮಾಡಲ್ಪಟ್ಟುದಾದರೆ ಅಷ್ಟಾಂಗ ಯೋಗವಿಲ್ಲದೆಯೇ ಅದು ಮುಕ್ತಿಯನ್ನು ಕೊಡುವದು.

[1] ಈ ಶ್ಲೋಕದ ಭಾವಾರ್ಥವು ಸರಿಯಾಗಿ ತಿಳಿಯಲಿಲ್ಲ. ಇದ್ದಂತೆ ಕನ್ನಡಿಸಿದೆ.

ಲೋಮಹರ್ಷಣ ಉವಾಚ:

ನಮಾಮಿ ನಾರಾಯಣಪಾದಪಂಕಜಂ
ಕರೋಮಿ ನಾರಾಯಣಪೂಜನಂ ಸದಾ ।
ವದಾಮಿ ನಾರಾಯಣನಾಮ ನಿರ್ಮಲಂ
ಸ್ಮರಾಮಿ ನಾರಾಯಣತತ್ತ್ವಮವ್ಯಯಮ್ ॥ ೬೦ ॥

೬೦. ಲೋಮಹರ್ಷಣನಿಂತೆಂದನು : ನಾರಾಯಣನ ಪಾದಕಮಲಗಳಿಗೆ ನಮಸ್ಕರಿಸುವೆನು. ನಾರಾಯಣನ ಪೂಜೆಯನ್ನು ಯಾವಾಗಲೂ ಮಾಡುವೆನು. ನಿರ್ಮಲವಾದ ನಾರಾಯಣನಾಮವನ್ನು ಪಠಿಸುವೆನು. ಅವ್ಯಯವಾದ ನಾರಾಯಣತತ್ತ್ವವನ್ನು ಚಿಂತಿಸುವೆನು.

ಶೌನಕ ಉವಾಚ :

ಸ್ಮೃತೇ ಸಕಲಕಲ್ಯಾಣಭಾಜನಂ ಯತ್ರ ಜಾಯತೇ ।
ಪುರುಷಂ ತಮಜಂ ನಿತ್ಯಂ ವ್ರಜಾಮಿ ಶರಣಂ ಹರಿಮ್ ॥ ೬೧ ॥

೬೧. ಶೌನಕನಿಂತೆಂದನು ಸ್ಮರಿಸಿದಮಾತ್ರದಿಂದಲೇ ಎಲ್ಲಾ ಮಂಗಳಗಳೂ ಎಲ್ಲಿ ಒದಗಿ ಬರುವವೋ ಅಂಥ ಅಜನೂ ನಿತ್ಯನೂ, ಪುರ(ಶರೀರ)ಗಳಲ್ಲೆಲ್ಲ ಇರುವವನೂ ಆದ ಶ್ರೀಹರಿಯನ್ನು ನಿತ್ಯವೂ ಶರಣುಹೊಂದುವೆನು.

ಗರ್ಗ ಉವಾಚ :

ನಾರಾಯಣೇತಿ ಮಂತ್ರೋಽಸ್ತಿ ವಾಗಸ್ತಿ ವಶವರ್ತಿನೀ ।
ತಥಾಪಿ ನರಕೇ ಘೋರೇ ಪತಂತೀತ್ಯೇತದದ್ಭುತಮ್ ॥ ೬೨ ॥

೬೨. ಗರ್ಗನಿಂತೆಂದನು ನಾರಾಯಣನೆಂಬ ಮಂತ್ರವಿದೆ. ಮಾತಾಡಲು ನಾಲಗೆಯೂ ಸ್ವಾಧೀನದಲ್ಲಿದೆ. ಹೀಗಿದ್ದರೂ ಭಯಂಕರವಾದ ನರಕದಲ್ಲಿ (ಮನುಷ್ಯರು) ಬೀಳುತ್ತಾರಷ್ಟೆ! ಇದೊಂದು ಆಶ್ಚರ್ಯವೇ ಸರಿ.

ದಾಲ್ಭ್ಯ ಉವಾಚ :

ಕಿಂ ತಸ್ಯ ಬಹುಭಿರ್ಮಂತ್ರೈರ್ಭಕ್ತಿರ್ಯಸ್ಯ ಜನಾರ್ದನೇ ।
ನಮೋ ನಾರಾಯಣಾಯೇತಿ ಮಂತ್ರಃ ಸರ್ವಾರ್ಥಸಾಧಕಃ ॥ ೬೩ ॥

೬೩. ದಾಲ್ಭ್ಯನಿಂತೆಂದನು : ಯಾವನಿಗೆ ಜನಾರ್ದನನಲ್ಲಿ ಭಕ್ತಿಯಿರುವದೋ ಅವನಿಗೆ ಬಹಳ ಮಂತ್ರಗಳಿಂದಾಗಬೇಕಾದದ್ದೇನು ? 'ನಮೋ ನಾರಾಯಣಾಯ' ಎಂಬ ಮಂತ್ರವು ಸರ್ವಾರ್ಥಸಾಧಕವಾಗಿದೆ.

ವೈಶಂಪಾಯನ ಉವಾಚ :

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿಃ ಧ್ರುವಾ ನೀತಿರ್ಮತಿರ್ಮಮ ॥ ೬೪ ॥

**೬೪.** ವೈಶಂಪಾಯನನಿಂತೆಂದನು : ಎಲ್ಲಿ ಯೋಗೇಶ್ವರನಾದ ಕೃಷ್ಣನೂ ಧನುರ್ಧಾರಿಯಾದ ಅರ್ಜುನನೂ ಇರುವರೋ ಅಲ್ಲಿ ಸಂಪತ್ತು, ವಿಜಯ, ಐಶ್ವರ್ಯ, ಶಾಶ್ವತವಾದ ನೀತಿ - ಇವುಗಳು ಇದ್ದುಕೊಂಡಿರುವವೆಂದು ನನ್ನ ಮತವು.

**ಆಂಗೀರಸ ಉವಾಚ :**

**ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ ।**
**ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ ॥ ೬೫ ॥**

**೬೫.** ಆಂಗೀರಸನಿಂತೆಂದನು : ಪಾಪಚಿತ್ತವುಳ್ಳವರಿಂದ ಸ್ಮರಿಸಲ್ಪಟ್ಟರೂ ಶ್ರೀ ಮಹಾವಿಷ್ಣುವು ಪಾಪಗಳನ್ನು ಪರಿಹರಿಸುವನು. ಇಷ್ಟವಿಲ್ಲದೆ (ತಿಳಿಯದೆ) ಮುಟ್ಟಿದರೂ ಬೆಂಕಿಯು ಸುಟ್ಟೇ ಸುಡುವದು.

**ಪರಾಶರ ಉವಾಚ :**

**ಸಕೃದುಚ್ಚರಿತಂ ಯೇನ ಹರಿರಿತ್ಯಕ್ಷರದ್ವಯಮ್ ।**
**ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ॥ ೬೬ ॥**

**೬೬.** ಪರಾಶರನಿಂತೆಂದನು : ಯಾವನು ಒಮ್ಮೆ 'ಹರಿ' ಎಂಬೆರಡು ಅಕ್ಷರಗಳನ್ನು ಉಚ್ಚರಿಸುವನೋ ಅವನು ಮೋಕ್ಷಕ್ಕೆ ಹೊರಡಲು ಸೊಂಟಕಟ್ಟಿದವನೇ ಆಗುವನು.

**ಪೌಲಸ್ತ್ಯ ಉವಾಚ :**

**ಹೇ ಜಿಹ್ವೇ ರಸಸಾರಜ್ಞೇ ಸರ್ವದಾ ಮಧುರಪ್ರಿಯೇ ।**
**ನಾರಾಯಣಾಖ್ಯಪೀಯೂಷಂ ಪಿಬ ನಿತ್ಯಂ ಸುಖಾವಹಮ್ ॥ ೬೭ ॥**

**೬೭.** ಪೌಲಸ್ತ್ಯನಿಂತೆಂದನು : ಎಲ್ಲ ರುಚಿಗಳ ಸಾರವನ್ನು ಬಲ್ಲ ಯಾವಾಗಲೂ ಸಿಹಿಯನ್ನು ಬಯಸುವ ನಾಲಗೆಯೆ, (ನೀನು) ನಿತ್ಯವೂ ಸುಖಪ್ರದವಾದ ನಾರಾಯಣನೆಂಬ ಅಮೃತವನ್ನು ಕುಡಿಯುವಳಾಗು.

**ವ್ಯಾಸ ಉವಾಚ :**

**ಸತ್ಯಂ ಸತ್ಯಂ ಪುನಃ ಸತ್ಯಂ ಭುಜಮುತ್ಥಾಪ್ಯ ಚೋಚ್ಯತೇ ।**
**ನ ವೇದಾಚ್ಚ ಪರಂ ಶಾಸ್ತ್ರಂ ನ ದೇವಃ ಕೇಶವಾತ್ಪರಃ ॥ ೬೮ ॥**

**೬೮.** ವ್ಯಾಸನಿಂತೆಂದನು : ನಿಜ; ನಿಜ; ಖಂಡಿತವಾಗಿಯೂ ನಿಜ; ಕೈಯೆತ್ತಿ ಹೇಳುವೆನು. ವೇದಕ್ಕಿಂತ ಹೆಚ್ಚಿನ ಶಾಸ್ತ್ರವಿಲ್ಲ. ಕೇಶವನಿಗಿಂತ ಹೆಚ್ಚಿನ ದೇವರಿಲ್ಲ.

**ಧನ್ವಂತರಿರುವಾಚ :**

**ಅಚ್ಯುತಾನಂತಗೋವಿಂದನಾಮೋಚ್ಚಾರಣಭೇಷಜಾತ್ ।**
**ನಶ್ಯಂತಿ ಸಕಲಾ ರೋಗಾಃ ಸತ್ಯಂ ಸತ್ಯಂ ವದಾಮ್ಯಹಮ್ ॥ ೬೯ ॥**

೬೯. ಧನ್ವಂತರಿಯಿಂತೆಂದನು : ಅಚ್ಯುತ, ಅನಂತ, ಗೋವಿಂದ - ಎಂಬ ನಾಮಗಳ ಉಚ್ಚಾರಣೆಯೆಂಬ ಚಿಕಿತ್ಸೆಯಿಂದ ಎಲ್ಲಾ ರೋಗಗಳೂ ನಾಶವಾಗುವವು. ಇದು ಸತ್ಯ; ಇದು ಸತ್ಯವೆಂದು ನಾನು ಹೇಳುವೆನು.

**ಮಾರ್ಕಂಡೇಯ ಉವಾಚ :**

**ಸಾ ಹಾನಿಸ್ತನ್ಮಹಚ್ಛಿದ್ರಂ ಸಾ ಚಾಂಧಜಡಮೂಕತಾ ।**
**ಯನ್ಮುಹೂರ್ತಂ ಕ್ಷಣಂ ವಾಪಿ ವಾಸುದೇವಂ ನ ಚಿಂತಯೇತ್ ॥ ೭೦ ॥**

೭೦. ಮಾರ್ಕಂಡೇಯನಿಂತೆಂದನು : ಯಾವ ಘಳಿಗೆ ಅಥವಾ ಕ್ಷಣವಾಗಲಿ ವಾಸುದೇವನನ್ನು (ಮನಸ್ಸಿನಲ್ಲಿ) ಚಿಂತಿಸುವದಿಲ್ಲವೋ ಅದೇ ಹಾನಿಯು. ಅದೇ ದೊಡ್ಡ ಕೊರತೆಯು. ಅದೇ ಕುರುಡು. ಅದೇ ಮೂಕತನ.

**ಅಗಸ್ತ್ಯ ಉವಾಚ :**

**ನಿಮಿಷಂ ನಿಮಿಷಾರ್ಧಂ ವಾ ಪ್ರಾಣಿನಾಂ ವಿಷ್ಣುಚಿಂತನಮ್**
**ಕ್ರತುಕೋಟಿಸಹಸ್ರಾಣಾಂ ಧ್ಯಾನಮೇಕಂ ವಿಶಿಷ್ಯತೇ ॥ ೭೧ ॥**

೭೧. ಅಗಸ್ತ್ಯನಿಂತೆಂದನು : ಒಂದು ನಿಮಿಷ ಅಥವಾ ಅರ್ಧನಿಮಿಷವೇ ಆಗಲಿ, ಪ್ರಾಣಿಗಳಿಗೆ ವಿಷ್ಣುವಿನ ಚಿಂತನೆಯು ಲಭಿಸಿದಲ್ಲಿ ಅದು ಸಹಸ್ರಕೋಟಿ ಯಜ್ಞಗಳಿಗೂ ಮಿಗಿಲಾದುದು. ಆದ್ದರಿಂದ ಧ್ಯಾನ (ಚಿಂತನೆ)ವೊಂದೇ ಹೆಚ್ಚಿನದಾಗಿದೆ.

**ಮನಸಾ ಕರ್ಮಣಾ ವಾಚಾ ಯೇ ಸ್ಮರಂತಿ ಜನಾರ್ದನಮ್ ।**
**ತತ್ರ ತತ್ರ ಕುರುಕ್ಷೇತ್ರಂ ಪ್ರಯಾಗೋ ನೈಮಿಷಂ ವನಮ್ ॥ ೭೨ ॥**

೭೨. ಮನಸ್ಸಿನಿಂದಾಗಲಿ, ಮಾತಿನಿಂದಾಗಲಿ, ಕರ್ಮದಿಂದಾಗಲಿ ಯಾರು ಜನಾರ್ದನನನ್ನು ನೆನೆಸಿಕೊಳ್ಳುವರೋ ಅಲ್ಲಿಯೇ ಕುರುಕ್ಷೇತ್ರವು ಪ್ರಯಾಗವು. ನೈಮಿಷಾರಣ್ಯವೂ ಅಲ್ಲಿಯೇ (ಇರುವದು).

**ಶ್ರೀ ಶುಕ ಉವಾಚ :**

**ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯೈವಂ ಪುನಃ ಪುನಃ ।**
**ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಸ್ಸದಾ ॥ ೭೩ ॥**

೭೩. ಶ್ರೀಶುಕನಿಂತೆಂದನು : ಎಲ್ಲಾ ಶಾಸ್ತ್ರಗಳನ್ನೂ ವಿಚಾರಮಾಡಿ ಮತ್ತೆ ಮತ್ತೆ ವಿಮರ್ಶೆಮಾಡಿದ ಮೇಲೆ - ನಾರಾಯಣನೇ ಯಾವಾಗಲೂ ಧ್ಯಾನಕ್ಕೆ ತಕ್ಕವನೆಂಬುದೊಂದೇ ನಿಶ್ಚಯವಾಗಿ ತಿಳಿದುಬಂದಿತು.

**ಶ್ರೀ ಮಹಾದೇವ ಉವಾಚ :**

**ಶರೀರಂ ಚ ನವಚ್ಛಿದ್ರಂ ವ್ಯಾಧಿಗ್ರಸ್ತಂ ಕಲೇವರಮ್ ।**
**ಔಷಧಂ ಜಾಹ್ನವೀತೋಯಂ ವೈದ್ಯೋ ನಾರಾಯಣೋ ಹರಿಃ ॥ ೭೪ ॥**

೭೪. ಶ್ರೀಮಹಾದೇವನಿಂತೆಂದನು : ಶರೀರವೆಂಬುದು ಒಂಭತ್ತು ತೂತುಗಳು ಉಳ್ಳದ್ದು. ಮತ್ತು ಆ ದೇಹವು ರೋಗಗಳಿಂದ ವ್ಯಾಪ್ತವಾಗಿರುವದು. ಇದಕ್ಕೆ ಗಂಗಾಜಲವೇ ಔಷಧವು. ಶ್ರೀಮನ್ನಾರಾಯಣನೇ ವೈದ್ಯನು.

ಶೌನಕ ಉವಾಚ :

ಭೋಜನಾಚ್ಛಾದನೇ ಚಿಂತಾಂ ವೃಥಾ ಕುರ್ವನ್ತಿ ಮಾನವಾಃ ।
ಯೋಽಸೌ ವಿಶ್ವಂಭರೋ ದೇವಃ ಸ ಭಕ್ತಾನ್ ಕಿಮುಪೇಕ್ಷತೇ ॥ ೭೫ ॥
ಏವಂ ಬ್ರಹ್ಮಾದಯೋ ದೇವಾ ಋಷಯಶ್ಚ ತಪೋಧನಾಃ ।
ಕೀರ್ತಯಂತಿ ಸುರಶ್ರೇಷ್ಠಂ ದೇವಂ ನಾರಾಯಣಂ ವಿಭುಮ್ ॥ ೭೬ ॥

೭೫-೭೬. ಶೌನಕನಿಂತೆಂದನು : ಮನುಷ್ಯರು ಅನ್ನ, ಬಟ್ಟೆಗಳ ವಿಷಯವಾಗಿ ವ್ಯರ್ಥವಾಗಿ ಚಿಂತಿಸುತ್ತಾರೆ. ಪ್ರಪಂಚವನ್ನೇ ಕಾಪಾಡುವ ಭಗವಂತನು ಭಕ್ತರನ್ನು ಕೈಬಿಡುತ್ತಾನೆಯೆ ? ಹೀಗೆಂದು ಬ್ರಹ್ಮಾದಿದೇವತೆಗಳೂ ತಪಸ್ಸೇ ಧನವಾಗಿ ಉಳ್ಳ ಋಷಿಗಳೂ ದೇವಶ್ರೇಷ್ಠನಾದ ವ್ಯಾಪಕನಾದ ನಾರಾಯಣನನ್ನು ಹೊಗಳುತ್ತಿರುವರು.

ಸನತ್ಕುಮಾರ ಉವಾಚ :

ಯಸ್ಯ ಹಸ್ತೇ ಗದಾ ಚಕ್ರಂ ಗರುಡೋ ಯಸ್ಯ ವಾಹನಮ್ ।
ಶಂಖಂ ಕರತಲೇ ಯಸ್ಯ ಸ ಮೇ ವಿಷ್ಣುಃ ಪ್ರಸೀದತು ॥ ೭೭ ॥

೭೭. ಸನತ್ಕುಮಾರನಿಂತೆಂದನು : ಯಾವನ ಕೈಯಲ್ಲಿ ಗದೆಯೂ ಚಕ್ರವೂ ಇರುವವೋ ಯಾವನಿಗೆ ಗರುಡನೇ ವಾಹನವೋ ಕರತಲದಲ್ಲಿ ಶಂಖವನ್ನು ಯಾವನು ಧರಿಸಿರುವನೋ ಆ ವಿಷ್ಣುವು ನನಗೆ ಪ್ರಸನ್ನನಾಗಲಿ.

ಇದಂ ಪವಿತ್ರಮಾಯುಷ್ಯಂ ಪುಣ್ಯಂ ಪಾಪಪ್ರಣಾಶನಮ್ ।
ಯಃ ಪಠೇತ್ ಪ್ರಾತರುತ್ಥಾಯ ವೈಷ್ಣವಂ ಸ್ತೋತ್ರಮುತ್ತಮಮ್ ॥
ಸರ್ವಪಾಪವಿನಿರ್ಮುಕ್ತೋ ವಿಷ್ಣುಸಾಯುಜ್ಯಮಾಪ್ನುಯಾತ್ ॥ ೭೮ ॥

೭೮. ಪವಿತ್ರವೂ ಆಯುಃಪ್ರದವೂ ಪಾಪಪರಿಹಾರಕವೂ ಆದ ಈ ಉತ್ತಮವಾದ ವಿಷ್ಣುವಿನ ಪುಣ್ಯಸ್ತೋತ್ರವನ್ನು ಪ್ರಾತಃಕಾಲದಲ್ಲಿ ಎದ್ದು ಯಾವನು ಪಠಿಸುವನೋ ಅವನು ಸಕಲಪಾಪಗಳಿಂದಲೂ ಬಿಡಲ್ಪಟ್ಟವನಾಗಿ ವಿಷ್ಣುಸಾಯುಜ್ಯವನ್ನು ಹೊಂದುವನು.

ಇತಿ ಶ್ರೀ ಪಾಂಡವಗೀತಾ

# ವಿನೋದಕಾಲಕ್ಷೇಪವನ್ನೂ ತತ್ತ್ವವಿಚಾರವನ್ನೂ ಏಕಕಾಲದಲ್ಲಿಒದಗಿಸುವ ಕಥೆಗಳು

೧. **ವೇದಾಂತಕಥಾವಳಿ :** ಇದರಲ್ಲಿ ಇಪ್ಪತ್ತೊಂದು ಪುಟ್ಟ ಕಥೆಗಳಿವೆ. ಒಂದೊಂದು ಕಥೆಯ ಕೆಳಗೂ ಅದರಿಂದ ತಿಳಿದುಕೊಳ್ಳಬೇಕಾದ ತತ್ತ್ವವನ್ನು ಬಹು ಸರಳವಾದ ಭಾಷೆಯಲ್ಲಿ ವಿವರಿಸಿದೆ. ವೇದಾಂತವಿಷಯದ ಎಷ್ಟೋ ತಪ್ಪು ತಿಳುವಳಿಕೆಗಳು ಇದನ್ನು ಓದುವದರಿಂದ ಮಾಯವಾಗುವವು. ಮೊದಲನೆಯ ಸಲಕ್ಕೆ ವೇದಾಂತವನ್ನು ಓದುವವರಿಗೆ ತಕ್ಕದ್ದಾಗಿದೆ. **ನಾಲ್ಕನೆಯ ಮುದ್ರಣ, ೧೯೯೫. ಪುಟಗಳು ಕ್ರೌನ್ ೪+೫೬**

೨. **ವಿಲಕ್ಷಣಮೌನಿ :** ಅರುಣಗಿರಿಯವರು ಬರೆದಿರುವ ಸಂಭಾಷಣ ರೂಪವಾದ ಕಥೆಯಿದು. ಇದರಲ್ಲಿ ಭೋಜರಾಜನಿಗೆ ಒಬ್ಬ ಮುನಿವರ್ಯರು ಸೂತ್ರರೂಪವಾಗಿ ಉಪದೇಶಿಸಿದ ದಶೋಪನಿಷತ್ತುಗಳ ಮಹಾತಾತ್ಪರ್ಯವನ್ನು ವಿವರಿಸಿದೆ. ಉಪನಿಷತ್ತುಗಳೆಲ್ಲವೂ ಬ್ರಹ್ಮಾತ್ಮೈಕತ್ವಪರವೆಂಬುದನ್ನು ಮನಗಾಣಿಸುವ ಗ್ರಂಥವಿದು.
**ನಾಲ್ಕನೆಯ ಮುದ್ರಣ, ೧೯೯೫. ಪು. ಕ್ರೌನ್ ೪+೨೦**

೩. **ಉಪನಿಷತ್ತುಗಳ ಮೊದಲನೆಯ ಪರಿಚಯ :** ಉಪನಿಷತ್ತುಗಳಲ್ಲಿರುವ ಕಥಾಸಂದರ್ಭಗಳು, ದೃಷ್ಟಾಂತಗಳು, ಸಿದ್ಧಾಂತ, ಸಾಧನ - ಇಷ್ಟು ವಿಷಯಗಳನ್ನು ಲಲಿತವಾದ ಶೈಲಿಯಲ್ಲಿ ಬರೆದಿದೆ. ಉಪನಿಷತ್ತುಗಳಲ್ಲಿರುವ ವಿಚಾರಕ್ರಮವನ್ನು ಭಾಷ್ಯಸಂಪ್ರದಾಯಾನುಸಾರವಾಗಿ ವಿಚಾರ ಮಾಡಬೇಕೆಂಬ ಜಿಜ್ಞಾಸುಗಳಿಗೆ ಉತ್ತಮಪುಸ್ತಕವಿದು. ಸ್ತ್ರೀಯರಿಗೂ ಮಕ್ಕಳಿಗೂ ಸಹ ತಿಳಿಯುವಂತಿದೆ. **ಮೂ. ಮುದ್ರಣ, ೧೯೯೫. ಪುಟಗಳು ಕ್ರೌನ್ ೬+೫೪**

೪. **ಲಕ್ಷಣಶಾಸ್ತ್ರಿ ಉರುಫ್ ಹಸೇನ್ :** ಬಂಗಾಳದಲ್ಲಿ ಲಕ್ಷಣಶಾಸ್ತ್ರಿ ಎಂಬುವನು ತರ್ಕವಿದ್ಯಾನೈಪುಣ್ಯವನ್ನು ಪಡೆದು ವಿದ್ಯಾಮದದಿಂದ ಅನೇಕರನ್ನು ಸೋಲಿಸಿದ ನಿಮಿತ್ತ ಹಸೇನ್ ಎಂಬ ಹೆಸರಿನ ಕುದುರೆಯಾಗಿ ದೇಶಾಂತರಗಳಲ್ಲಿ ಅಲೆದದ್ದೇ ಮುಂತಾದ ವಿಚಿತ್ರ ಘಟನೆಗಳಿಂದ ತುಂಬಿದ ಕಥೆ. ತರ್ಕಶಾಸ್ತ್ರಕ್ಕೂ ವೇದಾಂತಕ್ಕೂ ಇರುವ ತಾರತಮ್ಯವನ್ನು ಮನಗಾಣಿಸುವದು. **ಎರಡನೆಯ ಮುದ್ರಣ, ೧೯೫೭. ಪುಟಗಳು ಕ್ರೌನ್ ೪+೩೬**

೫. **ಸಮುದ್ರಮಥನ:** ದೇವತೆಗಳೂ ರಾಕ್ಷಸರೂ ಕೂಡಿ ಕ್ಷೀರಸಮುದ್ರವನ್ನು ಮಥನ ಮಾಡಿ ಅಮೃತವನ್ನು ಪಡೆದುಕೊಂಡ ಪೌರಾಣಿಕ ಕಥೆಯಿದು. ಸಮಯಕ್ಕೆ ತಕ್ಕಂತೆ ನೀತಿಯನ್ನೂ ಅಧ್ಯಾತ್ಮಶಾಸ್ತ್ರದ ಗುಟ್ಟನ್ನೂ ವಿವರಿಸುತ್ತದೆ. **ಎ. ಮು. ೧೯೮೬. ಪು. ಕ್ರೌನ್ ೪+೭೨**

೬. **ಶಿವಕವಚ :** ಭದ್ರಾಯುವೆಂಬ ರಾಜಕುಮಾರನಿಗೆ ಋಷಭಯೋಗೀಶ್ವರರು ಉಪದೇಶಿಸಿದ ಸ್ತೋತ್ರ. ಭಾವಾರ್ಥ, ವಿವರಣೆ - ಮುಂತಾದವುಗಳೊಡನೆ ಕೂಡಿದೆ.
**ಐದನೆಯ ಮುದ್ರಣ, ೧೯೯೯. ಪುಟಗಳು ಕ್ರೌನ್ ೪+೫೬**

೭. **ಆತ್ಮಬೋಧ :** ಆತ್ಮನು ನಿತ್ಯಶುದ್ಧಬುದ್ಧ ಮುಕ್ತ ಸ್ವಭಾವನೆಂಬುದನ್ನು ಬಗೆ ಬಗೆಯ ಉಪಮಾನಗಳಿಂದ ತಿಳಿಸಿದೆ. **ನಾ. ಮುದ್ರಣ, ೧೯೯೪. ಪು. ಕ್ರೌನ್ ೪+೨೮**